Swabhimani Sahakari
Pages : 46 /12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 19
Issue - 01
January - 2022

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಎಲ್ಲವನ್ನು ಕೊಟ್ಟಿರುವ ;
ಏನ ಬೇಡಲಿ !
ಜಗವನೆನಗೆ ಬಿಟ್ಟಿರುವೆ
ಏಕೆ ಕಾಡಲಿ !
–ಕೆ.ಎಸ್. ನರಸಿಂಹಸ್ವಾಮಿ



2022
ನೂತನ ವರ್ಷದ
ಶುಭಾಶಯಗಳು

1
ಸೌಹಾರ್ದ ಸಹಕಾರಿ ದಿನಾಚರಣೆ



12
ಸ್ವಾಮಿ ವಿವೇಕಾನಂದರ ಜನ್ಮದಿನ/ ರಾಷ್ಟ್ರೀಯ ಯುವದಿನ



14
ಸಂಕ್ರಾಂತಿ



26
ಗಣರಾಜ್ಯೋತ್ಸವ

ಸೌಹಾರ್ದ ಸಹಕಾರಿಗಳ ಸಂಖ್ಯೆ : 5436

ಇ-ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1456



**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**

> ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ನೂತನ ವರ್ಷ 2022 ಹಾಗೂ ಸೌಹಾರ್ದ ಸಹಕಾರಿ ದಿನದ ಸ್ವಾಮಿ ವಿವೇಕಾನಂದ ಜಯಂತಿಯ, ಮಕರ ಸಂಕ್ರಾಂತಿಯ ಮತ್ತು 72ನೇ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳನ್ನು ತಿಳಿಸಲು ಸಂತೋಷವಾಗುತ್ತದೆ. ನೂತನ ವರ್ಷದಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಉತ್ತಮ ಗುಣಮಟ್ಟದಿಂದ ಕಾರ್ಯನಿರ್ವಹಿಸುವಂತಾಗಲಿ ಉತ್ತಮ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಧೃಡ ಸಂಕಲ್ಪದಿಂದ ಕಾರ್ಯನಿರ್ವಹಿಸೋಣ ಎಂಬುದು ಸಂಯುಕ್ತ ಸಹಕಾರಿಯ ಮಹತ್ವಾಕಾಂಕ್ಷೆಯಾಗಿದೆ.

# ಸಂಯುಕ್ತ ಸಹಕಾರಿಯ 20ನೇ ವಾರ್ಷಿಕ ಸಾಮಾನ್ಯ ಸಭೆ : ಸದಸ್ಯರ ಭಾಗವಹಿಸುವಿಕೆ ಅಭಿನಂದನೀಯ. ಸದಸ್ಯರ ಕ್ರಿಯಾಶೀಲತೆ ಮಾದರಿ ಹಾಗೂ ಅನುಕರಣೀಯ. ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟದ ಬೆಳವಣಿಗೆಯ ಕಡೆಗೆ ಗಮನವಿರಲಿ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ನೂತನ ವರ್ಷ 2022 ಹಾಗೂ ಸೌಹಾರ್ದ ಸಹಕಾರಿ ದಿನದ, ಸ್ವಾಮಿ ವಿವೇಕಾನಂದ ಜಯಂತಿಯ, ಮಕರ ಸಂಕ್ರಾಂತಿಯ ಮತ್ತು 72ನೇ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳನ್ನು ತಿಳಿಸಲು ಸಂತೋಷವಾಗುತ್ತದೆ. ನೂತನ ವರ್ಷದಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಉತ್ತಮ ಗುಣಮಟ್ಟದಿಂದ ಕಾರ್ಯನಿರ್ವಹಿಸುವಂತಾಗಲಿ ಉತ್ತಮ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಧೃಡ ಸಂಕಲ್ಪದಿಂದ ಕಾರ್ಯನಿರ್ವಹಿಸೋಣ ಎಂಬುದು ಸಂಯುಕ್ತ ಸಹಕಾರಿಯ ಮಹತ್ವಾಕಾಂಕ್ಷೆಯಾಗಿದೆ.

ದಿನಾಂಕ 23 ಡಿಸೆಂಬರ 2021 ರಂದು ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆ ಸ್ವಂತ ಕಟ್ಟಡದಲ್ಲಿಯೇ ಆನ್‌ಲೈನ್‌ನಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ನಡೆದಿದೆ ಎಂಬುದನ್ನು ತಮಗೆ ತಿಳಿಸಲು ಹೆಮ್ಮೆಯೆನಿಸುತ್ತದೆ. ಸಂಯುಕ್ತ ಸಹಕಾರಿಯ ಮಾನ್ಯ ಸದಸ್ಯರು 20ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಖುದ್ದಾಗಿ ಭಾಗವಹಿಸುವ ವ್ಯವಸ್ಥೆ ಮಾಡಲಾಗಿತ್ತು. ಆದರೆ ಕೋವಿಡ್ ಮಹಾಮಾರಿ ಒಮಿಕ್ರಾನ್ ರೂಪದಲ್ಲಿ ಮತ್ತೆ ತಾಂಡವವಾಡಬಹುದು ಎಂಬ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಕಟ್ಟು ನಿಟ್ಟಾದ ನಿಯಮಗಳನ್ನು ಪಾಲಿಸಲೇಬೇಕು ಎಂದು ಆದೇಶ ನೀಡಿವುದರ ಹಿನ್ನೆಲೆಯಲ್ಲಿ ತಾವುಗಳು ಖುದ್ದಾಗಿ ಈ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಇದಕ್ಕಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗೂ ನಾನು ವೈಯಕ್ತಿಕವಾಗಿ ವಿಷಾಧಿಸುತ್ತೇನೆ.

ಸಂಯುಕ್ತ ಸಹಕಾರಿಯ 20ನೇ ಸಾಮಾನ್ಯ ಸಭೆಯಲ್ಲಿ 2404 ಸದಸ್ಯ ಸಹಕಾರಿಗಳು ಭಾಗವಹಿಸಿ ಕೊನೆಯವರೆವಿಗೂ 1600 ಕ್ಕಿಂತಲೂ ಹೆಚ್ಚು ಜನರು ಉಪಸ್ಥಿತರಾಗಿದ್ದು ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗ್ಗೆ ಕಾರ್ಯಚಟುವಟಿಕೆಗಳ ಬಗ್ಗೆ ಸದಸ್ಯರ ಕ್ರಿಯಾಶೀಲತೆಯನ್ನು ಎತ್ತಿ ತೋರಿಸುತ್ತದೆ. ಸಂಯುಕ್ತ ಸಹಕಾರಿಯ ಚಟುವಟಿಕೆಗಳ ಬಗ್ಗೆ ಸದಸ್ಯ ಸಹಕಾರಿಗಳ ಆಸಕ್ತಿ, ಮಾರ್ಗದರ್ಶನ, ಸಲಹೆ ಹಾಗೂ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಸಾಮಾನ್ಯ ಸಭೆಯ ಅಧಿಕೃತ ವಿಷಯ ಪಟ್ಟಿಯ ನಂತರ ಸದಸ್ಯ ಸಹಕಾರಿಗಳ ಪ್ರತಿನಿಧಿಗಳ ಪ್ರಶ್ನೋತ್ತರಗಳಲ್ಲಿ ಸುಮಾರು 50ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿ ಒಟ್ಟಾರೆ ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ಬೆಳವಣಿಗೆಗೆ ಪೂರಕವಾಗುವ ನಿಟ್ಟಿನಲ್ಲಿ ಗುಣಾತ್ಮಕವಾದ ಸಲಹೆ ಹಾಗೂ ಮಾರ್ಗದರ್ಶನ ನೀಡಿರುವುದನ್ನು ಮತ್ತು ಆಡಳಿತ ಮಂಡಳಿಯ ಕಾರ್ಯವನ್ನು ಶ್ಲಾಘಿಸಿರುವುದನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಎಲ್ಲರಿಗೂ ನನ್ನ ವೈಯಕ್ತಿಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**"ಸಂಯುಕ್ತ ಸಹಕಾರಿಯ ನಡೆ ಗುಣಮಟ್ಟದ ಕಡೆ"** ಎಂಬ ನಿಲುವಿಗೆ ಸಂಯುಕ್ತ ಸಹಕಾರಿಯು ಬದ್ಧವಾಗಿದೆ. ಸೌಹಾರ್ದ ಸಹಕಾರಿಗಳ ನಡೆಯೂ ಗುಣಮಟ್ಟದ ಬೆಳವಣಿಗೆಯ ಕಡೆಗೆ ಇರಲಿ ಎಂದು ಸಂಯುಕ್ತ ಸಹಕಾರಿಯ ಒತ್ತಾಸೆಯಾಗಿದೆ. ದಯವಿಟ್ಟು ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಈ ಕ್ಷೇತ್ರದ ಗುಣಮಟ್ಟದ ಬೆಳವಣಿಗೆಯತ್ತ ತಮ್ಮ ಪ್ರಥಮ ಆದ್ಯತೆ ಇರಲಿ ಎಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ವಿನಂತಿಸುತ್ತೇನೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ
ಗೌರವ ಅಧ್ಯಕ್ಷರು

ಶ್ರೀ ಜಗದೀಶ ಕವಟಗಿಮಠ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ ಪಾಟೀಲ
ಸಂಪಾದಕರು

ಶ್ರೀ ವಿ.ಜಿ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸ ರೋಡ್, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........ 2
ಸಂಪಾದಕೀಯ........ 3
ಜ್ಞಾನ ಜ್ಯೋತಿ........ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು ........ 05–22
ಸೌಹಾರ್ದ ಸಹಕಾರಿಗಳ ಸಮಾಚಾರಗಳು ........ 23–40
**ಲೇಖನಗಳು :**
ಡಿಜಿಟಲ್ ಡೀಟಾಕ್ಸ್ ಈ ಕ್ಷಣದ ತುರ್ತು ಅಗತ್ಯ ........ 41, 43
ಸೌಹಾರ್ದ ಸಹಕಾರ ಸಂಘಗಳ ಕಾಯಿದೆಯಡೆ ಸೌಹಾರ್ದ ಸಹಕಾರಿಗಳ ಉಪನಿಯಮಗಳ ತಿದ್ದುಪಡಿ ........ 42–43
ಯುವ ಭಾರತದ ವಿವೇಕ ಆನಂದ .. 44–44

# ಸಂಪಾದಕೀಯ

## ಲೆಕ್ಕ ಪರಿಶೋಧನಾ ವರದಿಗಳ ಪರಿಶೀಲನೆ : ನ್ಯೂನತೆಗಳ ಸರಿಪಡಿಸಿ ಗುಣಮಟ್ಟ ಸುಧಾರಣೆಗೆ ಕ್ರಮ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಸುಧಾರಣೆಯಲ್ಲಿ ಸೌಹಾರ್ದ ಸಹಕಾರಿಗಳ ಲೆಕ್ಕ ಪರಿಶೋಧನೆಯ ವರದಿಗಳನ್ನು ಪರಿಶೀಲನೆ ಮಾಡಿಸಿದ ನಂತರ ಅವುಗಳಲ್ಲಿನ ನ್ಯೂನತೆಗಳನ್ನು ಸರಿಪಡಿಸಿಕೊಂಡು ಗುಣಮಟ್ಟ ಸುಧಾರಣೆಯತ್ತ ಹೆಜ್ಜೆಹಾಕಿಸುವುದು ಸಂಯುಕ್ತ ಸಹಕಾರಿಯ ಮಹತ್ವದ ಕಾರ್ಯಗಳಲ್ಲಿ ಒಂದಾಗಿದೆ. ಲೆಕ್ಕ ಪರಿಶೋಧನಾ ವರಿದಿಗಳ ಪರಿಶೀಲನೆಯನ್ನು ಸಂಯುಕ್ತ ಸಹಕಾರಿಯ ಮಾರ್ಗದರ್ಶಿ ಸೂಚನೆಗಳ ಪ್ರಕಾರ ಸಂಯುಕ್ತ ಸಹಕಾರಿಯ ಹಿರಿಯ ಹಾಗೂ ನುರಿತ ಅಧಿಕಾರಿಗಳು ಮಾಡುತ್ತಾರೆ. ನಂತರ ಪರಿಶೀಲನಾಧಿಕಾ–ರಿಗಳು ಲೆಕ್ಕ ಪರಿಶೋಧನಾ ವರದಿಯಲ್ಲಿ ನಮೂದಿಸಿದ ನ್ಯೂನ್ಯತೆಗಳ ಬಗ್ಗೆ ಸೌಹಾರ್ದ ಸಹಕಾರಿಗಳ ಗಮನಕ್ಕೆ ತಂದು ಅವುಗಳನ್ನು ಸರಿಪಡಿಸಿಕೊಳ್ಳುವಂತೆ ಸೂಚನೆ ನೀಡುವುದು ಹಾಗೂ ಅವುಗಳ ಅನುಪಾಲನೆಗಳನ್ನು ಮಾಡಿರುವ ಬಗ್ಗೆ ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ನಿರ್ವಹಣೆಯ ದೃಷ್ಠಿಯಿಂದ ಅವುಗಳ ಕಡೆಗೆ ಹರಿಸುವುದು ಮಹತ್ವದ ಕಾರ್ಯವೆನಿಸಿದೆ.

ರಾಜ್ಯದಲ್ಲಿ ಒಟ್ಟು 5436 ಸೌಹಾರ್ದ ಸಹಕಾರಿಗಳು, ಅವುಗಳಲ್ಲಿ 4428 ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳು ಈ ಎಲ್ಲಾ ಸಹಕಾರಿಗಳ ಲೆಕ್ಕ ಪರಿಶೋಧನೆ ಆಗಷ್ಟ್ 31ರ ಒಳಗಾಗಿ ಮುಗಿಯಬೇಕಿತ್ತು. ಆದರೆ ಕೋವಿಡ್ ನಿಯಮಗಳ ಪಾಲನೆ ದೃಷ್ಠಿಯಿಂದ ಈ ದಿನಾಂಕವನ್ನು ಸರಕಾರವು 31.10.2021ರವರೆಗೆ ವಿಸ್ತರಿಸಿ ಆದೇಶ ನೀಡಲಾಗಿತ್ತು. ನಂತರದಲ್ಲಿ ಈ ಎಲ್ಲಾ ಸೌಹಾರ್ದ ಸಹಕಾರಿಗಳ ಲೆಕ್ಕ ಪರಿಶೋಧನೆಯಾಗಿದ್ದು ಇದುವರೆಗೆ ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿಗಳಲ್ಲಿ 2471 ವರದಿಗಳು ಬಂದಿರುವುದು ಅವುಗಳ ಪರಿಶೀಲನಾಕಾರ್ಯದ ಬಗ್ಗೆ ಸಂಯುಕ್ತ ಸಹಕಾರಿಯು ಚಿಂತನೆ ನಡೆಸಿರುವುದು ಸ್ವಾಗತಾರ್ಯ.

ಸೌಹಾರ್ದ ಸಹಕಾರಿಗಳ ಲೆಕ್ಕ ಪರಿಶೋಧನೆ ಒಂದು ಸಹಕಾರಿಯ ಲಾಭ ಅಥವಾ ಹಾನಿ ತಿಳಿಯುವ ಉದ್ದೇಶದೊಂದಿಗೆ ಸಹಕಾರಿಯ ಆರ್ಥಿಕ ವ್ಯವಸ್ಥೆಯನ್ನು ತಿಳಿಯುವುದಾಗಿದೆ. ಸಹಕಾರಿಯ ಮಾಲೀಕರು ಸದಸ್ಯರು, ಸದಸ್ಯರಿಗೆ ತಮ್ಮ ಸಹಕಾರಿಯ ಲೆಕ್ಕಪತ್ರಗಳನ್ನು ಮತ್ತು ತಮ್ಮ ಸಹಕಾರಿಯ ಆರ್ಥಿಕ ತಃಖ್ತೆಗಳನ್ನು ಅಧ್ಯಯನ ಮಾಡುವ ಹಕ್ಕು ಇದೆ. ತಮ್ಮ ಸಹಕಾರಿಯ ಆರ್ಥಿಕ ಶಿಸ್ತು ಅಧ್ಯಯನ ಮಾಡಲು ಅವಕಾಶ ಒದಗಿಸುವುದು ಅಗತ್ಯ. ಹೀಗಾಗಿ ಈ ಕೆಲಸಗಳು ಪ್ರಾಮಾಣಿಕ ಹಾಗೂ ದಕ್ಷತೆಯಿಂದ ನಿರ್ವಹಿಸಲು ಸಾಧ್ಯವಾದಲ್ಲಿ ಸೌಹಾರ್ದ ಸಹಕಾರಿಯ ವಿಶ್ವಾಸಾರ್ಹತೆ ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತದೆ.

ಲೆಕ್ಕ ಪರಿಶೋಧನಾ ವರದಿ ಪರಿಶೀಲನೆಯಾದ ನಂತರ ಅವುಗಳ ನ್ಯೂನತೆಗಳನ್ನು ಸಂಬಂಧಿಸಿದ ಸೌಹಾರ್ದ ಸಹಕಾರಿಗಳಿಗೆ ಕಳುಹಿಸಿಕೊಡುವ ಕಾರ್ಯ ವೇಗವಾಗಿ ಆಗಬೇಕು. ಸೌಹಾರ್ದ ಸಹಕಾರಿಗಳಿಗೆ ನ್ಯೂನ್ಯತೆಗಳಿಗೆ ಸರಿಪಡಿಸಿಕೊಳ್ಳುವ ಅವಕಾಶಕೊಡುವುದರ ಜೊತೆಗೆ ಸರಿಯಾದ ಮಾರ್ಗದರ್ಶನವನ್ನು ಸಂಯುಕ್ತ ಸಹಕಾರಿಯು ಮಾಡುವುದು ಅಗತ್ಯ. ಸಂಯುಕ್ತ ಸಹಕಾರಿಯ ಈ ಕಾರ್ಯದಿಂದಾಗಿ ಸೌಹಾರ್ದ ಸಹಕಾರಿಗಳ ಗುಣಾತ್ಮಕ ಕಾರ್ಯನಿರ್ವಹಣೆ ಸಾಧ್ಯವಾಗುತ್ತದೆ ಎಂದು ಆಶಿಸಬಹುದಾಗಿದೆ.

ಶ್ರೇಣಿ 69



## ಜ್ಞಾನ ಜ್ಯೋತಿ

ಎಂ. ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

## "ಸೋಲಿನಿಂದೆದೆಗುಂದದೆ ಮರಮರಳಿ ಪ್ರಯತ್ನಿಸು"

ಅಣುರೇಣು ತೃಣಕಾಷ್ಟಗಳಲ್ಲಿ ತನ್ನ ಉತ್ಪತ್ತಿಶಕ್ತಿಯನ್ನು ಅಡಕಗೊಳಿಸಕೊಂಡಿರುವ ಏಕಮೇವ ದ್ವಿತೀಯನಾದ ಪರಮಾತ್ಮನು ಈ ಸೃಷ್ಠಿಯನ್ನು ನಿರ್ಮಿಸಿ, ಜನರ ಬಾಲಿನಲ್ಲಿ ಸೋಲು ಗೆಲವುಗಳೆಂಬ ಹಂತಗಳನ್ನು ಅಳವಡಿಸಿ, ಸೋತವನು ಎದೆಗುಂದದೇ ಮರಮರಳಿ ಶ್ರದ್ಧೆಯಿಟ್ಟು ಶ್ರಮಿಸಿದಲ್ಲಿ ವಿಫಲತೆಯನ್ನು ತೊಡೆದು ಹಾಕಿ ಸಫಲತೆಯನ್ನು ಪಡೆಯುತ್ತಾನೆಂಬ ಅಂಶವನ್ನು ಆಧ್ಯಾತ್ಮ ಕವಿ ಡಿ.ವಿ.ಜಿಯವರ ಪೌರಾಣಿಕ ಉದಾಹರಣೆ ಮೂಲಕ ಈ ಕೆಳಗಿನ ಪದ್ಯದಲ್ಲಿ ಬಹು ಮನೋಜ್ಞನಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ.

ಕೇಂದ್ರೀಕೃತ ಮನಸ್ಸಿಗೆ ಮಿತಿಯಿಲ್ಲದ ಶಕ್ತಿಯಿದೆ (There Exist limitless Reservoir of power in the focused mind) ಎಂಬ ಧೃಡೀಕೃತ ಅಂಶವನ್ನು ಮನಃಶಾಸ್ತ್ರಜ್ಞ ಎಮರ್ಸನ್ ತನ್ನ "ಸುಪ್ತಮನಸ್ಸಿನ ಮಹಾಧ್ಭುತಗಳು" ಎಂಬ ಪುಸ್ತಕದಲ್ಲಿ ದಾಖಲಿಸಿರುತ್ತಾರೆ. ಪದ್ಯಹೀಗಿದೆ.

ಏಸು ಸಲ ತಪವಗೈದೇಸು ಬನ್ನವನಾಂತು
ಕೌಶಿಕಂ ಬ್ರಹ್ಮರ್ಷಿ ಪದಕರ್ಹನದಾನ
ಘೌಸಿಪಡುತಿನ್ನೊಮ್ಮೆ ಮತ್ತೊಮ್ಮೆ ಮರಮರಳಿ
ಲೇಸಾಗಿಸಾತ್ಮವನು ಮಂಕುತಿಮ್ಮ ॥ 699 ॥

ಪದ್ಯದಲ್ಲಿ ವಿಶ್ವವಿಖ್ಯಾತ "ಗಾಯಿತ್ರಿ ಮಂತ್ರ" ದ ರಚನೆಕಾರ ಮಹರ್ಷಿ ವಿಶ್ವಾಮಿತ್ರರನ್ನು ಉದಾಹರಿಸಿ ಕ್ಷತ್ರಿಯರಾಗಿದ್ದ ವಿಶ್ವಮಿತ್ರು ಪುನರಾವರ್ತಿತ ಪ್ರಯತ್ನಗಳ ಮೂಲಕ ಸೋಲುಗೆಲುವುಗಳ ಸರಪಣಿಯಲ್ಲಿ ಹಾದು ಬ್ರಹ್ಮರ್ಷಿ ಪದವಿಯನ್ನು ಪಡೆದು ಎದುರಾಳಿ ವಶಿಷ್ಠರಿಂದ ಅಭಿನಂದನೆ ಪಡೆದ ಮಹತ್ಸಾಧಕನಾಗಿದ್ದ ಯಶಸ್ಸಿನ ಹಿಂದೆ "ಮರಳೀಯತ್ನವ ಮಾಡು" ತತ್ವೋಪದೇಶದ ಪಾಠವನ್ನು ನೀಡಿದ್ದಾರೆ. ಯಷಿಯು ಒಂದೇ ಸಾರಿ ಯಶಸ್ಸಿನ ಶಿಖರವನ್ನೇರಲಿಲ್ಲ. ದಿನಬೆಳಗಾಗುವುದರೊಳಗೆ ಸಫಲತೆಯನ್ನು ಮುಟ್ಟಲಿಲ್ಲ. ದೇವತೆಗಳ ಕುತಂತ್ರದಿಂದ ಅಪ್ಸರೆ ಮೇನಕೆ ರಂಬೆಯರುಗಳಿಂದ ತಪೋಭಂಗಕ್ಕೊಳಗಾಗಿ ಮರಮರಳಿ ಮನಸ್ಸನ್ನು ಗಟ್ಟಿಗೊಳಿಸಿಕೊಂಡು ಕಾರಣ ಯಶಸ್ಸಿನ ನಿಲ್ದಾಣವನ್ನು ತಲುಪುತ್ತಾರೆ.

ಮಗುವೊಂದು ಚಿಕ್ಕಂದಿನಲ್ಲಿ ನಡೆಯಲು ಪ್ರಾರಂಭಿಸಿದಾಗ ಎಡವಿಬಿದ್ದದ್ದನ್ನು ನೆನಪಿಸಿಕೊಂಡು ಪ್ರಯತ್ನವನ್ನೇ ಬಿಟ್ಟರೆ ಮುಂದೆ ನಡೆಯುವುದನ್ನೇ ಕಲಿಯಲಾರದವನಾಗುತ್ತಾನೆ. ಸೋಲು ಯಶಸ್ಸಿನ ಮೆಟ್ಟಿಲು (Failure is a Stepping stone to success) ಎಂಬ ಪಾಠವನ್ನು ಮನದಲ್ಲಿರಿಸಿಕೊಂಡು ದೈವಶ್ರದ್ಧೆಯಿಂದ ಪ್ರಯತ್ನಿಸಿದಲ್ಲಿ ಯಶಸ್ಸಿನ ಶಿಖಿರ ಸಮಾಪಿಸುತ್ತದೆಯೆಂಬುದು ದೈವಾಂಶ ಸಂಭೂತರ ಅಂಬೋಣ.

ಮನಸ್ಸನ್ನು ತಿದ್ದಿತಿದ್ದಿ ಪ್ರಯತ್ನಶೀಲನಾಗಿರುವ ಆತ್ಮೋದ್ಧಾರಿ ಸಾಧಕವನ್ನು ಯಶಸ್ಸು ಕೈಬೀಸಿ ಕರೆಯುತ್ತದೆಯೆಂಬುದು ಜ್ಞಾನಿಗಳ ನುಡಿಯಾಗಿದೆ. ಅಂಥಹ ಪ್ರಯತ್ನಶೀಲ ವ್ಯಕ್ತಿಗೆ ನೈಸರ್ಗಿಕ ದೈವೀಶಕ್ತಿಗಳ ಬೆಂಬಲಿಸಿ ಯಶಸ್ಸನ್ನು ನೀಡುತ್ತದೆಯೆಂಬುದೂ ಗುರುಹಿರಿಯರ ಅನುಭವದ ಮಾತು. ಭಾರೀ ಹಿನ್ನೆಡೆಯಲ್ಲಿದ್ದವನು ತನ್ನ ಅವಿರತ ಪ್ರಯತ್ನದ ಮೂಲಕ ಮುನ್ನಡೆಗೆ ಬಂದಿರುವುದು ಪ್ರಯತ್ನಶೀಲತೆಯ ಸಂಕೇತವೆಂದಿರುತ್ತಾರೆ. ಇದರನ್ವಯ ಪ್ರತಿ ಸಾಧಕನೂ ತನ್ನದೇ ಆದ ಪೂರ್ವೆತಿಹಾಸವನ್ನು ಹೊಂದಿರುತ್ತಾನೆ ಹಾಗೂ ಪ್ರತಿ ಪಾಪಿಯೂ ಸಹ ಉತ್ತಮ ಭವಿಷ್ಯವನ್ನು (Each Saint had a past and each sinner has a bright future) ಹೊಂದಿರುತ್ತಾನೆನ್ನುತ್ತದೆ ಸಾಧನಾ ದಿನಚರಿ. "ಸೋಮಾರಿಯೋರ್ವನಿಗೆ ಕುಳಿತುಕೊಂಡಿರುವುದೇ ಕೆಲಸವೆಂದು ಪರಿಗಣೀತವಾದರೆ ಕಾರ್ಯಪ್ರವೃತ್ತನಿಗೆ ಕೆಲಸ ಮಾಡುವುದೇ ವಿರಾಮ" ವೆಂಬ ಮಾತೂ ಇದೆ.

ತತ್ಕಾರಣ "ಕೇಂದ್ರೀಕರಣ ವೈಫಲ್ಯ" (Concentration lapse) ಕ್ಕೊಳಗಾಗದೇ ಏಕದಿಕ್ಕಿನಲ್ಲಿ ಅವಿರತವಾಗಿ ಪ್ರಯತ್ನಿಸಿದಲ್ಲಿ ಯಶಸ್ಸು ಕಟ್ಟಿಟ್ಟಬುತ್ತಿಯೆಂಬುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 20,226 ಆಗಿರುತ್ತದೆ. ಇವುಗಳ ಪೈಕಿ 11,040 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 9,186

**ಡಿಸೆಂಬರ್ ತಿಂಗಳ ಪ್ರಕರಣಗಳು :** ಒಟ್ಟು ದಾವಾಪ್ರಕರಣ 728, ಒಟ್ಟು ಇತ್ಯರ್ಥಗೊಂಡ ಪ್ರಕರಣಗಳು 671.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 3724 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 491 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 170 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 3233 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 104 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 477 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 441 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಡಿಸೆಂಬರ್ ತಿಂಗಳಿನಲ್ಲಿ 186 ಪ್ರಕರಣ ದಾಖಲಾಗಿರುತ್ತವೆ.

# ಸಂಯುಕ್ತ ಸಹಕಾರಿಯ 2022ರ ಕ್ಯಾಲೆಂಡರ್ ಬಿಡುಗಡೆ





**ಬೆಂಗಳೂರು :** ದಿನಾಂಕ 30.12.2021 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 2022ರ ಕ್ಯಾಲೆಂಡರ್ ಹಾಗೂ ಟೇಬಲ್ ಕ್ಯಾಲೆಂಡರಗಳನ್ನು ಸಹಕಾರ ಸಚಿವ ಶ್ರೀ ಎಸ್.ಟಿ ಸೋಮಶೇಖರರವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಅಪೆಕ್ಸ ಬ್ಯಾಂಕಿನ ಅಧ್ಯಕ್ಷರಾದ ಹಾಗೂ ಶಾಸಕರಾದ ಶ್ರೀ ಬೆಳ್ಳಿ ಪ್ರಕಾಶ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಂ.ಎನ್. ರಾಜೇಂದ್ರ ಕುಮಾರ, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಸಹಕಾರ ಇಲಾಖೆಯ ಅಪರ ನಿಬಂಧಕರಾದ ಶ್ರೀ ದೇವರಾಜ್, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ವಿಳಾಸ ಬದಲಾವಣೆ

ಸಂಯುಕ್ತ ಸಹಕಾರಿಯ ಬೆಂಗಳೂರಿನ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ ಮತ್ತು ದಾವಾ ಪಂಚಾಯತ್ ನ್ಯಾಯಾಲಯ ಕಛೇರಿ ಇವೆಲ್ಲವುಗಳನ್ನು ಇದೇ ಜನವರಿ ತಿಂಗಳಿನಲ್ಲಿ ಸ್ಥಳಾಂತರಿಸಲಾಗುತ್ತಿದೆ.

ರಾಜ್ಯದ ಸೌಹಾರ್ದ ಸಹಕಾರಿಗಳು ಹಾಗೂ ಸಂಬಂಧಿಸಿದ ಎಲ್ಲಾ ಸಹಕಾರಿಗಳು ಮುಂಬರುವ ದಿನಗಳಲ್ಲಿ ತಮ್ಮ ಪತ್ರದ ವ್ಯವಹಾರಗಳನ್ನು ಈ ಕೆಳಕಂಡ ವಿಳಾಸಕ್ಕೆ ಮಾಡಬೇಕಾಗಿ ಕೋರಿದೆ. ನೂತನ ವಿಳಾಸ ಈ ಕೆಳಗಿನಂತ್ತಿದೆ.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

**"ಸೌಹಾರ್ದ ಸಹಕಾರಿ ಸೌಧ" 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸ ರೋಡ್, ಮಲ್ಲೇಶ್ವರಂ, ಬೆಂಗಳೂರು – 560055**

ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ದೂರವಾಣಿ ಸಂಖ್ಯೆಗಳು ವರ್ಗಾವಣೆ ಹಂತದಲ್ಲಿರುವುದರಿಂದ ಸೌಹಾರ್ದ ಸಹಕಾರಿಗಳಿಗೆ ಕೇಂದ್ರ ಕಛೇರಿಯ ಅಧಿಕಾರಿಗಳನ್ನು ಸಂಪರ್ಕಿಸಲು ತೊಂದರೆಯಾಗಬಹುದು. ಆದ್ದರಿಂದ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಅಧಿಕಾರಿಗಳ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಲು ಕೋರಿದೆ.

| ಹೆಸರು | ಹುದ್ದೆ | ವಿಭಾಗ | ದೂರವಾಣಿ ಸಂಖ್ಯೆ |
|---|---|---|---|
| ಶ್ರೀ ಶರಣಗೌಡ ಜಿ. ಪಾಟೀಲ | ವ್ಯವಸ್ಥಾಪಕ ನಿರ್ದೇಶಕರು | – | 8884466703 |
| ಶ್ರೀ ರಘುನಂದನ್ ಕೆ | ಉಪಪ್ರಧಾನ ವ್ಯವಸ್ಥಾಪಕರು | ಆಡಳಿತ ಮತ್ತು ಸ್ಥಾಪನಾ ವಿಭಾಗ | 8884466707 |
| ಶ್ರೀಮತಿ ಶೋಭಾ ಆರ್. | ಸಹಾಯಕ ಪ್ರಧಾನ ವ್ಯವಸ್ಥಾಪಕರು | ಹಣಕಾಸು ವಿಭಾಗ | 8884466709 |
| ಶ್ರೀ ವಿ.ಜೆ ಕಾರಕೂನ್ | ವ್ಯವಸ್ಥಾಪಕರು | ತರಬೇತಿ ವಿಭಾಗ | 8884466710 |
| ಶ್ರೀ ಪಾಲ್‌ರಾಜ್ ಎ | ವ್ಯವಸ್ಥಾಪಕರು | ಸಿಬ್ಬಂದಿ & ಸ್ಥಾಪನಾ ವಿಭಾಗ | 8884466718 |
| ಶ್ರೀ ರಾಜೇಂದ್ರರಾವ್ ಶಿಂಧೆ ಹೆಚ್. | ವ್ಯವಸ್ಥಾಪಕರು | ಸೇವಾ ವಿಭಾಗ | 8884466721 |
| ಶ್ರೀ ಮಹಾಂತಪ್ಪ ಎಸ್.ಎಂ | ವ್ಯವಸ್ಥಾಪಕರು | ಕಾನೂನು ವಿಭಾಗ | 9513566602 |
| ಶ್ರೀಮತಿ ಕವಿತಾ ಆರ್. | ಕಿರಿಯ ವ್ಯವಸ್ಥಾಪಕರು | ತರಬೇತಿ ವಿಭಾಗ | 8884466722 |

## ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್. ಆರ್. ಉಮಾಶಂಕರ ಭೇಟಿ



**ಬೆಂಗಳೂರು :** ದಿನಾಂಕ 04.01.2022 ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್ ಆರ್ ಉಮಾಶಂಕರ್ ಇವರನ್ನು ಭೇಟಿ ಮಾಡಿ ಸಂಯುಕ್ತ ಸಹಕಾರಿಯ ಕ್ಯಾಲೆಂಡರ್ ನೀಡಿದರು. ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಉಪಾಧ್ಯಕ್ಷರು, ಯು.ಕೆ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಮೋದ್ ಹೆಗಡೆ ಯವರು ಉಪಸ್ಥಿತರಿದ್ದರು.

## ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವರವರಿಗೆ ವೇದಿಕ್ ವೆಲ್ನೆಸ್ ಯೂನಿವರ್ಸಿಟಿಯವರಿಂದ ಗೌರವ ಡಾಕ್ಟರೇಟ್

### ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ, ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ವತಿಯಿಂದ ಹಾಗೂ ಸಿಬ್ಬಂದಿಯವರಿಂದ ಶ್ರೀಯುತರಿಗೆ ಅಭಿನಂದನೆ.



ರಾಜ್ಯದ ಹಿರಿಯ ಸಹಕಾರಿಗಳು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸಂಯುಕ್ತ ಸಹಕಾರಿಯ ಹಿರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ ರವರಿಗೆ ವೇದಿಕ್ ವೆಲ್ನೆಸ್ ಯೂನಿವರ್ಸಿಟಿಯವರಿಂದ ಗೌರವ ಡಾಕ್ಟರೇಟ್ ಪ್ರಧಾನವಾಗಿರುವುದಕ್ಕೆ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ, ಸಂಯುಕ್ತ ಸಹಕಾರಿಯ ಪರವಾಗಿ ಹಾಗೂ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರ ಪರವಾಗಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ. ಹೆಚ್.ಕೃಷ್ಣಾರೆಡ್ಡಿಯವರು ಹಾಗೂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಇವರು ಹೃದಯ ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

## ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯ ನೂತನ ಕಟ್ಟಡ "ಸೌಹಾರ್ದ ಸಹಕಾರಿ ಸೌಧ" ದಲ್ಲಿ ಪೂಜಾ ಕಾರ್ಯಕ್ರಮ

**ಬೆಂಗಳೂರು :** ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ನೇತೃತ್ವ ವಹಿಸಿರುವ ಸೌಹಾರ್ದ ಸಹಕಾರಿಗಳ ಮಾತೃ ಸಂಸ್ಥೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರಿನ ಮಲ್ಲೇಶ್ವರಂನಲ್ಲಿ ತನ್ನದೇ ಆದ ಸ್ವಂತ ಕಟ್ಟಡ **"ಸೌಹಾರ್ದ ಸಹಕಾರಿ ಸೌಧ"** ನಿರ್ಮಾಣವನ್ನು ಮಾಡಿದೆ. ಇದೇ ದಿನಾಂಕ 21 ಹಾಗೂ 22 ಡಿಸೆಂಬರ 2021ರಂದು ಈ ಕಟ್ಟಡದಲ್ಲಿ ದಿನಾಂಕ 21 ರಂದು ಸಂಜೆ 6.00 ಘಂಟೆಯಿಂದ ವಾಸ್ತು ಹೋಮ, ರಾಕ್ಷೋಘ್ನ ಹೋಮಗಳನ್ನು ಹಾಗು ಮರುದಿನ ಬೆಳಿಗ್ಗೆ 7–00 ಘಂಟೆಗೆ ಗೋ ಪೂಜೆ, ಕಟ್ಟಡದಲ್ಲಿ ಪ್ರವೇಶಿಸುವುದು, ಹಾಲು ಉಕ್ಕಿಸುವುದು ನಂತರ 9–00 ಘಂಟೆಯಿಂದ 11–30 ರ ವರೆಗೆ ಗಣಹೋಮ ಹಾಗೂ ನವಗ್ರಹ ಹೋಮಗಳನ್ನು ನೆರವೇರಿಸಲಾಯಿತು. ಹೋಮ ಹವನಾದಿ ಧಾರ್ಮಿಕ ಕಾರ್ಯಗಳನ್ನು ಪುರೋಹಿತರಾದ ಶ್ರೀ ವಿದ್ಯಾಶಂಕರ ಹಾಗೂ ಅವರ ಸಂಗಡಿಗರು ನಡೆಸಿಕೊಟ್ಟರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಅರುಣಾರವರ ನೇತೃತ್ವದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಎಲ್ಲ ಸದಸ್ಯರು ಸಕ್ರೀಯವಾಗಿ ಭಾಗವಹಿಸುವುದರೊಂದಿಗೆ ಸಂಯುಕ್ತ ಸಹಕಾರಿಯ ಹಿತೈಸಿಗಳು ಅನೇಕ ಸಹಕಾರಿ ಗಣ್ಯರು ಅಧಿಕಾರಿಗಳು ಭಾಗವಹಿಸಿ ಶುಭ ಕೋರಿದರು.

ಸಹಕಾರ ಸಂಘಗಳ ನಿಬಂಧಕರಾದ ಶ್ರೀ ಎಸ್. ಜಿಯಾ ಉಲ್ಲರವರು, ಅಪರ ನಿಬಂಧಕರಾದ ಶ್ರೀ ನವೀನರವರು, ಜಂಟಿ ನಿಬಂಧಕರಾದ ಶ್ರೀ ಅಶ್ವತ್‌ನಾರಾಯಣರವರು, ಶ್ರೀ ಪ್ರಸಾದ ರೆಡ್ಡಿಯವರು, ಉಪನಿಬಂಧಕರಾದ

ಶ್ರೀ ಎಸ್. ಜೆ ಮಂಜುನಾಥಸಿಂಗರವರು, ಶ್ರೀಮತಿ ಹೆಚ್.ವಿ ಸಂಧ್ಯಾರವರು, ಸಂಯುಕ್ತ ಸಹಕಾರಿಯ ದಾವಾ ಪಂಚಾಯಿತಿ ನ್ಯಾಯಾಲಯದ ಪೀಠಾಧಿಕಾರಿ ಶ್ರೀ ಶಶಿಧರರವರು, ಸಹಾಯಕ ನಿಬಂಧಕರಾದ ಶ್ರೀ ವಿ.ಪಿ ಪ್ರೇಮಾನಂದ, ಶ್ರೀ ಎಮ್.ಪಿ.ಮಂಜುನಾಥ ಹಾಗೂ ಇನ್ನು ಅನೇಕ ಸಹಕಾರಿ ಇಲಾಖೆಯ ಹಲವು ಅಧಿಕಾರಿಗಳು ಸೌಹಾರ್ದ ಸಹಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಯುಕ್ತ ಸಹಕಾರಿಯ 20 ವರ್ಷಗಳ ಸಾಧನೆಗೆ ಮೆಚ್ಚಿಗೆ ಸೂಚಿಸಿದರು. ಈ ಅಧಿಕಾರಿಗಳನ್ನು ಗೌರವಿಸಲಾಯಿತು.

ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರುಗಳಾದ ಶ್ರೀ ಮನೋಹರ ಮಸ್ಕಿಯವರಿಗೆ, ಶ್ರೀ ವಿಶ್ವನಾಥ ಹಿರೇಮಠರವರಿಗೆ, ಶ್ರೀ ಗುರುನಾಥ ಜಾಂತಿಕರರವರಿಗೆ ಶ್ರೀ ಹೆಚ್. ವಿ. ರಾಜೀವರವರಿಗೆ (ಶ್ರೀ ಎಸ್.ಆರ್. ಸತೀಶ್ಚಂದ್ರರವರು ಕಾರಣಾಂತರದಿಂದ ಬಂದಿರಲಿಲ್ಲ) ಮಾಜಿ ವ್ಯವಸ್ಥಾಪಕ ನಿರ್ದೇಶಕರುಗಳಾದ ಶ್ರೀ ಎಮ್. ವೆಂಕಟರೆಡ್ಡಿ ನಿವೃತ್ತ ಅಪರ ನಿಬಂಧಕರು, ಸಂಯುಕ್ತ ಸಹಕಾರಿಯ ಪ್ರಥಮ ವ್ಯವಸ್ಥಾಪಕ ನಿರ್ದೇಶಕರು, ಶ್ರೀ ಸಚಿನ ಪಾಟೀಲ್, ಶ್ರೀ ನಾರಾಯಣ ಹೆಗಡೆ, ಶ್ರೀ ಶಿವಕುಮಾರ (ಶ್ರೀ ಅನೂಪ ದೇಶಪಾಂಡೆಯವರು ಕಾರಣಾಂತರದಿಂದ ಬಂದಿರಲಿಲ್ಲ) ಹಾಗೂ ಹಾಲಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್‌ರವರನ್ನು ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರುಗಳನ್ನು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಸಹಕರಿಸಿದ ಅಧಿಕಾರಿಗಳನ್ನು ಗೌರವಿಸಲಾಯಿತು.

ಈ ಕಾರ್ಯಕ್ರಮ ಸಹಕಾರಿಗಳ ಸಮ್ಮುಖದಲ್ಲಿ ನಡೆಯಬೇಕೆಂದು ಆಡಳಿತ ಮಂಡಳಿಯ ಅಪೇಕ್ಷೆಯಾಗಿದ್ದರೂ ಸಹ ಕೋರೊನಾ 3ನೇ ಅಲೆಯ ಪ್ರಭಾವದಿಂದ ಸರಕಾರದ ಆದೇಶದ ಹಿನ್ನೆಲೆಯಲ್ಲಿ ನಡೆಸಲಾಗಲಿಲ್ಲ. ಅದಕ್ಕಾಗಿ ವಿಷಾಧಿಸುತ್ತೇವೆ.

## ಸಂಯುಕ್ತ ಸಹಕಾರಿಯ ನೂತನ ಕೇಂದ್ರ ಕಛೇರಿಯ ಪೂಜಾ ಕಾರ್ಯಕ್ರಮ



ಗೋ ಪೂಜೆ



ಕಟ್ಟಡ ಪ್ರವೇಶ



ನೂತನ ಕಟ್ಟಡದಲ್ಲಿ ಹಾಲು ಉಕ್ಕಿಸಿರುವುದು



ಶ್ರೀ ಜಿಯಾಉಲ್ಲಾ, ಸಹಕಾರ ಸಂಘಗಳ ನಿಬಂಧಕರು ಇವರೊಡನೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು

## ಸಹಕಾರದಲ್ಲಿ ಡಾಕ್ಟರೇಡ್ ಪದವಿ ಪಡೆದ ಸಹಕಾರ ಇಲಾಖಾ ಅಧಿಕಾರಿ : ಶ್ರೀ ಗುರುಸ್ವಾಮಿ



ಸಹಕಾರ ಇಲಾಖೆಯಲ್ಲಿ ಅಡಿಷನಲ್ ರಿಜಿಸ್ಟಾರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಗುರುಸ್ವಾಮಿ ಇವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ. ಬಿ.ಎಸ್ ಚಂದ್ರಶೇಖರ್ ರವರ ಮಾರ್ಗದರ್ಶನದಲ್ಲಿ "Performance Evaluation of District Central cooperative Banks in Karnataka – A Case study of Mysuru and Chamarajanagara Districts" ಎಂಬ ವಿಷಯದ ಮೇಲೆ ಮಹಾ ಪ್ರಬಂಧವನ್ನು ಮಂಡಿಸಿ ಸಹಕಾರ ವಿಷಯದಲ್ಲಿ ಪಿ.ಹೆಚ್.ಡಿ ಪದವಿಯನ್ನು ಪಡೆದಿರುತ್ತಾರೆ. ಇವರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರಿಂದ ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.

# ಸಂಯುಕ್ತ ಸಹಕಾರಿಯ 20ನೇ ವಾರ್ಷಿಕ ಸಾಮಾನ್ಯ ಸಭೆ

**ಬೆಂಗಳೂರು :** ಸಂಯುಕ್ತ ಸಹಕಾರಿಯ 20ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 23.12.2021ರಂದು ಸಂಯುಕ್ತ ಸಹಕಾರಿಯ ಸ್ವಂತ ಕಟ್ಟಡದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳ ಹಾಗೂ ಲೆಕ್ಕ ಪರಿಶೋಧಕ ಶ್ರೀ ರವೀಂದ್ರ ಕೋರೆಯವರ ಉಪಸ್ಥಿತಿಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಆನ್‌ಲೈನ್‌ನಲ್ಲಿ ಬೆಳಿಗ್ಗೆ 11–00 ಘಂಟೆಗೆ ನಡೆಸಲಾಯಿತು. 2404 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

**ಉಪನ್ಯಾಸ ಕಾರ್ಯಕ್ರಮ :** ಸಂಯುಕ್ತ ಸಹಕಾರಿಯ 20ನೇ ಸಾಮಾನ್ಯ ಸಭೆಯ ಪ್ರಾರಂಭಕ್ಕೆ ಮೊದಲು ಬೆಳಿಗ್ಗೆ 10–00 ರಿಂದ 10–45ರ ವರೆಗೆ ಮೈಸೂರು ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಶ್ರೀ ಡಾ. ಯಶವಂತ ಡೋಂಗ್ರೆ ಯವರಿಂದ ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು ಹಾಗೂ ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರದ ಪಾತ್ರ ವಿಷಯವಾಗಿ ಆನ್‌ಲೈನ್‌ನಲ್ಲಿ ಏರ್ಪಡಿಸಲಾಗಿತ್ತು.

**ಪ್ರಾರ್ಥನೆ :** ಪ್ರಾರಂಭದಲ್ಲಿ ಶ್ರೀಮತಿ ಗಾಯತ್ರಿ ಶ್ರೀಧರರವರು ಪ್ರಾರ್ಥನೆ, ನಾಡಗೀತೆ, ರೈತ ಗೀತೆ ಹಾಗೂ ಸಹಕಾರ ಗೀತೆಗಳನ್ನು ಹೇಳಿದರು.



**ಸ್ವಾಗತ :** ನಂತರ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ರವರು ಸ್ವಾಗತ ಹಾಗೂ ಎಲ್ಲ ನಿರ್ದೇಶಕರ ಪರಿಚಯ ಮಾಡಿ ಸ್ವಾಗತಿಸಿದರು.

**ಶ್ರದ್ಧಾಂಜಲಿ :** ನಂತರದಲ್ಲಿ ಪ್ರಸಕ್ತ ಸಾಲಿನಲ್ಲಿ ಮೃತರಾದ ದೇಶದ ಗಣ್ಯರು, ಸಹಕಾರಿಗಳು, ರಾಜಕೀಯ ಧುರೀಣರು ರೈತರು ಇವರೆಲ್ಲರಿಗೆ ಶ್ರಧ್ಧಾಂಜಲಿಯನ್ನು ಅರ್ಪಿಸಲಾಯಿತು. ಪ್ರಸಕ್ತ ಸಾಲಿನಲ್ಲಿ ಮೃತರಾದ ಸೇನಾ ಮಹಾದಂಡನಾಯಕ ಶ್ರೀ ಬಿಪಿನ್ ರಾವತ್, ಜಸ್ಟೀಸ ಶ್ರೀ ರಾಮಾಜೋಯಿಸ್, ಶ್ರೀ ಆರ್.ಎಲ್.ಜಾಲಪ್ಪ, ಶ್ರೀ ಎಸ್.ಆರ್.ಮೋರೆ, ಶ್ರೀ ಸಿ.ಎಮ್.ಉದಾಸಿ ಶ್ರೀ ಆರ್.ವಿ.ದೇಶಪಾಂಡೆ, ಶ್ರೀ ಬಿ.ಎಲ್.ಲಕ್ಕೇಗೌಡ, ಶ್ರೀ ಪರಿಮಳಾಚಾರ ಅಗ್ನಿಹೋತ್ರಿ, ಶ್ರೀ ಚಂದ್ರಶೇಖರಪ್ಪ ಬಸಪ್ಪ ಬಡ್ನಿ, ಶ್ರೀ ನಾರಾಯಣಪ್ಪ, ಶ್ರಂತಿ ಸರೋಜ ಶೆಟ್ಟಿ ಮುಂತಾದವರ ಹೆಸರುಗಳನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಓದಿದ ನಂತರ 1 ನಿಮಿಷ ಮೌನ ಆಚರಿಸಿ ಸಂತಾಪ ಸೂಚಿಸಲಾಯಿತು.

**ಉದ್ಘಾಟನೆ :** ಸಂಯುಕ್ತ ಸಹಕಾರಿಯ 20ನೇ ಸಾಮಾನ್ಯ ಸಭೆಯನ್ನು ದೀಪ ಬೆಳಗಿಸುವುದರ ಮೂಲಕ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಹಾಗೂ ಎಲ್ಲ ನಿರ್ದೇಶಕರೂಂದಿಗೆ ಕೂಡಿ ಉದ್ಘಾಟಿಸಿದರು.





**ಪ್ರಾಸ್ತಾವಿಕ ಅಧ್ಯಕ್ಷರ ಭಾಷಣ :** ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ತಮ್ಮ ಅಧ್ಯಕ್ಷ ಭಾಷಣ ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ 20ನೇಯ ವಾರ್ಷಿಕ ಸಾಮಾನ್ಯ ಸಭೆಯನ್ನು ಸಂಯುಕ್ತ ಸಹಕಾರಿಯ ಎಲ್ಲ ಸದಸ್ಯರ ಭೌತಿಕ ಹಾಜರಿಯಲ್ಲಿ ನಡೆಸಬೇಕೆಂದು ತೀರ್ಮಾನಿಸಿ ಅದರಂತೆ ಬೆಂಗಳೂರು ನಗರದ ಅಂಬೇಡ್ಕರ ಭವನವನ್ನು ಕಾದಿರಿಸಲಾಗಿತ್ತು. ಆದರೆ ಕೋವಿಡ್ ಮಹಾಮಾರಿ ಓಮಿಕ್ರಾನ್ ರೂಪದಲ್ಲಿ ಮತ್ತೆ ತಾಂಡವವಾಡಬಹುದು ಎಂಬ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಕಟ್ಟು ನಿಟ್ಟಾದ ನಿಯಮಗಳನ್ನು ಪಾಲಿಸಲೇಬೇಕು ಎಂದು ಆದೇಶ ನೀಡಿವುದರ ಹಿನ್ನೆಲೆಯಲ್ಲಿ ತಮ್ಮನ್ನು ಖುದ್ದಾಗಿ ಭೇಟಿ ಮಾಡಲು ಸಾಧ್ಯವಾಗದೆ ಅನಿವಾರ್ಯವಾಗಿ ಈ ಸಭೆಯಲ್ಲಿ ಆನ್‌ಲೈನ್ ವ್ಯವಸ್ಥೆ ಮಾಡಬೇಕಾಯಿತು. ಇದಕ್ಕಾಗಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಹಾಗು ನಾನು ವೈಯಕ್ತಿಕವಾಗಿ ವಿಷಾದಿಸುತ್ತೇನೆ ಎಂದು ತಿಳಿಸಿದರು.

ನಂತರ ತಮ್ಮ ಸುದೀರ್ಘ ಭಾಷಣದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ನಿರಂತರ ಪ್ರೋತ್ಸಾಹದಿಂದಾಗಿ "ಸೌಹಾರ್ದ ಸಹಕಾರಿಯ ನಡೆ ಗುಣಮಟ್ಟದ ಕಡೆ" ಎಂಬ ಘೋಷ ವಾಕ್ಯದ ಸಾಧನೆಗಾಗಿ ಸಂಯುಕ್ತ

ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ಕಾನೂನು ತಿದ್ದುಪಡಿ, ಆದಾಯ ತೆರಿಗೆ ಸಮಸ್ಯೆಗೆ ಪರಿಹಾರದ ನಡೆಸಿದ ನಿರಂತರ ಹೋರಾಟ, ಸಂಯುಕ್ತ ಸಹಕಾರಿಯ ಶಾಸನ ಬದ್ಧ ಕಾರ್ಯ ನಿರ್ವಹಣೆ, ರಾಜ್ಯದಾದ್ಯಂತ ಸಂಪರ್ಕ ಸಭೆಗಳು ಸಮಾಲೋಚನಾ ಸಭೆಗಳು ಪತ್ರಿಕಾ ಗೋಷ್ಠಿಗಳು ಹಲವಾರು ಬಗೆಯ ತರಬೇತಿಗಳು ಸಂಯುಕ್ತ ಸಹಕಾರಿಗೆ ಕೇಂದ್ರದಲ್ಲಿ ಖರೀದಿಮಾಡಿರುವ ಭವ್ಯ ಕಟ್ಟಡ, ಬೆಳಗಾವಿಯಲ್ಲಿ, ಕಲಬುರಗಿಯಲ್ಲಿ ನಿರ್ಮಾಣವಾಗುತ್ತಿರುವ ಕಟ್ಟಗಳು ಮೈಸೂರಿನಲ್ಲಿ ನಿವೇಶನ ಖರೀದಿ, ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯನ್ನು ಗುರುತಿಸುವಂತಾಗಿದೆ. ಅಧ್ಯಯನ ಯೋಗ್ಯವಾದ ಸಂಸ್ಥೆಯಾಗಿ ಕ್ಷೇತ್ರವಾಗಿ ಸೌಹಾರ್ದ ಸಹಕಾರಿ ಕ್ಷೇತ್ರ ಬೆಳೆದಿದೆ. ಸೌಹಾರ್ದ ಸಹಕಾರಿಗಳ ಪ್ರಮುಖರುಗಳು ರಾಷ್ಟ್ರಮಟ್ಟದಲ್ಲಿ ತಮ್ಮ ವ್ಯಕ್ತಿತ್ವವನ್ನು ಸಹಕಾರಿಗಳು ಗುರುತಿಸುವ ಗೌರವಿಸುವ ಮಟ್ಟದಲ್ಲಿ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಕಾರ್ಯನಿರ್ವಹಿಸಿದೆ ಎಂದು ತಿಳಿಸುತ್ತ ರಾಜ್ಯದ ಸೌಹಾರ್ದ ಸಹಕಾರಿ ಚಳುವಳಿಯ ಪ್ರಗತಿ ಹಾಗೂ ಸಾಧನೆಗಳನ್ನು ತಿಳಿಸಿದರು.

**ವಿಷಯಗಳ ಮಂಡನೆ :** ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ರವರು 20ನೇ ಸಾಮಾನ್ಯ ಸಭೆಯ ವಿಷಯ ಪಟ್ಟಿಯಂತೆ ವಿಷಯಗಳನ್ನು ಮಂಡಿಸಿದರು. ಸಾಮಾನ್ಯ ಸಭೆಯು ಎಲ್ಲ ವಿಷಯಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು.



**ಪ್ರಶ್ನೋತ್ತರ ಅವಧಿ :** ನಂತರ ನಡೆದ ಪ್ರಶ್ನೋತ್ತರ ಅವಧಿಯಲ್ಲಿ ರಾಜ್ಯದ 50ಕ್ಕೂ ಹೆಚ್ಚು ಸದಸ್ಯರು ವಿವಿಧ ವಿಷಯಗಳ ಬಗ್ಗೆ ಸಮಸ್ಯೆಗಳ ಬಗ್ಗೆ ಪ್ರಸ್ತಾವ ಮಾಡಿರುವುದಕ್ಕೆ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿಯವರು ಸಮಂಜಸವಾದ ಉತ್ತರಗಳನ್ನು ನೀಡಿದರು. ಹಲವಾರು ಪ್ರತಿನಿಧಿಗಳು ಮಾತನಾಡಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರು, ಹಾಗೂ ಆಡಳಿತ ಮಂಡಳಿಯವರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಅತ್ಯಂತ ಉತ್ತಮವಾಗಿ ಕಾರ್ಯನಿರ್ವಹಿಸಿದ್ದೀರಿ ಅದಕ್ಕಾಗಿ ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಕೃತಜ್ಞತೆಗಳನ್ನು ತಿಳಿಸಿದರು. ನಂತರ ಮಾನ್ಯ ಅಧ್ಯಕ್ಷರು ಅಧ್ಯಕ್ಷರ ಭಾಷಣವನ್ನು ನೆರವೇರಿಸಿದರು.



**ವಂದನಾರ್ಪಣೆ :** ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎ. ಆರ್. ಪ್ರಸನ್ನಕುಮಾರರವರು ವಂದನಾರ್ಪಣೆಯನ್ನು ನೆರವೇರಿಸಿದರು.

## ನಬಾರ್ಡ ಮತ್ತು ಆಪಮಾಸ್ (ಆಂಧ್ರಪ್ರದೇಶ ಮಹಿಳಾ ಅಭಿವೃದ್ಧಿ ಸೊಸೈಟಿ) ಸಹಯೋಗದಲ್ಲಿ ಸ್ವಸಹಾಯ ಗುಂಪುಗಳ ಜಿಲ್ಲಾ ಮಹಾಮಂಡಳಗಳ ರಾಜ್ಯ ಮಟ್ಟದ ಕಾರ್ಯಾಗಾರ

### ಎಸ್.ಹೆಚ್.ಜಿ ಗಳ ಅಭಿವೃದ್ಧಿಗೆ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಸಂಪೂರ್ಣ ಸಹಕಾರ : ಶರಣಗೌಡ ಜಿ. ಪಾಟೀಲ




**ಬೆಂಗಳೂರು :** ದಿನಾಂಕ 27-12-2021 ರಂದು ನಬಾರ್ಡ ಸಭಾ ಭವನದಲ್ಲಿ ನಬಾರ್ಡ ಹಾಗೂ ಆಪಮಾಸ್ ಇವರುಗಳು ಸ್ವ-ಸಹಾಯ ಗುಂಪುಗಳ ಅಭಿವೃದ್ಧಿಗಾಗಿ ಜಂಟಿಯಾಗಿ ಏರ್ಪಡಿಸಿದ ಕಾರ್ಯಾಗಾರದ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ರಾಜ್ಯದಲ್ಲಿ ಸ್ವ-ಸಹಾಯ ಗುಂಪುಗಳ ಜಿಲ್ಲಾ ಮಹಾಮಂಡಳಗಳ ಕಾರ್ಯ ಮಹತ್ವದ್ದಾಗಿದೆ. ಸ್ವಸಹಾಯ ಗುಂಪುಗಳು ಉತ್ತಮವಾಗಿ ಕಾರ್ಯನಿರ್ವಹಿಸಬೇಕಾದರೆ ಅವರುಗಳಿಗೆ ಜಿಲ್ಲಾ ಮಟ್ಟದಲ್ಲಿ ಮಹಾಮಂಡಳದ ಅವಶ್ಯಕತೆ ಇದೆ. ಜಿಲ್ಲಾ ಮಹಾಮಂಡಳದ ವತಿಯಿಂದ ಶಿಕ್ಷಣ ತರಬೇತಿ ಆರ್ಥಿಕ ನೆರವಿಗೆ ವ್ಯವಸ್ಥೆ ಆರೋಗ್ಯಕ್ಕೆ ಸಲಹೆ ಉದ್ಯೋಗ ಸೃಷ್ಟಿಗಾಗಿ ಮಾರ್ಗದರ್ಶನ ಸಾಮಾಜಿಕ ನೆಲೆಗಟ್ಟು ಸ್ಥಾಪನೆ ಹೀಗೆ ಹಲವು ವಿಧವಾದ ಸೇವೆಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಇವುಗಳ ಅಭಿವೃದ್ಧಿಗೆ

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರ ಸೂಕ್ತವಾಗಿದೆ. ಸೌಹಾರ್ದ ಸಹಕಾರಿ ಉದ್ದೇಶವೂ ಕೂಡ ಸ್ವಾಯತ್ತತೆ, ಸ್ವಯಂ ಆಡಳಿತ ಸ್ವಯಂ ನಿಯಂತ್ರಣ ಎಂಬುದಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳ ನೇತೃತ್ವ ವಹಿಸಿರುವ ಸಂಯುಕ್ತ ಸಹಕಾರಿ ಹಾಗೂ ರಾಜ್ಯದಲ್ಲಿರುವ 5436 ಸೌಹಾರ್ದ ಸಹಕಾ–ರಿಗಳು ಒಂದು ರೀತಿಯಲ್ಲಿ ಸ್ವಸಹಾಯ ಗುಂಪುಗಳಾಗಿವೆ. ಆದರೆ ದಿನಾಂಕ 01.1.2001 ರಲ್ಲಿ ಕರ್ನಾಟಕದಲ್ಲಿ ಜಾರಿಗೆ ಬಂದ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ನೊಂದಣೆಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಅನೇಕ ಸೌಹಾರ್ದ ಸಹಕಾರಿಗಳು ಹಲವಾರು ಸ್ವ ಸಹಾಯ ಗುಂಪುಗಳನ್ನು ರಚಿಸಿವೆ. ಹಣಕಾಸಿನ ನೆರವನ್ನು ನೀಡುತ್ತಿವೆ. ಮುಂಬರುವ ದಿನಗಳಲ್ಲೂ ಸಹ ಸ್ವಸಹಾಯ ಗುಂಪುಗಳ ಕಾರ್ಯ ನಿರ್ವಹಣೆಗೆ ಸ್ವಸಹಾಯ ಗುಂಪುಗಳ ಮಹಾಮಂಡಳಗಳ ರಚನೆಗೆ ಹಾಗೂ ಕಾರ್ಯನಿರ್ವಹಣೆಗೆ ಸೌಹಾರ್ದ ಸಹಕಾರಿ ಕ್ಷೇತ್ರ ಅಗತ್ಯ ಸಹಕಾರವನ್ನು ನೀಡಲು ಬದ್ಧವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿರವರು, ಹೈದರಾಬಾದನ ಆಪ್‌ಮಾಸ ಸಂಸ್ಥೆಯ ಶ್ರೀ ಸಿ.ಎಸ್.ರೆಡ್ಡಿ, ನಬಾರ್ಡನ ಶ್ರೀಮತಿ ಮಂಜುಶ್ರೀ ಕರ್ನಾಟಕ ರಾಜ್ಯದ ಸ್ವಸಹಾಯ ಅಂದೋಲದ ಪ್ರಮುಖ ರೂವಾರಿ ಐ.ಎ.ಎಸ್. ಅಧಿಕಾರಿ ಶ್ರೀಮತಿ ಮಮತಾ, ಮೈರಾಡಾ ಅಧಿಕಾರಿ ಶ್ರೀ ಕಲ್ಯಾಣ ಶೆಟ್ಟಿ ಧರ್ಮಸ್ಥಳ ಸ್ವಸಹಾಯ ಗುಂಪುಗಳ ಮಹಾಮಂಡಳದ ಅಧಿಕಾರಿ ಶ್ರೀ ಅನೀಲ್ ರಾಜ್ಯದ ಅನೇಕ ಸ್ವಸಹಾಯ ಗುಂಪುಗಳ ಮಹಾಮಂಡಳದ ಪದಾಧಿಕಾರಿಗಳು ಅಧಿಕಾರಿಗಳು ಅನೇಕ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.

ಸ್ವಸಹಾಯ ಗುಂಪುಗಳು ಮಹಿಳಾ ಸಬಲೀಕರಣ ಸಾಧನೆಗೆ ಉತ್ತಮ ಸಾಧನವಾಗಿರುವುದರಿಂದ ಸಹಕಾರಿ ಕ್ಷೇತ್ರದ ಮೂಲಕ ಇವುಗಳ ಅಭಿವೃದ್ಧಿಗೆ ಯೋಜನೆಗಳ ಜಾರಿಗೆ ಕ್ರಮ ಅಗತ್ಯ ಇವುಗಳನ್ನು ಬಲಪಡಿಸುವಲ್ಲಿ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಪಾತ್ರ ನಿರ್ವಹಿಸಬೇಕು ಭಾರತದಲ್ಲಿ ಸಹಕಾರಿಗಳಿಗೆ ಸ್ವಸಹಾಯ ಮಹಾಮಂಡಳಗಳಿಗೆ ಸ್ವಾಯತ್ತತೆ ಸ್ವಯಂ ನಿಯಂತ್ರಣವಿದ್ದಲ್ಲಿ ಪ್ರಗತಿ ಸಾಧ್ಯವಾಗುತ್ತದೆ. ಸ್ವಸಹಾಯ ಗುಂಪುಗಳ ಮಹಾಮಂಡಳಗಳ 2030 ರ ಗುರಿ ಹಾಗು ಕಾರ್ಯಯೋಜನೆ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

## ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿಯವರಿಂದ ಕೃತಜ್ಞತೆ

ದಿನಾಂಕ 01.01.2022 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಸ್ವಂತ ಕಟ್ಟಡದಲ್ಲಿ ನಡೆದ "ಸೌಹಾರ್ದ ಸಹಕಾರಿ" ದಿನಾಚರಣೆಯ ಸಂದರ್ಭದಲ್ಲಿ ಶ್ರೀಯುತರು ಧ್ವಜಾರೋಹಣ ನೆರವೇರಿಸಿದ ನಂತರ ಸಿಬ್ಬಂದಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಕಳೆದ 5 ವರ್ಷಗಳ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ನನ್ನ ಜೊತೆಗೆ ಸಂಪೂರ್ಣ ಸಹಕಾರ ನೀಡಿ ನನ್ನ ಹಾಗೂ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ನಿಯಂತ್ರಣ ವ್ಯವಸ್ಥೆಗಳನ್ನು, ಶಾಸನಾತ್ಮಕ ಕಾರ್ಯಗಳನ್ನು, ಸಿಬ್ಬಂದಿ ವ್ಯವಸ್ಥೆ, ಶಾಖಾ ಅನುಮತಿ ವ್ಯವಸ್ಥೆ, ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ, ಆದಾಯ ತೆರಿಗೆ ಹೋರಾಟ ಇವೆಲ್ಲವುಗಳಲ್ಲಿ, ಮತ್ತು ರಾಜ್ಯದಾದ್ಯಂತ ಅತ್ಯಂತ ಉತ್ತಮ ರೀತಿಯಲ್ಲಿ ತರಬೇತಿ ಕಾರ್ಯಕ್ರಮಗಳು, ಸಂಪರ್ಕ ಸಭೆಗಳು, ಸಮಾಲೋಚನಾ ಸಭೆಗಳು, ಉತ್ತಮ ಪ್ರಚಾರ ವ್ಯವಸ್ಥೆ ಎಲ್ಲದರಲ್ಲಿಯೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿರುವುದಕ್ಕೆ ಧನ್ಯವಾದ ತಿಳಿಸಿದರು.

ಕೊನೆಯದಾಗಿ 4 ವಿಭಾಗಗಳಲ್ಲಿ ಈಗಾಗಲೇ 3 ವಿಭಾಗಗಳಿಗೆ ಕಟ್ಟಡ ಆಗಿವೆ. ಮೈಸೂರು ವಿಭಾಗದಲ್ಲಿ ಹಾಗೂ ಕೆಲವು ಸಂಪರ್ಕ ಕಛೇರಿಗಳಿಗೂ ಕೂಡ ಮುಂದಿನ ದಿನಗಳಲ್ಲಿ ಕಟ್ಟಡಗಳ ವ್ಯವಸ್ಥೆಗಳನ್ನು ಮುಂಬರುವ ಆಡಳಿತ ಮಂಡಲಿ ಮಾಡಲಿದೆ ಈ ಕಟ್ಟಡಗಳನ್ನು ಎಲ್ಲರೂ ಅಚ್ಚುಕಟ್ಟಾಗಿ ತಮ್ಮ ತಮ್ಮ ಮನೆಗಳಂತೆ ನೋಡಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಬೆಂಗಳೂರು ನಿರ್ದೇಶಕ ಶ್ರೀ ಬಿ.ಎಸ್.ಗುಂಡೂರಾವವರು ಶುಭ ಕೋರಿದರು. ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ. ಜಿ. ಪಾಟೀಲರವರು ಪ್ರಾಸ್ತಾವಿಕವಾಗಿ ಮಾತನಾಡಿ 2022 ರ ಹೊಸ ವರ್ಷ ಹಾಗೂ ಸಂಯುಕ್ತ ಸಹಕಾರಿಯ 21ನೇ ಸೌಹಾರ್ದ ಸಹಕಾರಿ ದಿನವನ್ನು ನಮ್ಮ ಸ್ವಂತ ಕಟ್ಟಡದಲ್ಲಿ ಆಚರಿಸುತ್ತಿರುವುದು ನಮಗೆಲ್ಲ ಹೆಮ್ಮೆಯ ವಿಷಯ ಎಂದು ತಿಳಿಸಿ ಶುಭ ಕೋರಿದರು. ಹಾಗೂ ಕೇಂದ್ರ ಕಚೇರಿಯ ಸಿಬ್ಬಂದಿ, ಕೋರ್ಟ ಸಿಬ್ಬಂದಿ, ಬೆಂಗಳೂರು ಪ್ರಾಂತೀಯ ಕಚೇರಿಯ ಸಿಬ್ಬಂದಿಯವರು ಉಪಸ್ಥಿರಿದ್ದರು. ಉಪಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ ಕೆ. ಸ್ವಾಗತ ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಶೋಭಾ ಆರ್ ವಂದನಾರ್ಪಣೆ ಸಲ್ಲಿಸಿದರು.

# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಯಲ್ಲಿ 21ನೇ ಸೌಹಾರ್ದ ಸಹಕಾರಿ ದಿನಾಚರಣೆ



**ಬೆಂಗಳೂರು :** ಸಂಯುಕ್ತ ಸಹಕಾರಿಯ ನೂತನ ಕಟ್ಟಡ "ಸೌಹಾರ್ದ ಸಹಕಾರಿ ಸೌಧ" ಕಛೇರಿಯಲ್ಲಿ 21ನೇ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಮಾನ್ಯ ಅಧ್ಯಕ್ಷರಾದ ಶ್ರೀ ಬಿ ಹೆಚ್ ಕೃಷ್ಣಾರೆಡ್ಡಿ ಇವರ ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ ಎಸ್ ಗುಂಡೂರಾವ್ ಇವರು ಮುಖ್ಯ ಅಥಿತಿಗಳಾಗಿ ಉಪಸ್ಥಿತ–ರಿದ್ದರು. ಕಾರ್ಯಕ್ರಮದಲ್ಲಿ ಸಿಬ್ಬಂದಿಗಳಿಗೆ ಕ್ಯಾಲೆಂಡರ್ & ಟೇಬಲ್ ಕ್ಯಾಲೆಂಡರ್ ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ ಹಾಗೂ ದಾವಾ ಪಂಚಾಯಿತಿ ನ್ಯಾಯಾಲಯದ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು :** ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್ ರವರು ನೆರವೇ–ರಿಸಿದರು ಹಾಗೂ 2022ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಹಾಗೂ ಇದೇ ಸಂದರ್ಭದಲ್ಲಿ ಮಾನ್ಯ ಉಪನಿಬಂಧಕರಾದ ಶ್ರೀ ವಿಜಯ್ ಕುಮಾರ್ ರವರು ಪ್ರಾಂತೀಯ ಕಛೇರಿಗೆ ಭೇಟಿ ನೀಡುವ ಮೂಲಕ ಸ್ಥಳೀಯ ಸಹಕಾರಿಗಳಿಗೆ ಕ್ಯಾಲೆಂಡರ್ ವಿತರಿಸಿದರು. ಸದರಿ ಕಾರ್ಯಕ್ರಮದಲ್ಲಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ್ ಬಿರಾದಾರ್ ರವರು ಹಾಗೂ ಮೈಸೂರು, ಮಂಡ್ಯ ಮತ್ತು ಕೊಡುಗು ಜಿಲ್ಲಾ ಒಕ್ಕೂಟ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸ್ಥಳೀಯ ಸೌಹಾರ್ದ ಸಹಕಾ–ರಿಗಳ ಪ್ರತಿನಿಧಿಗಳು ಹಾಗೂ ಎಲ್ಲ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೆಳಗಾವಿ :** ಬೆಳಗಾವಿ ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ನೆರವೇರಿಸಲಾಯಿತು. ಧ್ವಜಾರೋಹಣವನ್ನು ಶ್ರೀ ಲಕ್ಷ್ಮಣ ಮಾರುತಿ ಪವಾರ, ಮಾನ್ಯ ವೃತ್ತಿಪರ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಎಸ್.ಎಚ್.ಬಸವರಾಜ, ಮಾನ್ಯ ಜಂಟಿ ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬೆಳಗಾವಿ ಹಾಗೂ ಜಿಲ್ಲಾ ಸಹಕಾರ ಚುನಾವಣಾಧಿಕಾರಿಗಳು ಬೆಳಗಾವಿ. ಶ್ರೀ ರವೀಂದ್ರ ಪಾಟೀಲ, ಮಾನ್ಯ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು, ಬೆಳಗಾವಿ. ಶ್ರೀ ಎಮ್.ಎಸ್.ಕೇದಾರಿ, ಮಾನ್ಯ ಸಹಾಯಕ ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬೆಳಗಾವಿ ಶ್ರೀ ಶ್ರೀಕಾಂತ್ ಬರುವೆ, ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು, ಟಾಸ್ಕಫೋರ್ಸ್ ವಿಭಾಗ, ಶ್ರೀ ಬಸವರಾಜ ಹೊಂಗಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು, ಬೆಳಗಾವಿ ಪ್ರಾಂತ, ಸ್ಥಳೀಯ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳು ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು. ಎಲ್ಲಾ ಗಣ್ಯ ಮಾನ್ಯರಿಂದ ಸಂಯುಕ್ತ ಸಹಕಾರಿಯ ನೂತನ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಶ್ರೀ ಎಸ್.ಎಚ್.ಬಸವರಾಜ, ಮಾನ್ಯ ಜಂಟಿ ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಬೆಳಗಾವಿ ಹಾಗೂ ಜಿಲ್ಲಾ ಸಹಕಾರ ಚುನವಣಾಧಿಕಾರಿಗಳು ಮತ್ತು ಶ್ರೀ ರವೀಂದ್ರ ಪಾಟೀಲ, ಮಾನ್ಯ ಸಹಕಾರಿ ಸಂಘಗಳ ಸಹಾಯಕ ನಿಬಂಧಕರು ಇವರಿಗೆ ಸಂಯುಕ್ತ ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂತದ ಜಿಲ್ಲಾ ಸಂಯೋಜಕರು ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.




**ಕಲಬುರಗಿ** : ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿಯ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಹಾಗೂ ಶ್ರೀ ವೈ. ಟಿ ಪಾಟೀಲ ರವರು ಜಂಟಿಯಾಗಿ ಧ್ವಜಾರೋಹಣವನ್ನು ನೇರವೇರಿಸಿದರು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೇಚ್ ಹಾಗೂ ಎಲ್ಲ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬೀದರ** : ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಜಿಲ್ಲಾ ಸಂಪರ್ಕ ಕಚೇರಿಯಲ್ಲಿ ಸೌಹಾರ್ದ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಒಕ್ಕೂಟ ಉಪಾಧ್ಯಕ್ಷರಾದ ಶ್ರೀ ಸಂಜೀವಕುಮಾರ ಪಾಟೀಲ್, ನಿರ್ದೇಶಕ ರಾಜಶೇಖರ್ ನಾಗಮೂರ್ತಿ, ಶ್ರೀ ಸಂಜಯ ಕ್ಯಾಸಾ. ಜಿಲ್ಲೆಯ ಸಹಕಾರಿಯ ಅಧ್ಯಕ್ಷರು ಮುಖ್ಯ ಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



**ಶಿವಮೊಗ್ಗ** : ದಿನಾಂಕ 01-01-2022 ರಂದು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯು ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಹಾಗೂ ಸಹ್ಯಾದ್ರಿ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ್ ಎ.ಆರ್ ಇವರು ಧ್ವಜಾರೋಹಣ ನೇರವರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್.ಎ ನಾರಾಯಣಮೂರ್ತಿ, ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಮಾಲತಿ ಎಂ.ಪಿ ಹಾಗೂ ಸಹಕಾರಿಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಚಿತ್ರದುರ್ಗ** : ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಜೆ.ಸಿ.ಆರ್. ಬಡಾವಣೆ ಶಾಖೆಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಪ್ರಯುಕ್ತ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರು ಹಾಗೂ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಎಸ್. ಆರ್. ಲಕ್ಷ್ಮೀಕಾಂತ ರೆಡ್ಡಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು, ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾದ ಶ್ರೀ ಮಲ್ಲಿಕಾರ್ಜುನ ರವರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಉತ್ತರ ಕನ್ನಡ** : ಸ್ಕೊಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಸ್ಕೊಡ್‌ವೆಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ.ವೆಂಕಟೇಶ ನಾಯ್ಕ ಹಾಗೂ ಸ್ಕೊಡ್ ವೇಸ್ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷರು ಮತ್ತು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಇವರ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ ಗಿಡಕ್ಕೆ ನೀರು ಹಾಕಿ ನಂತರ ಸಹಕಾರಿ ಧ್ವಜ ಹಾರಿಸುವ ಮೂಲಕ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ 2022ನೇ ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ಹೇಮಲತಾ ಚೌಗಲೆ, ನಿರ್ದೇಶಕರಾದ ಶ್ರೀಮತಿ ಭಾಗೀರಥಿ ನಾಯ್ಕ, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಗಣಪತಿ ನಾಯ್ಕ, ಸ್ಕೊಡವೇಸ್ ಸಂಸ್ಥೆಯ ಕಾರ್ಯಕ್ರಮ ಅಧಿಕಾರಿ ಶ್ರೀ ರಿಯಾಜ್ ಹಾಗೂ ಸಂಸ್ಥೆಯ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

# "ಸಮಾಲೋಚನಾ ಸಭೆ"



**ಚಿಕ್ಕಮಗಳೂರು** : ದಿನಾಂಕ 09.12.2021ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಚಿಕ್ಕಮಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕರಿಗಾಗಿ ಆಯೋಜಿಸಿದ್ದ "ಸಮಾಲೋಚನಾ ಸಭೆ" ಯನ್ನು ಉದ್ಘಾಟನೆ ಮಾಡಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಅಂಶಗಳು, ಸಂಯುಕ್ತ ಸಹಕಾರಿಯ ವಾರ್ಷಿಕ ಮಹಾಸಭೆ, ಕೇಂದ್ರ ಕಛೇರಿಯ ನೂತನ ಕಟ್ಟಡದ ಉದ್ಘಾಟನೆ ಹಾಗೂ ಇನ್ನಿತರ ಪ್ರಮುಖ ಅಂಶಗಳ ಮಾಹಿತಿಯನ್ನು ವಿವರಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಸಹಕಾರಿಗಳ ಪ್ರಶ್ನೆಗಳಿಗೆ ಉತ್ತರ ನೀಡಿದರು. ಜಿಲ್ಲೆಯ 10 ಸಹಕಾರಿಗಳಿಂದ 16 ಪ್ರತಿನಿಧಿಗಳು ಭಾಗವಹಿಸಿದ್ದರು.



**ಹಾಸನ** : ದಿನಾಂಕ: 08.12.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ–ರಿಗಾಗಿ ಆಯೋಜಿಸಿದ್ದ "ಸಮಾಲೋಚನಾ ಸಭೆ" ಉದ್ಘಾಟನೆ ಮಾಡಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಅಂಶಗಳು, ಸಂಯುಕ್ತ ಸಹಕಾರಿಯ ವಾರ್ಷಿಕ ಮಹಾಸಭೆ, ಕೇಂದ್ರ ಕಛೇರಿಯ ನೂತನ ಕಟ್ಟಡದ ಉದ್ಘಾಟನೆ ಹಾಗೂ ಇನ್ನಿತರ ಪ್ರಮುಖ ಅಂಶಗಳ ಮಾಹಿತಿಯನ್ನು ವಿವರಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಸಹಕಾರಿಗಳ ಪ್ರಶ್ನೆ–ಸಂದೇಹಗಳಿಗೆ ಉತ್ತರ ನೀಡಿದರು.



**ದಕ್ಷಿಣ ಕನ್ನಡ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ 10.12.2021ರಂದು ಮಂಗಳೂರಿನ ಉರ್ವಸ್ಟೋರ್‌ನ ಯುವವಾಹಿನಿ ಸಭಾಂಗಣದಲ್ಲಿ ನಡೆದ "ಸಮಾಲೋಚನಾ ಸಭೆ" ಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ಉದ್ಘಾಟಿಸಿ ಮಾತನಾಡಿದರು. ಸೌಹಾರ್ದ ಸಹಕಾರಿ ಚಳುವಳಿಗೆ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳು ವಿಶಿಷ್ಟ ಕೊಡುಗೆಯನ್ನು ನೀಡಿದೆ. ಜಿಲ್ಲೆಯ ಸೌಹಾರ್ದ ಸಹಕಾರಿಗಳು ಸದಸ್ಯರ ಹಣಕಾಸಿನ ಬೇಡಿಕೆಯನ್ನು ಪೂರೈಸುವ ನಿಟ್ಟಿನಲ್ಲಿ ರಾಜ್ಯಕ್ಕೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿದೆ. ದೇಶಕ್ಕೆ ಬ್ಯಾಂಕಿಂಗ್ ವ್ಯವಸ್ಥೆಯನ್ನು ನೀಡಿದ ಕರಾವಳಿ ಭಾಗದ ಜನರು ಸಹಕಾರ ಕ್ಷೇತ್ರದಲ್ಲಿಯೂ ತನ್ನದೆ ಆದ ಛಾಪನ್ನು ಮೂಡಿಸಿದ್ದಾರೆ. ಈ ಭಾಗದ ಸೌಹಾರ್ದ ಸಹಕಾರಿಗಳ ಸಭೆಯಲ್ಲಿ ಭಾಗವಹಿಸಿರುವುದು ಅತ್ಯಂತ ಖುಷಿ ತಂದಿದೆ ಎಂದರು. ನಂತರದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿಯ ಅಂಶಗಳು, ಸಂಯುಕ್ತ ಸಹಕಾರಿಯ ವಾರ್ಷಿಕ ಮಹಾಸಭೆ, ಕೇಂದ್ರ ಕಛೇರಿಯ ನೂತನ ಕಟ್ಟಡದ ಉದ್ಘಾಟನೆ ಹಾಗೂ ಇನ್ನಿತರ ಪ್ರಮುಖ ಅಂಶಗಳ ಮಾಹಿತಿಯನ್ನು ಸಭೆಗೆ ನೀಡಿದರು.

ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಬೋಳ ಸದಾಶಿವ ಶೆಟ್ಟಿ ಇವರು ಮಾತನಾಡಿ ಪ್ರಸ್ತುತ ಸ್ಪರ್ಧಾತ್ಮಕ ಕಾಲಘಟ್ಟದಲ್ಲಿ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ನಂತರದಲ್ಲಿ ಮಾತನಾಡಿದ ದಕ್ಷಿಣ ಕನ್ನಡ ಒಕ್ಕೂಟ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಎ.ಸುರೇಶ್ ರೈ ಇವರು

ಸಭೆಯಲ್ಲಿ ಜಿಲ್ಲೆಯ ಸೌಹಾರ್ದ ಸಹಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದಕ್ಕೆ ಹರ್ಷ ವ್ಯಕ್ತಪಡಿಸಿದರು. ಜಿಲ್ಲೆಯ ಸೌಹಾರ್ದ ಸಹಕಾ–ರಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ರಾಜ್ಯ ಅಧ್ಯಕ್ಷರ ಗಮನಕ್ಕೆ ತಂದರು.

ಸಭೆಯ ಅಧ್ಯಕ್ಷತೆ ವಹಿಸಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್.ಕೆ ಇವರು ಮಾತನಾಡಿ ಸೌಹಾರ್ದ ಸಹಕಾರಿಗಳು ಸ್ವಾಯತ್ತತೆ ಸಂಸ್ಥೆಗಳಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಮುಂದಿನ ದಿನಗಳಲ್ಲಿ ಸಾಮಾಜಿ–ಕ ಸಂಸ್ಥೆಗಳಾಗಿ ಬೆಳೆಯುವ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಸಮಾಲೋಚನಾ ಸಭೆಯ ನಂತರದಲ್ಲಿ "ಸೌಹಾರ್ದ ಸಹಕಾರಿಗಳು ಹಣಕಾಸು ಸುಸ್ಥಿತಿ ಸಾಧಿಸಲು ಪರಿಣಾಮಕಾರಿ ವ್ಯವಹಾರ ನಿರ್ವಹಣೆ" ಎಂಬ ವಿಷಯದ ಕುರಿತಂತೆ ವಕೀಲರಾದ ಶ್ರೀ ವಸಂತ ಅಡ್ಯಂತಾಯ ಇವರು ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.




**ಉಡುಪಿ** : ದಿನಾಂಕ 11.12.2021ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಾಹಕ–ರಿಗಾಗಿ ಆಯೋಜಿಸಿದ್ದ "ಸಮಾಲೋಚನಾ ಸಭೆ" ಉದ್ಘಾಟನೆ ಮಾಡಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಅಂಶಗಳು, ಸಂಯುಕ್ತ ಸಹಕಾರಿಯ ವಾರ್ಷಿಕ ಮಹಾಸಭೆ, ಕೇಂದ್ರ ಕಛೇರಿಯ ನೂತನ ಕಟ್ಟಡದ ಉದ್ಘಾಟನೆ ಹಾಗೂ ಇನ್ನಿತರ ಪ್ರಮುಖ ಅಂಶಗಳ ಮಾಹಿತಿಯನ್ನು ವಿವರಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಸಹಕಾರಿಗಳ ಪ್ರಶ್ನೆಗಳಿಗೆ ಉತ್ತರ ನೀಡಿದರು. ಸಭೆಯಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಮಂಜುನಾಥ ಎಸ್.ಕೆ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಉಪಸ್ಥಿತರಿದ್ದರು. ಜಿಲ್ಲೆಯ 98 ಸೌಹಾರ್ದ ಸಹಕಾರಿಗಳಿಂದ 145 ಪ್ರತಿನಿಧಿಗಳು ಭಾಗವಹಿಸಿದರು.



**ಬೀದರ** : ದಿನಾಂಕ 16.12.2021 ಕಲಬುರಗಿ ಪ್ರಾಂತದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗಾಗಿ ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಮಾಲೋಚನಾ ಸಭೆ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಇತ್ತೀಚಿನ ತಿದ್ದುಪಡಿಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಶಾರದಾ ರೋಡಶೆಟ್ ಬೀದರನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆಯವರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು ಹಾಗೂ ಬೀದರ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರುಗಳು ಉಪಸ್ಥಿತರಿದ್ದರು. 65 ಸೌಹಾರ್ದ ಸಹಕಾರಿಗಳಿಂದ 95 ಪ್ರತಿನಿಧಿಗಳು ಭಾಗವಹಿಸಿದ್ದರು.

**ಮೈಸೂರು** : ಜನವರಿ 2022ರಿಂದ ಡಿಸೆಂಬರ್ 2022ರವರೆಗೆ ಚುನಾವಣೆ ನಡೆಯುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗೆ ಸೌಹಾರ್ದ ಸಹಕಾರಿಗಳ ಚುನಾವಣೆಯ ಪೂರ್ವಭಾವಿ ಸಿದ್ಧತೆ ಹಾಗೂ ಚುನಾವಣೆ ನಡೆಸುವ ವಿಧಿ–ವಿಧಾನಗಳು ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 29.12.2021 ಬುಧವಾರ ಬೆಳಿಗ್ಗೆ 11:00 ಗಂಟೆಗೆ ವೀಡಿಯೋ ಕಾನ್ಫರೆನ್ಸ್ ಮೂಲಕ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಸ್ವಾಗತ ಮತ್ತು ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು, ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ರವರು ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದರು. ನಂತರ ಶ್ರೀ ಎಂ ಜಗದೀಶ್, ಸಹಕಾರ ಅಭಿವೃದ್ಧಿ ಅಧಿಕಾರಿಗಳು, ಇವರು ಸೌಹಾರ್ದ ಸಹಕಾರಿಗಳ ಚುನಾವಣೆಯ ಪೂರ್ವಭಾವಿ ಸಿದ್ಧತೆ ಹಾಗೂ ಚುನಾವಣೆ ನಡೆಸುವ ವಿಧಿ–ವಿಧಾನಗಳು ಕುರಿತು ಉಪನ್ಯಾಸ ನೀಡಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 95 ಸೌಹಾರ್ದ ಸಹಕಾರಿಗಳಿಂದ 131 ಪ್ರತಿನಿಧಿಗಳು ಭಾಗವಹಿಸಿದ್ದರು.



**ಕಲಬುರಗಿ :** ದಿನಾಂಕ 15.12.2021 ರಂದು ಕಲಬುರಗಿ ಪ್ರಾಂತದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರಿಗಾಗಿ ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಸಮಾಲೋಚನಾ ಸಭೆ ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಇತ್ತೀಚಿನ ತಿದ್ದುಪಡಿಗಳ ಕುರಿತು ತರಬೇತಿ ಕಾರ್ಯಕ್ರಮವನ್ನು ಶೃಂಗೇರಿ ಶಂಕರ ಮಠದಲ್ಲಿ ಅಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ವೈ.ಟಿ ಪಾಟೀಲರವರು ನೇರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನ ಮತ್ತು ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಸ್ ಪಾಟೀಲ ಇವರುಗಳು ಆಗಮಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರರಾದ ಶ್ರೀ ಶರಣಗೌಡ ಜಿ ಪಾಟೀಲರವರು ನುಡಿದರು. ಸ್ವಾಗತವನ್ನು ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು ಕೋರಿದರು. ಸೌಹಾರ್ದ ಸಹಕಾರಿಯ ಕಾಯ್ದೆಯ ಇತ್ತೀಚಿನ ತಿದ್ದುಪಡಿಗಳ ವಿಷಯದ ಕುರಿತು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಉಪನ್ಯಾಸ ನೀಡಿದರು. ತರಬೇತಿ ಕಾರ್ಯಕ್ರಮದಲ್ಲಿ 140 ಪ್ರತಿನಿಧಿಗಳು ಭಾಗವಹಿಸಿದ್ದರು.

## ವಿಷಯಾಧಾರಿತ ತರಬೇತಿ



**ರಾಯಚೂರು :** ದಿನಾಂಕ 09.12.2021 ರಂದು ರಾಯಚೂರು ಜಿಲ್ಲೆಯ ಸಿರವಾರ, ಮಾನವಿ ಮತ್ತು ದೇವದುರ್ಗ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ "ವಿಷಯಾಧಾರಿತ ತರಬೇತಿಯನ್ನು" ಸಂತೋಷಿ ಸರೋವರ ಹೋಟೆಲ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಗೋಪಾಲ ಚವ್ಹಾಣ, ಮಾನ್ಯ ಜಂಟಿ ನಿಬಂಧಕರು, ಕಲಬುರಗಿ ವಿಭಾಗ ರಾಯಚೂರು ಇವರು ನೇರವೆರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯ ಶೆಟ್ಟಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಬಸಣ್ಣ ರಾಠೋಡ ಮಾನ್ಯ ಉಪ ನಿರ್ದೇಶಕರು (ಪ್ರಭಾರ) ಲೆಕ್ಕಪರಿಶೋಧನಾ ಇಲಾಖೆ, ರಾಯಚೂರು ಇವರು ಆಗಮಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು ನೆರವೆರಿಸಿದರು, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಲಿಯಾಕತ್ ಅಲಿ, ನಿವೃತ್ತ ಸಹಾಯಕ ನಿಬಂಧಕರು, ಇವರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಗೆ ಇತ್ತೀಚಿಗೆ ಆದ ತಿದ್ದುಪಡಿಗಳ ಕುರಿತು ಮತ್ತು ಸಾಲ ವಸೂಲಾತಿಯ ಕುರಿತು ಹಾಗೂ ಶ್ರೀ ಶರಣಗೌಡ, ಸನ್ನದು ಲೆಕ್ಕಪರಿಶೋಧಕರು, ದಾವಾ ದಾಖಲಾತಿ ಹಾಗೂ ವೋಚರ ನಿರ್ವಹಣೆ ಕುರಿತು ಇವರುಗಳು ವಿಷಯಗಳ ಕುರಿತು ಉಪನ್ಯಾಸ ನೀಡಿದರು. 90 ಸೌಹಾರ್ದ ಸಹಕಾರಿಗಳಿಂದ 105 ಪ್ರತಿನಿಧಿಗಳು ಭಾಗವಹಿಸಿದ್ದರು.



**ರಾಯಚೂರು :** ದಿನಾಂಕ 10.12.2021 ರಂದು ರಾಯಚೂರು ಜಿಲ್ಲೆಯ ಸಿಂಧನೂರು, ಮಸ್ಕಿ ಮತ್ತು ಲಿಂಗಸೂಗೂರು ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ"ವಿಷಾಯಾಧಾರಿತ ತರಬೇತಿಯನ್ನು" ಹೋಟೆಲ್ ವಿವೆರಾ ಗ್ರ್ಯಾಂಡ್‌ನಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ವಿರುಪಾಕ್ಷಪ್ಪಾ, ಮಾನ್ಯ ಅಧ್ಯಕ್ಷರು, ರಾಯಚೂರು ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ರಾಯಚೂರು ಇವರು ನೇರವೆರಿಸಿದರು. ಅಧ್ಯಕ್ಷತೆಯನ್ನು

18ನೇ ಪುಟಕ್ಕೆ.....

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

### ಜನವರಿ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### ಫೆಬ್ರವರಿ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | | | | | |

### ಮಾರ್ಚ್ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### ಏಪ್ರಿಲ್ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

### ಮೇ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

### ಜೂನ್ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

### ಜುಲೈ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

### ಆಗಸ್ಟ್ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

### ಸೆಪ್ಟೆಂಬರ್ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

### ಆಕ್ಟೋಬರ್ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### ನವೆಂಬರ್ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | | | |

### ಡಿಸೆಂಬರ್ 2022

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | 31 |

**“ಸೌಹಾರ್ದ ಸಹಕಾರಿ ಸೌಧ”, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸ ರಸ್ತೆ,**

# 2022

ಸಹಕಾರಿಗಳ ನಡೆ
ಗುಣಮಟ್ಟದ ಕಡೆ



ಸ್ವಾತಂತ್ರ್ಯದ
ಅಮೃತ ಮಹೋತ್ಸವ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

## ಸಂಯುಕ್ತ ಸಹಕಾರಿಯ ರಜಾ ದಿನಗಳು

| | | | | | |
|---|---|---|---|---|---|
| 1. | ಜನವರಿ 15 | ಮಕರ ಸಂಕ್ರಾಂತಿ | 09. | ಆಗಸ್ಟ್ 31 | ವರಸಿದ್ಧಿ ವಿನಾಯಕ ವ್ರತ |
| 2. | ಜನವರಿ 26 | ಗಣರಾಜ್ಯೋತ್ಸವ | 10. | ಅಕ್ಟೋಬರ್ 4 | ಮಹಾನವಮಿ/ಆಯುಧ ಪೂಜೆ |
| 3. | ಮಾರ್ಚ್ 1 | ಮಹಾಶಿವರಾತ್ರಿ | 11. | ಅಕ್ಟೋಬರ್ 5 | ವಿಜಯದಶಮಿ |
| 4. | ಏಪ್ರಿಲ್ 2 | ಯುಗಾದಿ | 12. | ಅಕ್ಟೋಬರ್ 24 | ನರಕ ಚತುರ್ದಶಿ |
| 5. | ಏಪ್ರಿಲ್ 14 | ಡಾ.ಬಿ.ಆರ್.ಅಂಬೇಡ್ಕರ್/ಮಹಾವೀರ ಜಯಂತಿ | 13. | ಅಕ್ಟೋಬರ್ 25 | ದೀಪಾವಳಿ ಅಮಾವಾಸ್ಯೆ |
| 6. | ಏಪ್ರಿಲ್ 15 | ಗುಡ್‌ಫ್ರೈಡೆ | 14. | ಅಕ್ಟೋಬರ್ 26 | ದೀಪಾವಳಿ |
| 7. | ಆಗಸ್ಟ್ 9 | ಮೊಹರಂ ಕಡೇ ದಿನ | 15. | ನವೆಂಬರ್ 1 | ಕನ್ನಡ ರಾಜ್ಯೋತ್ಸವ |
| 8. | ಆಗಸ್ಟ್ 15 | ಸ್ವಾತಂತ್ರ್ಯ ದಿನಾಚರಣೆ | | | |

ವಾರದ ಎಲ್ಲಾ ಭಾನುವಾರಗಳು ಹಾಗೂ ಮೇಲೆ ತಿಳಿಸಿದ 15 ದಿನಗಳು ಮಾತ್ರ.

ಮಲ್ಲೇಶ್ವರಂ, ಬೆಂಗಳೂರು - 560 055, ದೂ : 080-23378375 - 80

.....15ನೇ ಪುಟದಿಂದ

ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಆರ್ ತಿಮ್ಮಯ್ಯ ಶೆಟ್ಟಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಬಿ.ರಾಜಶೇಖರ ಮಾನ್ಯ ಅಧ್ಯಕ್ಷರು, ಸಿಂಧು ಪತ್ತಿನ ಸೌಹಾರ್ದ ಸಹಕಾರಿ ನಿ.,ಸಿಂಧನೂರು ಮತ್ತು ಶ್ರೀ ಮಲ್ಲಯ್ಯ ಮಾನ್ಯ ಸಹಾಯಕ ನಿಬಂಧಕರು ಸಿಂಧನೂರು ಉಪವಿಭಾಗ ಇವರುಗಳು ಆಗಮಿಸಿದ್ದರು. ಪ್ರಾಸ್ತಾವಿಕ ನುಡಿಯನ್ನು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು ನೆರವೇರಿಸಿದರು, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಲಿಯಾಕತ್ ಅಲಿ, ನಿವೃತ್ತ ಸಹಾಯಕ ನಿಬಂಧಕರು, ಇವರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಗೆ ಇತ್ತೀಚಿಗೆ ಆದ ತಿದ್ದುಪಡಿಗಳ ಕುರಿತು ಮತ್ತು ಶ್ರೀ ಶರಣಗೌಡ ಸನ್ನದು ಲೆಕ್ಕಪರಿಶೋಧಕರು ಇವರು ಸಾಲ ವಸೂಲಾತಿ ಮತ್ತು ದಾವಾ ದಾಖಲಾತಿ ಹಾಗೂ ವೋಚರ ನಿರ್ವಹಣೆ ಕುರಿತು ಇವರುಗಳು ವಿಷಯಗಳ ಕುರಿತು ಉಪನ್ಯಾಸ ನೀಡಿದರು, 95 ಸೌಹಾರ್ದ ಸಹಕಾರಿಗಳಿಂದ 110 ಪ್ರತಿನಿಧಿಗಳು ಭಾಗವಹಿಸಿದ್ದರು.

## ಕಲಬುರಗಿ ಪ್ರಾಂತೀಯ ಕಛೇರಿಯ ನೂತನ ಕಟ್ಟಡದ ಪ್ರಗತಿ ಪರಿಶೀಲನಾ ಸಭೆ.

**ಕಲಬುರಗಿ :** ದಿನಾಂಕ 15.12.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಪ್ರಾಂತೀಯ ಕಛೇರಿಯ ಕಟ್ಟಡದ ಕಾರ್ಯವನ್ನು ಪರಿಶೀಲಿಸಿ ಮುಂದಿನ ಕಾರ್ಯರೂಪಗಳ ಬಗ್ಗೆ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಸಂಜೀವ ಮಹಾಜನ, ಶ್ರೀ ವೈ.ಟಿ ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್‌ರವರು, ಗುತ್ತಿಗೆದಾರರಾದ ಭೀಮರಾವ ಪಾಟೀಲ, ವಾಸ್ತುಶಿಲ್ಪಿಗಳಾದ ಶ್ರೀ ಖಂಡೆರಾವ ಹಾಗೂ ಸಿವಿಎಲ್ ಇಂಜೀನಿಯರರಾದ ಶ್ರೀ ವಿಕ್ರಾಂತರವರು ಉಪಸ್ಥಿತರಿದ್ದರು

## ಕ್ಲಸ್ಟರ್ ತರಬೇತಿ ಕಾರ್ಯಕ್ರಮ

**ಮೈಸೂರು :** ರೈತ ಕೂಲಿ ಕಾರ್ಮಿಕರ ಸೌಹಾರ್ದ ಸಹಕಾರಿ ನಿ., ಈ ಸಹಕಾರಿಯ ನಿರ್ದೇಶಕರಿಗೆ ಆಡಳಿತ ಮಂಡಲಿ ಸದಸ್ಯರ ಅಧಿಕಾರಗಳು ಮತ್ತು ಕರ್ತವ್ಯಗಳ ಕುರಿತು ಕ್ಲಸ್ಟರ್ ತರಬೇತಿ ಕಾರ್ಯಕ್ರಮವನ್ನು ದಿನಾಂಕ 01 ಡಿಸೆಂಬರ್ 2021ರಂದು ಕಾಳಿಹುಂಡಿ, ಕಾವೇರಿಪುರ ಅಂಚೆ, ತಲಕಾಡು ಹೋಬಳಿ, ಟಿ. ನರಸೀಪುರ, ಮೈಸೂರು ಜಿಲ್ಲೆಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಆಡಳಿತ ಮಂಡಲಿ ಸದಸ್ಯರ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಿದ್ದರು.

## ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್‌ಗೆ ಬೀದರ್‌ನ ಮಹಿಳಾ ಅರ್ಬನ್ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ವಿಲೀನಕ್ಕೆ ಆರ್.ಬಿ.ಐ ಹಾಗೂ ಸಹಕಾರ ಇಲಾಖೆ ಅನುಮತಿ

**ಹೊಸಪೇಟೆ :** ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್‌ನೊಂದಿಗೆ ಬೀದರನ ಮಹಿಳಾ ಅರ್ಬನ್ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ವಿಲೀನಗೊಳ್ಳಲು ಆರ್‌ಬಿಐ ಅನುಮತಿ ನೀಡಿದೆ ಎಂದು ವಿಕಾಸ ಬ್ಯಾಂಕ್ ಅಧ್ಯಕ್ಷ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಹಿರೇಮಠ ತಿಳಿಸಿದರು.

ಅಶಕ್ತ ಸಹಕಾರಿ ಬ್ಯಾಂಕ್‌ಗಳನ್ನು ಸಶಕ್ತ ಸಹಕಾರಿ ಬ್ಯಾಂಕ್‌ಗಳೊಂದಿಗೆ ವಿಲೀನಗೊಳಿಸುವ ಮೂಲಕ ಠೇವಣಿದಾರರ ಹಿತಕಾಯುವ ರಿಸರ್ವ್ ಬ್ಯಾಂಕ್‌ನ ನೀತಿಗೆ ಅನುಗುಣವಾಗಿ ಬೀದರನ ಮಹಿಳಾ ಅರ್ಬನ್ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಅನ್ನು ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್‌ನೊಂದಿಗೆ ವಿಲೀನಗೊಳಿಸಲು ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅನುಮೋದನೆ ನೀಡಿದೆ. ಇದಕ್ಕೆ ರಿಸರ್ವ್ ಬ್ಯಾಂಕ್ ಹಾಗೂ ಸಹಕಾರ ಇಲಾಖೆ ಅನುಮತಿ ನೀಡಿದೆ ಎಂದು ತಿಳಿಸಿದರು.

## ಸುಕೋ ಬ್ಯಾಂಕ್‌ನಲ್ಲಿ ಕಾರಟಗಿಯ ಶ್ರೀ ಶರಣ ಬಸವೇಶ್ವರ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕ್ ವಿಲೀನ : ಸುಕೋ ಬ್ಯಾಂಕ್ ಶಾಖೆಗಳ ಸಂಖ್ಯೆ 29ಕ್ಕೆ ಏರಿಕೆ

**ಬಳ್ಳಾರಿ :** ಸುಕೋ ಸೌಹಾರ್ದ ಸಹಕಾರಿ ಬ್ಯಾಂಕ್‌ನಲ್ಲಿ ಕಾರಟಗಿಯ ಶ್ರೀ ಶರಣ ಬಸವೇಶ್ವರ ಸೌಹಾರ್ದ ಪಟ್ಟಣ ಸಹಕಾರಿ ಬ್ಯಾಂಕ್ ನಿಯಮಿತವನ್ನು ಸಂಪೂರ್ಣವಾಗಿ ವಿಲೀನಗೊಳಿಸಲು ಸಹಕಾರ ಸಂಘಗಳ ನಿಬಂಧಕರು ಆದೇಶ ನೀಡಿದ್ದಾರೆ.ಈ ಕುರಿತು ಸುಕೋ ಬ್ಯಾಂಕ್‌ನ ಅಧ್ಯಕ್ಷ ಮೋಹಿತ್ ಮಸ್ಕಿ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದ್ದು, ಸಹಕಾರ ಸಂಘಗಳ ನಿಬಂಧಕರಾದ ಎಸ್. ಜಿಯಾಉಲ್ಲಾ ಅವರು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ 1997 ಪ್ರಕರಣ 12 ಮತ್ತು 13ರ ಪ್ರಕಾರ ಈ ಆದೇಶ ಜಾರಿ ಮಾಡಿದ್ದಾರೆ ಎಂದರು.

# ಪತ್ರಿಕಾ ಗೋಷ್ಠಿ



**ಚಿಕ್ಕಮಗಳೂರು** : ದಿನಾಂಕ 09.12.2021ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು "ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, ಸಂಯುಕ್ತ ಸಹಕಾರಿ ವಾರ್ಷಿಕ ಮಹಾಸಭೆ ಹಾಗೂ ಇನ್ನಿತರೆ ಅಂಶಗಳ" ಕುರಿತು ಚಿಕ್ಕಮಗಳೂರು ಪ್ರೆಸ್ ಕ್ಲಬ್ ನಲ್ಲಿ ಪತ್ರಿಕಾಗೋಷ್ಠಿ ನಡೆಸಿದರು. ಈ ಸಂದರ್ಭದಲ್ಲಿ ಶ್ರೀ ನಟರಾಜ ರವರು, ಮಾನ್ಯ ನಿಕಟಪೂರ್ವ ಅಧ್ಯಕ್ಷರು, ದಿವಿಜ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಕೆಎಂ, ಶ್ರೀ ದೇವರಾಜ ರವರು, ಮಾನ್ಯ ಅಧ್ಯಕ್ಷರು, ಸಮಾನ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಕೆಎಂ, ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಉಪಸ್ಥಿತರಿದ್ದರು.




**ಹಾಸನ** : ದಿನಾಂಕ 09.12.2021ರಂದು ಸಂಯುಕ್ತ ಸಹಕಾರಿಯ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ರವರು "ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ, ಸಂಯುಕ್ತ ಸಹಕಾರಿ ವಾರ್ಷಿಕ ಮಹಾಸಭೆ ಹಾಗೂ ಇನ್ನಿತರೆ ಅಂಶಗಳ" ಕುರಿತು ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನ, ಹಾಸನ ದಲ್ಲಿ ಪತ್ರಿಕಾಗೋಷ್ಠಿ ನಡೆಸಿದರು. ಈ ಸಂದರ್ಭದಲ್ಲಿ ಶ್ರೀ ರಮೇಶ್ ರವರು, ಮಾನ್ಯ ಅಧ್ಯಕ್ಷರು, ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ, ಶ್ರೀ ಮಾಧವ ಶಣೈ ರವರು, ಮಾನ್ಯ ಅಧ್ಯಕ್ಷರು, ಹಾಸನ ವರ್ತಕರ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಸನ, ಶ್ರೀ ಶಾಮ್ ಸುಂದರ್ ರವರು, ಶ್ರೀ ಸಾಯಿ ಸಿರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಹಾಸನ ಹಾಗೂ ಶ್ರೀ ಕುಮಾರ್, ಅಧ್ಯಕ್ಷರು, ಶ್ರೀಯ ಸೌಹಾರ್ದ ಸಹಕಾರಿ ನಿ., ಹಾಸನ ಇವರುಗಳು ಉಪಸ್ಥಿತರಿದ್ದರು.




**ಕಲಬುರಗಿ** : ದಿನಾಂಕ 15.12.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ, ಹಾಗೂ ಸಂಯುಕ್ತ ಸಹಕಾರಿಯ ವಾರ್ಷಿಕ ಮಹಾಸಭೆಯ ಕುರಿತು ಪತ್ರಿಕಾಗೊಷ್ಠಿಯು ಕಲಬುರಗಿ ಜಿಲ್ಲೆಯ ಪತ್ರಿಕಾ ಭವನದಲ್ಲಿ ಜರುಗಿತ್ತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಸಂಜೀವ ಮಹಾಜನ, ಶ್ರೀ ವೈ.ಟಿ ಪಾಟೀಲ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್‌ರವರು ಹಾಗೂ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಎಸ್ ಪಾಟೀಲರವರು ಉಪಸ್ಥಿತರಿದ್ದರು.



**ಬೀದರ** : ದಿನಾಂಕ 16.12.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ, ಹಾಗೂ ಸಂಯುಕ್ತ ಸಹಕಾರಿಯ ವಾರ್ಷಿಕ ಮಹಾಸಭೆಯ ಕುರಿತು ಪತ್ರಿಕಾಗೊಷ್ಠಿಯು ಬೀದರ ಜಿಲ್ಲೆಯ ಪತ್ರಿಕಾ ಭವನದಲ್ಲಿ ಜರುಗಿತ್ತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ್, ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆಯವರು, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್‌ರವರು ಹಾಗೂ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರು, ನಿರ್ದೇಶಕರು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



**ಉಡುಪಿ :** ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರುಗಳಾದ ಶ್ರೀ ಮಂಜುನಾಥ ಎಸ್.ಕೆ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಇವರುಗಳು ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಗ್ರಜ ಸೌಹಾರ್ದ ಸಹಕಾರಿ ನಿ., ಇದಕ್ಕೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.



**ಉಡುಪಿ :** ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರುಗಳಾದ ಶ್ರೀ ಮಂಜುನಾಥ ಎಸ್.ಕೆ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಇವರುಗಳು ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಸ ಚೈತನ್ಯ ಸೌಹಾರ್ದ ಸಹಕಾರಿ ನಿ. ಇದಕ್ಕೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.



**ಉಡುಪಿ :** ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರುಗಳಾದ ಶ್ರೀ ಮಂಜುನಾಥ ಎಸ್.ಕೆ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಇವರುಗಳು ಉಡುಪಿಯ ಕಲ್ಯಾಣಪುರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮದರ್ ಮೇರಿ ಸೌಹಾರ್ದ ಸಹಕಾರಿ ನಿ. ಇದಕ್ಕೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.



**ಉಡುಪಿ :** ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರುಗಳಾದ ಶ್ರೀ ಮಂಜುನಾಥ ಎಸ್.ಕೆ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಇವರುಗಳು ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಜನಹಿತ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಇದಕ್ಕೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.



**ಉಡುಪಿ :** ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಹಾಗೂ ನಿರ್ದೇಶಕರುಗಳಾದ ಶ್ರೀ ಮಂಜುನಾಥ ಎಸ್.ಕೆ ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸದಾಶಿವ ಶೆಟ್ಟಿ ಇವರುಗಳು ಉಡುಪಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಿರ್ಮಾಣ್ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿ. ಇದಕ್ಕೆ ಭೇಟಿ ನೀಡಿ ಸಹಕಾರಿಯ ಕಾರ್ಯಚಟುವಟಿಕೆ ಕುರಿತು ಚರ್ಚಿಸಿ ಅಗತ್ಯ ಮಾರ್ಗದರ್ಶನ ನೀಡಿದರು.



**ಕಲಬುರಗಿ :** ದಿನಾಂಕ 15.12.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಮತ್ತು ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಕಲಬುರಗಿ ಪ್ರಾಂತದ ಕಲಬುರಗಿ ನಗರದ ಶ್ರೀ ಮಹಾದೇವ ಪತ್ತಿನ ಸೌಹಾರ್ದ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಯ ಕುರಿತು ಮಾರ್ಗದರ್ಶನ ನೀಡಿದರು.



**ಕಲಬುರಗಿ :** ದಿನಾಂಕ 15.12.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಮತ್ತು ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಕಲಬುರಗಿ ಪ್ರಾಂತದ ಕಲಬುರಗಿ ನಗರದ ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ನಿ.,ಕಲಬುರಗಿ ಈ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಸಹಕಾರಿಯ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಯ ಕುರಿತು ಮಾರ್ಗದರ್ಶನ ನೀಡಿದರು.

**ಬೆಳಗಾವಿ :** ದಿನಾಂಕ 04 ಡಿಸೆಂಬರ್ 2021 ಬೆಳಗಾವಿ ಹಾಗೂ ಕಲಬುರಗಿ ಪ್ರಾಂತದ ಸಿಬ್ಬಂದಿಗಳಿಗೆ " ಸಹಕಾರಿಗಳ ಪರಿವೀಕ್ಷಣೆ" ಕುರಿತು ಆನ್‌ಲೈನ್ ಮೂಲಕ ತರಬೇತಿಯನ್ನು ಆಯೋಜಿಸಲಾಗಿತ್ತು. ತರಬೇತಿಯಲ್ಲಿ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು ಹಾಗೂ ತರಬೇತಿಯ ಉಪನ್ಯಾಸಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ರಘುನಂದನ ಕೆ, ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೂಗಾರ, ಬಸವರಾಜ ಹೊಂಗಲ, ಕಾನೂನು ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ, ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 33 ಸಿಬ್ಬಂದಿಗಳು ಭಾಗವಹಿಸಿದ್ದರು.



**ಬೀದರ :** ದಿನಾಂಕ 16.12.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಮತ್ತು ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ಬೀದರ ಜಿಲ್ಲೆಯ ಬೀದರ ನಗರದ ಶಿವಶರಣೆ ಹೆಮರೆಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ನಿ., ಬೀದರ ಈ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಯ ಕುರಿತು ಮಾರ್ಗದರ್ಶನ ನೀಡಿದರು. ಸಹಕಾರಿ ವತಿಯಿಂದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಿಗೆ, ನಿರ್ದೇಶಕರಿಗೆ ಸನ್ಮಾನಿಸಿದರು.



**ಬೀದರ :** ದಿನಾಂಕ 16.12.2021 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿಯವರು ಮತ್ತು ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರವರು ಬೀದರ ಜಿಲ್ಲೆಯ ಬೀದರ ನಗರದ ಆಂಜನೇಯ ಸೌಹಾರ್ದ ಸಹಕಾರಿ ನಿ.,ಬೀದರ ಈ ಸಹಕಾರಿಗೆ ಭೇಟಿ ನೀಡಿ ಸಹಕಾರಿಯ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಯ ಕುರಿತು ಮಾರ್ಗದರ್ಶನ ನೀಡಿದರು.

**ಜಮಖಂಡಿ :** ಶ್ರೀ ಪ್ರಭುಲಿಂಗೇಶ್ವರ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಜಮಖಂಡಿ. ಬಾಗಲಕೋಟ ಜಿಲ್ಲೆ, ಸಹಕಾರಿಯು ಸಂಯುಕ್ತ ಸಹಕಾರಿಗೆ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿಯ ಚೆಕ್‌ನ್ನು ಸಲ್ಲಿಸಿರುತ್ತದೆ. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಬಾಗಲಕೋಟ ಜಿಲ್ಲಾ ಸಂಯೋಜ–ಕರಾದ ಶ್ರೀ ನಾಗರಾಜ ಜಿ.ಹೆಚ್. ಮತ್ತು ಸಹಕಾರಿಯ ಆಡಳಿತ ಮಂಡಲಿ ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

**ಶಿವಮೊಗ್ಗ :** ದಿನಾಂಕ 18.12.2021 ರಂದು ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಶಿವಮೊಗ್ಗ, ಇದರ ವಾರ್ಷಿಕ ಸಾಮಾನ್ಯ ಸಭೆಯು ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಜರುಗಿತು. ಹಿರಿಯ ಸಹಕಾರಿಗಳಾದ ಶ್ರೀ ಹೆಚ್. ಎಸ್. ಮಂಜಪ್ಪ ಇವರು ಉಪಸ್ಥಿತರಿದ್ದರು.

# ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಗಳು

## ಹೆಚ್ಚು ದುಡಿಯುವ ಬಂಡವಾಳ ಹೊಂದಿರುವ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ :

ಈಗಾಗಲೇ ಹೆಚ್ಚು ದುಡಿಯುವ ಹೊಂದಿರುವ 604 ಸೌಹಾರ್ದ ಸಹಕಾರಿಗಳಿಗೆ ಪರಿವೀಕ್ಷಣೆ ಆದೇಶ ಮಾಡಲಾಗಿರುತ್ತದೆ. ಪ್ರಸ್ತುತ ದಿನಾಂಕ 01.12.2021 ರಂದು ಬೆಳಗಾವಿ ಪ್ರಾಂತದ 05–10 ಕೋಟಿ ದುಡಿಯುವ ಬಂಡವಾಳ ಹೊಂದಿರುವ 45 ಸೌಹಾರ್ದ ಸಹಕಾರಿಗಳಿಗೆ, ಕಲಬುರಗಿ ಪ್ರಾಂತದಿಂದ 03–05 ಕೋಟಿ ದುಡಿಯುವ ಬಂಡವಾಳ ಹೊಂದಿರುವ 40 ಸೌಹಾರ್ದ ಸಹಕಾರಿಗಳಿಗೆ ಹಾಗೂ ದಿನಾಂಕ 07.12.2021 ರಂದು ಮೈಸೂರು ಪ್ರಾಂತದಿಂದ 01–03 ಕೋಟಿ ದುಡಿಯುವ ಬಂಡವಾಳ ಹೊಂದಿರುವ 46 ಸೌಹಾರ್ದ ಸಹಕಾರಿಗಳಿಗೆ, ಮೂರು ಪ್ರಾಂತಗಳಿಂದ ಒಟ್ಟು 131 ಸೌಹಾರ್ದ ಸಹಕಾರಿಗಳಿಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿಗಳ ಮೂಲಕ ಪರಿವೀಕ್ಷಣಾ ಆದೇಶವನ್ನು ಮಾಡಲಾಗಿರುತ್ತದೆ.

## ಆದಾಯ ತೆರಿಗೆ

### ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ಪರವಾಗಿ ಕರ್ನಾಟಕ ಹೈ-ಕೋರ್ಟ್ ಧಾರವಾಡ ಪೀಠ ತೀರ್ಪು ;

ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಚಿಕ್ಕೋಡಿ ಇವರಿಗೆ ಆದಾಯ ತೆರಿಗೆ ಅಧಿಕಾರಿ ನಿಪ್ಪಾಣಿಯವರು ವಿಧಿಸಿದ್ದ ಆದಾಯ ತೆರಿಗೆ ಆದೇಶದ ಮೇಲೆ ಕರ್ನಾಟಕ ಹೈಕೋರ್ಟ್ ನಲ್ಲಿ ಆಪೀಲು ಸಲ್ಲಿಸಲಾಗಿತ್ತು. ಈ ಆಪೀಲ್ ಅನ್ನು ಆಲಿಸಿದ ಕರ್ನಾಟಕ ಹೈಕೋರ್ಟ್ ಧಾರವಾಡ ಪೀಠ ಇವರು ದಿನಾಂಕ 15.11.2021 ರಂದು ಆದೇಶ ನೀಡಿ ಶ್ರೀ ಸಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ಚಿಕ್ಕೋಡಿ ಇದು ಸಹಕಾರ ಸಂಘಗಳ ಕಾಯ್ದೆಯ ವ್ಯಾಪ್ತಿಗೆ ಬರುವುದರಿಂದ ಇವರು ಆದಾಯ ತೆರಿಗೆ ಕಾಯ್ದೆ 80 ಪಿ ಇದರ ವ್ಯಾಪಿಗೆ ಬರುತ್ತದೆ ಆದ್ದರಿಂದ ಇವರಿಗೆ ಆದಾಯ ತೆರಿಗೆ ಅನ್ವಯಿಸುವುದಿಲ್ಲವೆಂದು ತೀರ್ಪು ನೀಡಿರುತ್ತಾರೆ.

## ಸತತ ಆರು ವರ್ಷಗಳಿಂದ ಶೇ.25ರ ಡಿವಿಡೆಂಡ್ ಹಂಚಿಕೆ.



**ಸಾಲಿಗ್ರಾಮ :** ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿಯಮಿತ ಸಾಲಿಗ್ರಾಮ ಇದರ ಹನ್ನೊಂದನೇ ವಾರ್ಷಿಕ ಸಾಮಾನ್ಯ ಸಭೆಯು ಇತ್ತೀಚಿಗೆ ಸಂಘದ ಆಡಳಿತ ಕಛೇರಿಯಲ್ಲಿ ಸಂಘದ ಅಧ್ಯಕ್ಷ ಆನಂದ ಸಿ.ಕುಂದರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ಸಾಲಿನಲ್ಲಿ ಕರೋನಾ ಆಪತ್ತು ಇದ್ದಾಗ ಕೂಡಾ ಸಾಲಗಾರ ಸದಸ್ಯರ ಮನ ವಲಿಸುವುದರ ಮೂಲಕ ಶೇ. 99 ರ ವಸೂಲಿ ಸಾಧನೆ ಗೈದು ರೂ. 23.20 ಲಕ್ಷದಷ್ಟರ ನಿವ್ವಳ ಲಾಭ ಗಳಿಸಿದೆ. ಕಳೆದ 2020–21ನೇ ಸಾಲಿನಲ್ಲಿ ರೂಪಾಯಿ ಮೂವತ್ತು ಕೋಟಿಗೂ ಅಧಿಕ ವ್ಯವಹಾರ ನಡೆಸಿ ರೂಪಾಯಿ ಒಂಬತ್ತು ಕೋಟಿಗೂ ಅಧಿಕ ಠೇವಣಿ ಸಂಗ್ರಹಿಸಿ ಆರು ಕೋಟಿಗೂ ಮಿಕ್ಕಿ ಸಾಲ ವಿತರಿಸಿದೆ. ಗಳಿಸಿದ ಲಾಭದಲ್ಲಿ ಶೇ. 25 ಡಿವಿಡೆಂಟ್ ಹಂಚಿಕೆ ಮಾಡುವುದರ ಮೂಲಕ ಕಳೆದ ಸತತ ಆರು ವರ್ಷಗಳಿಂದ ಶೇ. 25 ಡಿವಿಡೆಂಟ್ ವಿತರಿಸಿದೆ.

ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಜನಾನುರಾಗಿ ಸ್ಥಳೀಯ ವೈದ್ಯರಾದ ಡಾ. ಸುಧಾಕರ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಹೆಸರುಗಳಿಸಿದ ಮಧುಸೂದನ ಬ್ಯಾರಿಯವರನ್ನು ಸನ್ಮಾನಿಸಲಾಯಿತು. ಅಲ್ಲದೇ ಕಳೆದ ಶೈಕ್ಷಣಿಕ ವರ್ಷದಲ್ಲಿ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪುರಸ್ಕೃತರಾದ ಶ್ರೀ ನರೇಂದ್ರ ಕುಮಾರ್ ಕೋಟ ಮತ್ತು ಪಿ. ವಿ. ಆನಂದ್ ಇವರುಗಳನ್ನು ಕೂಡಾ ಗೌರವಿಸಲಾಯಿತು. ಅದೇ ರೀತಿ ಕಳೆದ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್. ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಶಾಲಾವಾರು ಅತ್ಯಧಿಕ ಅಂಕಗಳಿಸಿದ ವಿಧ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಂಘವು ಆರಂಭದಿಂದಲೂ ಲಾಭದಲ್ಲಿದ್ದು ಪ್ರಜ್ಞಾವಂತ ಸದಸ್ಯರ ಸಹಕಾರ, ಧಕ್ಷ ಆಡಳಿತ ಮಂಡಳಿಯ ಮಾರ್ಗದರ್ಶನ ಹಾಗೂ ನಿಷ್ಠಾವಂತ ಶಿಬಂಧಿಯವರ ಪ್ರಾಮಾಣಿಕ ಪ್ರಯತ್ನದ ಫಲದಿಂದ ಸಂಘವು ವರ್ಷದಿಂದ ವರ್ಷಕ್ಕೆ ಪ್ರಗತಿಯ ಪಥದಲ್ಲಿ ಸಾಗಿ ಯಶಸ್ಸು ಕಂಡಿದೆ. ಸಂಘದ ಸ್ವಂತ ಕಛೇರಿ ಬಗ್ಗೆ ಈಗಾಗಲೇ ನಿವೇಶನವನ್ನು ಖರೀದಿಸಿದ್ದು ಸದ್ಯದಲ್ಲಿಯೇ ಸುಸಜ್ಜಿತ ಕಟ್ಟಡ ನಿರ್ಮಿಸಿ ಸದಸ್ಯರ ಸೇವೆಗೆ ಅರ್ಪಿಸುವ ಯೋಜನೆ ಹೊಂದಿದೆ ಎಂದರು.

## ಲಕ್ಷ್ಮೀ ವಿಕಾಸ ಸೌಹಾರ್ದ ಸಹಕಾರಿಯ ಕಿಣಿ ಸುಲ್ತಾನ್ ಶಾಖೆಯ ಉದ್ಘಾಟನೆ



**ಕಲಬುರಗಿ :** ಲಕ್ಷ್ಮೀ ವಿಕಾಸ ಸೌಹಾರ್ದ ಸಹಕಾರಿ ನಿ., ತಡಕಲ ಇದರ ಕಿಣಿ ಸುಲ್ತಾನ್ ಶಾಖೆಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರವರು ನೇರವೇರಿಸಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಷ.ಬ್ರ. ಶ್ರೀ ಸಿದ್ದಮಲ್ಲ ಶಿವಾಚಾರ್ಯರವರು ಹಿರೆಮಠ ತಡಕಲ ವಹಿಸಿದರು, ನೇತೃತ್ವ ಷ.ಬ್ರ. ಶ್ರೀ ಶಿವಶಾಂತಲಿಂಗೇಶ್ವರ ಶಿವಾಚಾರ್ಯರು ಹಿರೆಮಠ ಕಿಣ್ಣಿಸುಲ್ತಾನ ವಹಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಶ್ರೀ ವೈ.ಟಿ.ಪಾಟೀಲರವರು ಹಾಗೂ ಕಲಬುರಗಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರು ಶ್ರೀ ಎಸ್ ಎಸ್ ಪಾಟೀಲರವರು, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ರಾಜಶೇಖರ ಹೆಚ್ ರವರು, ಹಾಗೂ ಬೀದರ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ರಾಜಶೇಖರ ನಾಗಮೂರ್ತಿರವರು, ಹಾಗೂ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀ ಶಾಂತಿನಾಥ ಪಂಡಿತರವರು ಸಹಕಾರಿಯ ಅಧ್ಯಕ್ಷರಾದ ಶ್ರೀ ಲಕ್ಷ್ಮೀಕಾಂತರವರು ಹಾಗೂ ಉಪಾಧ್ಯಕ್ಷರು ಮತ್ತು ಸಹಕಾರಿಯ ಆಡಳಿತ ಸದಸ್ಯರು ಉಪಸ್ಥಿತರಿದ್ದರು.

## ಉಡುಪಿ ಮೀನು ಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾಗಿ ಬೇಬಿ ಎಚ್.ಸಾಲ್ಯಾನ್ ಕೊಡವೂರು ಪುನರಾಯ್ಕೆ.



**ಉಡುಪಿ :** ಉಡುಪಿ ಮೀನು ಮಾರಾಟಗಾರರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಸಂಘದ ಮುಂದಿನ 5 ವರ್ಷಗಳ ಅವಧಿಗೆ ನೂತನ ಅಧ್ಯಕ್ಷರಾಗಿ ಶ್ರೀಮತಿ ಬೇಬಿ ಎಚ್. ಸಾಲ್ಯಾನ್ ಕೊಡವೂರು ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ. ಸಂಘದ ಉಪಾಧ್ಯಕ್ಷರಾಗಿ ಶ್ರೀಮತಿ ಜಯಂತಿ ಗುರುದಾಸ್ ಬಂಗೇರ ಕಿದಿಯೂರು, ನಿರ್ದೇಶಕರುಗಳಾಗಿ ಶ್ರೀ ಯಶ್‌ಪಾಲ್ ಎ. ಸುವರ್ಣ ಉಡುಪಿ, ಶ್ರೀ ಸುರೇಶ್ ಬಿ. ಕುಂದರ್ ಮಲ್ಪೆ, ಶ್ರೀ ನಾರಾಯಣ ಪಿ.ಕುಂದರ್ ಕಲ್ಮಾಡಿ, ಶ್ರೀ ಹರೀಶ್ ಜಿ.ಕರ್ಕೇರ ಮಲ್ಪೆ, ಶ್ರೀಮತಿ ಲಕ್ಷ್ಮೀ ಆನಂದ್ ಪಿತ್ರೋಡಿ, ಶ್ರೀಮತಿ ಸರೋಜ ಕಾಂಚನ್ ಬ್ರಹ್ಮಾವರ, ಶ್ರೀಮತಿ ಭಾನುಮತಿ ವಿ.ಮೆಂಡನ್ ಕಾಪು, ಶ್ರೀಮತಿ ಸುನೀತ ಜೆ.ಬಂಗೇರ ಉಚ್ಚಿಲ, ಶ್ರೀಮತಿ ಇಂದಿರಾ ವಿ.ಕಾಂಚನ್ ಕಲ್ಮಾಡಿ ಆಯ್ಕೆಯಾಗಿದ್ದಾರೆ.

## ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಆಯ್ಕೆ

### ಭಾಗ್ಯಲಕ್ಷ್ಮೀ ವಿವಿಧೋದ್ದೇಶ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ



ಶ್ರೀ ಕೆ. ಎಸ್. ಹೊಸಮಠ
ಅಧ್ಯಕ್ಷರು



ಶ್ರೀ ಅಶೋಕ ಪಿ. ಮುತ್ತಿನ
ಉಪಾಧ್ಯಕ್ಷರು

### ಶ್ರೀ ಶಂಕರಲಿಂಗೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಕಲಬುರಗಿ.



ಶ್ರೀ ಅಂಬರಾಯ ಈರಣ್ಣ ಪಟ್ಟಣಕರ
ಅಧ್ಯಕ್ಷರು



ಶ್ರೀ ಹಣಮಂತರಾಯ ಚಂದ್ರಶಾ ದಿಗಸಂಗಿ
ಉಪಾಧ್ಯಕ್ಷರು

## ಶಾಖೆ ಉದ್ಘಾಟನೆ



**ಉತ್ತರ ಕನ್ನಡ :** ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿಯಮಿತ, ಹೊನ್ನಾವರ ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ 11 ಶಾಖೆಗಳನ್ನು ಹೊಂದಿದ್ದು, ಇದೀಗ ತನ್ನ ಕಾರ್ಯವ್ಯಾಪ್ತಿಯನ್ನು ಬೀದರ ಜಿಲ್ಲೆ ಹೊರತುಪಡಿಸಿ ರಾಜ್ಯದ ಉಳಿದ ಜಿಲ್ಲೆಗಳಿಗೆ ವಿಸ್ತರಿಸಿಕೊಂಡಿದ್ದು ಅದರಂತೆ ದಿನಾಂಕ 13–11–2021 ರಂದು ಸಹಕಾರಿಯ 12ನೇ ಮತ್ತು ಹೊರಜಿಲ್ಲೆಯ ಪ್ರಥಮ ಶಾಖೆಯನ್ನು ಉಡುಪಿ ಜಿಲ್ಲೆಯ ಬೈಂದೂರ ಪಟ್ಟಣದ ವೆಂಕಟೇಶ್ವರ ಕಾಂಪ್ಲೆಕ್ಸ್, ಮಯೂರ ಪೆಟ್ರೋಲ್ ಬಂಕ್ಎದುರು, ಟ್ರೆಂಡ್ಸ್ ಮೇಲ್ಮಹಡಿಯಲ್ಲಿ ಲಕ್ಷ್ಮೀ ಪೂಜೆಯೊಂದಿಗೆ ವಿದ್ಯುಕ್ತವಾಗಿ ಆರಂಭಿಸಲಾಯಿತು.

## ದಶಮಾನೋತ್ಸವದ ಕಾರ್ಯಕ್ರಮ



**ಹಾವೇರಿ :** ದಿನಾಂಕ 25.12.2021 ರಂದು ಶ್ರೀ ಪುಟ್ಟರಾಜ ಗವಾಯಿ – ಸಚೇತನ ವಿವಿದ್ದೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಬಂಕಾಪೂರ ಸಹಕಾರಿಯು ಹತ್ತು ವರ್ಷಗಳನ್ನು ಪೂರೈಸಿ, ಅವಿರತ ಸೇವೆ ಸಲ್ಲಿಸಿ ದಶಮಾನೋತ್ಸವವನ್ನು ಆಚರಿಸಿ ಕೊಂಡಿತು ಸಭೆಯ ದಿವ್ಯ ಸಾನಿಧ್ಯವನ್ನು ಪ.ಪೂ.ಡಾ.ಶ್ರೀ ಕಲ್ಲಯ್ಯಜ್ಜನವರು ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ, ದಾವಣಗೆರೆ, ಶಿವಮೊಗ್ಗ ಹಾಗೂ ಶ್ರೀ ಷ.ಬ್ರ.ರೇವಣಸಿದ್ದೇಶ್ವರ ಶಿವಾಚಾರ್ಯರ ಮಹಾಸ್ವಾಮಿಗಳು ಅರಳೆಲೆ ಹಿರೇಮಠ ಬಂಕಾಪೂರ ವಹಿಸಿಕೊಂಡಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಬೆಂಗಳೂರು ಹಾವೇರಿ ಜಿಲ್ಲೆಯ ನಿರ್ದೇಶಕರಾದ ಶ್ರೀಯುತ. ಎಮ್.ಬಿ.ಕಲಾಲ ಅವರು ನೇರವೇರಿಸಿದರು ಕಾರ್ಯಕ್ರಮದ ಅದ್ಯಕ್ಷತೆಯನ್ನು ಸಹಕಾರಿಯ ಸಂಸ್ಥಾಪಕ ಹಾಗೂ ಹಾಲಿ ಅಧ್ಯಕ್ಷರಾದ ಶ್ರೀಯುತ, ಹನುಮಂತಪ್ಪ. ಯು.ವ್ಹಿ ಅವರು ವಹಿದ್ದರು ಹಾಗೂ ಕಾರ್ಯಕ್ರಮದ ಮುಖ್ಯ ಅಥಿತಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಂ–ಯುಕ್ತ ಸಹಕಾರಿ ನಿ,. ಬೆಂಗಳೂರು ಶಿರಸಿಯ ಮಾಜಿ ನಿರ್ದೇಶಕರಾದ ಶ್ರೀಯುತ ಭಾಸ್ಕರ ಹೆಗಡೆ ಕಾಗೇರಿ, ಹಾವೇರಿ ಜಿಲ್ಲಾ ಸಹಕಾರ ಯುನಿಯನ್‌ನ ಅಧ್ಯಕ್ಷರಾದ ಶ್ರೀ ಶಿವಾನಂದ ರಾಮಗೇರಿ, ಹಾವೇರಿ ಜಿಲ್ಲಾ ಸಹಕಾರ ಯುನಿಯನ್ನನ ಮಾಜಿ ಅಧ್ಯಕ್ಷರಾದ ಶ್ರೀ ಕಲ್ಯಾಣಕುಮಾರ ಶೆಟ್ಟರ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ,. ಬೆಂಗಳೂರು ಇದರ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ, ಹಾವೇರಿ ಜಿಲ್ಲೆ ಹಾನಗಲ್ ತಾಲೂಕಿನ ಸಿ.ಆರ್.ಪಿ ಯವರಾದ ಶ್ರೀ ಶ್ರೀನಿವಾಸ ದಿಕ್ಷೀತ ಹಾಗೂ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸುಭಾಷಗೌಡ ಆರ್ ಪಾಟೀಲ ಮತ್ತು ಸಹಕಾರಿಯ ಸರ್ವ ನಿರ್ದೇಶಕ ಮಂಡಳಿ ಹಾಗೂ ಸಹಕಾರಿಯ ಪ್ರ. ವ್ಯವಸ್ಥಾಕರಾದ ಕು.ಐಶ್ವರ್ಯ, ಆಯ್, ದೇವತಿ ಸರ್ವ ಸಿಬ್ಬಂದಿ ವರ್ಗ, ಸಹಕಾರಿಯ ಸರ್ವ ಸದಸ್ಯರ ಸಮ್ಮುಖದಲ್ಲಿ ದಶಮಾನೋತ್ಸವದ ಕಾರ್ಯಕ್ರಮವನ್ನು ನಡೆಸಲಾಯಿತು. ಸಭೆಯ ದಿವ್ಯ ಸಾನಿಧ್ಯವನ್ನು ಪ.ಪೂ. ಡಾ.ಶ್ರೀ ಕಲ್ಲಯ್ಯಜ್ಜನವರು ಶ್ರೀ ವೀರೇಶ್ವರ ಪುಣ್ಯಾಶ್ರಮ ಗದಗ, ದಾವಣಗೇರೆ, ಶಿವಮೊಗ್ಗ ಇವರ ಸುಮಾರು 15 ಸಾವಿರ ಮೌಲ್ಯದ ನಾಣ್ಯಗಳ ತುಲಾಬಾರ ಕಾರ್ಯಕ್ರಮ, ಸಹಕಾರಿಯ 2022 ರ ಹೊಸ ವರ್ಷದ ಕ್ಯಾಲೆಂಡರ್, ಡೈರಿ. ನೂತನ ಪಾಸಬುಕ್ ಬಿಡುಗಡೆ ಕಾರ್ಯಕ್ರಮ ಜರುಗಿತು.



**ಮೈಸೂರು :** ದಿನಾಂಕ 11.12.2021 ರಂದು ಶ್ರೀ ವಾಗ್ದೇವಿ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್ ರವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ವೇದಿಕ್ ವೆಲ್ನೆಸ್ ಯುನಿವರ್ಸಿಟಿ ವತಿಯಿಂದ ಡಾಕ್ಟರೇಟ್ ಗೌರವ ಪಡೆದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್ ರವರನ್ನು ಸನ್ಮಾನಿಸಲಾಯಿತು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 20ನೇ ವಾರ್ಷಿಕ ಮಹಾಸಭೆ
## ರೂ.3.75 ಕೋಟಿ ನಿವ್ವಳ ಲಾಭ, ಶೇ.10 ಡಿವಿಡೆಂಡ್ ಘೋಷಣೆ




**ಪುತ್ತೂರು :** ಪುತ್ತೂರಿನ ದರ್ಬೆಯಲ್ಲಿ ಕೇಂದ್ರ ಕಛೇರಿಯನ್ನು ಹೊಂದಿ ರಾಜ್ಯಾದ್ಯಂತ ಕಾರ್ಯಚರಿಸುತ್ತಿರುವ ಪುತ್ತೂರಿನ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾದ ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ 20ನೇ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರರವರ ಅಧ್ಯಕ್ಷತೆಯಲ್ಲಿ ದಿನಾಂಕ 11-12-2021ನೇ ಶನಿವಾರ ಪೂರ್ವಾಹ್ನ 10 ಗಂಟೆಗೆ ಪುತ್ತೂರಿನ ತೆಂಕಿಲದಲ್ಲಿರುವ ಒಕ್ಕಲಿಗ ಗೌಡ ಸಮುದಾಯ ಭವನದಲ್ಲಿ ನಡೆಯಿತು.

ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್ ಆರ್ ಸತೀಶ್ಚಂದ್ರರವರು ಮಾತನಾಡುತ್ತಾ ಸಹಕಾರಿಯ ಮಹಾಸಭೆಗೆ ಆಗಮಿಸಿದ ಎಲ್ಲಾ ಸದಸ್ಯರಿಗೆ ವಂದಿಸುತ್ತಾ 21ನೇ ವರ್ಷಕ್ಕೆ ಕಾಲಿರಿಸಿದ ಈ ಸುಸಂದರ್ಭದಲ್ಲಿ ಸಹಕಾರಿಯ ಬೆಳವಣಿಗೆಗೆ ಸಹಕರಿಸಿದ ಎಲ್ಲಾ ಸದಸ್ಯ ಬಾಂಧವರಿಗೆ ಅಭಿನಂದಿಸಿದರು.

ಕೋವಿಡ್-19ರ ಪರಿಣಾಮ ಎಲ್ಲಾ ಕ್ಷೇತ್ರಗಳ ಮೇಲೆ ಬೀರಿದ್ದು ಬ್ಯಾಂಕಿಂಗ್ ಹಾಗೂ ಸಹಕಾರಿ ಕ್ಷೇತ್ರವು ಇದಕ್ಕೆ ಹೊರತಲ್ಲ. ಇಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಸಹಕಾರಿಯು ಅತ್ಯುತ್ತಮ ಬೆಳವಣಿಗೆಗೆ ಕಾರಣೀಕರ್ತರಾದ ಸದಸ್ಯರನ್ನು ವಂದಿಸಿದರು. ಸಹಕಾರಿಯು ಉತ್ತಮ ಲಾಭಗಳಿಸಿದ್ದು, ಸಹಕಾರಿಯ ಸದಸ್ಯರಿಗೆ ಶೇ.10 ಡಿವಿಡೆಂಡ್ ಘೋಷಿಸುವ ಪ್ರಸ್ತಾಪವನ್ನು ಮಂಡಿಸಿದರು. ಸಹಕಾರಿಯ ಪೂರಕ ಸಂಸ್ಥೆ ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮುಖಾಂತರ ಮಾಡಿದ ಸಾಮಾಜಿಕ ಕಾರ್ಯಗಳ ಚಿತ್ರಣವನ್ನು ನೀಡಿದರು. ಸಹಕಾರಿಯ ಹಲವು ವರ್ಷಗಳ ಕನಸಾಗಿದ್ದ ಸ್ವಂತ ನಿವೇಶನ ಹೊಂದುವುದು ಸಾಕಾರವಾಗಿದ್ದು ಮುಂದಿನ ದಿನಗಳಲ್ಲಿ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಲಿದ್ದೇವೆ ಎಂದು ಅಧ್ಯಕ್ಷರು ಹೇಳಿದರು. ಅಂತೆಯೇ ನಮ್ಮನ್ನಗಲಿದ ಸಹಕಾರಿಯ ಸ್ಥಾಪಕ ನಿರ್ದೇಶಕರಲ್ಲೊಬ್ಬರಾದ ಶ್ರೀ ವೈಕುಂಠ ಪ್ರಭು ಮತ್ತು ಅಗಲಿದ ಸದಸ್ಯರಿಗೆ ಹಾಗೂ ಶ್ರೀ ರಾಮ ಭಟ್, ಪುನಿತ್ ರಾಜ್‌ಕುಮಾರ್, ದೇಶದ ಹೆಮ್ಮೆಯ ಸಿಡಿಎಸ್ ಬಿಪಿನ್ ರಾವತ್ ಮತ್ತು ಹುತಾತ್ಮ ಸೈನಿಕರಿಗೆರ ಆತ್ಮಕ್ಕೆ ಚಿರಶಾಂತಿ ಕೋರಿ ಒಂದು ನಿಮಿಷ ಮೌನ ಪ್ರಾರ್ಥನೆ ಮಾಡಲಾಯಿತು.

ಸಹಕಾರಿಯ ಅಂಕಿ-ಅಂಶಗಳ ವಿವರ ಹಾಗೂ ವಾರ್ಷಿಕ ವರದಿಯನ್ನು ಮಂಡಿಸಿದ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ ನಾಯಕ್ ಎ ರವರು ಮಾತನಾಡುತ್ತಾ ವರದಿ ವರ್ಷಾಂತ್ಯಕ್ಕೆ ಸಹಕಾರಿಯು ಒಟ್ಟು 9.50 ಕೋಟಿ ಪಾಲುಬಂಡವಾಳ ಹೊಂದಿದ್ದು, 210.09 ಕೋಟಿ ಠೇವಣಿ ಸಂಗ್ರಹಿಸಿ, 158.73 ಕೋಟಿ ಸಾಲ ವಿತರಿಸಿದೆ ಹಾಗೂ 34,784 ಸದಸ್ಯರನ್ನು ಹೊಂದಿದೆ ಎಂದು ತಿಳಿಸಿದರು. ಆರ್ಥಿಕ ವರ್ಷಾಂತ್ಯಕ್ಕೆ 3.75ಕೋಟಿ ನಿವ್ವಳ ಲಾಭಗಳಿಸಿದ್ದು, ಸದಸ್ಯರಿಗೆ ಶೇ.10 ಡಿವಿಡೆಂಡ್ ನೀಡುವುದಾಗಿ ಮಹಾಸಭೆಯು ಈ ಸಂದರ್ಭದಲ್ಲಿ ನಿರ್ಧರಿಸಿತು.

## ಶ್ರೀ ಭಾಗ್ಯವಂತಿ ಪತ್ತಿನ ಸೌಹಾರ್ದ ಸಹಕಾರಿಯ ಉದ್ಘಾಟನೆ



**ಬೀದರ :** ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಭಾತಂಬ್ರಾ ಗ್ರಾಮದಲ್ಲಿ ಶ್ರೀ ಭಾಗ್ಯವಂತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ಭಾತಂಬ್ರಾ ಇದರ ಇ-ಸ್ಟಾಂಪ್ ಸೇವಾ ಉದ್ಘಾಟನೆ ಹಾಗೂ ಮೂರನೇ ಸಾಮಾನ್ಯ ಸಭೆಯನ್ನು ಸಂಯುಕ್ತ ಸಹಕಾರಿ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ ನೆರವೇರಿಸಿದರು. ದಿವ್ಯ ಸನಿಧ್ಯ ಪರಮ ಪೂಜ್ಯ ಜದ್ಗುರು ಶ್ರೀ ಶಿವಯೋಗೇಶ್ವರ ಮಹಾ ಸ್ವಾಮಿಗಳು ನಿರಂಜನ ಸಂಸ್ಥಾನ ಮಠ ಭಾತಂಬ್ರಾ ವಹಿಸಿಕೊಂಡಿದರು. ಮುಖ್ಯ ಅತಿಥಿಗಳಾಗಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಶಾರದಾಬಾಯಿ ಗಂಡ ಶಿವಶಂಕರ ಗುಬ್ಬೆ, ಮಾಜಿ ತಾಲೂಕ ಪಂಚಾಯತ್ ಸದಸ್ಯರಾದ ಶ್ರೀ ಶಂಕರಾವ್ ಭೋರಾಳೆ, ಜಿಲ್ಲಾ ಒಕ್ಕೂಟ ನಿರ್ದೇಶಕ ಶ್ರೀ ರಾಜಶೇಖರ್ ನಾಗಮೂರ್ತಿ, ಜಿಲ್ಲಾ ಸೌಹಾರ್ದ ಜಿಲ್ಲಾ ಸಂಯೋಜಕ ವೀರಶೆಟ್ಟಿ ಉಪಸ್ಥಿತರಿದ್ದರು. ಕಾರ್ಯಕ್ರಮ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಸತೀಶ ಡಿಗ್ಗೆ ವಹಿಸಿಕೊಂಡಿದರು.

# ಕ್ಯಾಲೆಂಡರ್ ಬಿಡುಗಡೆ

## "ಮಾನವನ ಜೀವನ ಕಲ್ಯಾಣವಾಗಬೇಕಾದರೆ ಸಹಕಾರ ಮನೋಭಾವ ಅಗತ್ಯ" ಷ.ಬ್ರ ರಾಜೇಶ್ವರ ಶಿವಾಚಾರ್ಯರು.



**ಬೀದರ :** ಮಾನವನ ಬದುಕು ಕಲ್ಯಾಣವಾಗಬೇಕಾದರೆ ಸಹಕಾರ ಮನೋಭಾವ ಅಗತ್ಯ ಭಾರತೀಯ ಕುಟುಂಬ ಜೀವನದಲ್ಲಿ ಮನುಷ್ಯ ಸಹಕಾರಿಯಾಗಿ ಬಾಳಿದಾಗ ಮಾತ್ರ ಆತನ ಬದುಕಿಗೆ ಅರ್ಥ ಬರುತ್ತದೆ ಎಂದು ಷ.ಬ್ರ. ರಾಜೇಶ್ವರ ಶಿವಾಚಾರ್ಯರು ಆಶೀರ್ವಚನ ನೀಡಿದರು. ನಗರದ ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಇದರ ಕಛೇರಿಯಲ್ಲಿ ಆಯೋಜಿಸಿದ ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಇದರ 2022ನೇ ಸಾಲಿನ ದಿನಚರಿ (ಕ್ಯಾಲೆಂಡರ್) ಬಿಡುಗಡೆಗೊಳಿಸಿ ಸಹಕಾರಿಗಳಿಗೆ ಆಶಿರ್ವಚನ ನೀಡಿದರು.

ಸಹಕಾರಿಯ ಬೆಳವಣಿಗೆಯ ಕುರಿತು ಅಧ್ಯಕ್ಷರಾದ ಗುರುನಾಥ ಜ್ಯಾಂತಿಕರ ಮಾಹಿತಿ ನೀಡಿದರು. ವೇದಿಕೆಯ ಮೇಲೆ ಸಹಕಾರಿಯ ಉಪಾಧ್ಯಕ್ಷರಾದ ಬಸವರಾಜ ಸ್ವಾಮಿ, ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಜಗನಾಥ ಕರಂಜೆ, ಶ್ರೀಕಾಂತ ಸ್ವಾಮಿ, ಜಿಲ್ಲಾ ಸಂಯೋಜಕ ವೀರಶೆಟ್ಟಿ ಕಾಮಣ್ಣಾ, ಮುಖ್ಯ ಕಾರ್ಯನಿರ್ವಾಹಕ ಅಮೃತ ಹೊಸಮನಿ, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ಶಿವರಾಜ ಹೂಗಾರ, ಸಿಬ್ಬಂದಿಗಳಾದ ಅನೀಲಕುಮಾರ ಕೊಡಂಬಲ್, ಶಿವಾನಂದ, ಸಂಜೀವಕುಮಾರ, ಸಹಕಾರಿಗಳಾದ ಮರುಳಾರಾಧ್ಯ,ವಿಜಕುಮಾರ ಗಾಜರೆ ಇತರರು ಉಪಸ್ಥಿತರಿದ್ದರು.



**ಶಿವಮೊಗ್ಗ :** ದಿನಾಂಕ 18–12–2021 ರಂದು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 2022ನೇ ಸಾಲಿನ ಕ್ಯಾಲೆಂಡರ್‌ನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಹಾಗೂ ಸಹ್ಯಾದ್ರಿ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಪ್ರಸನ್ನಕುಮಾರ್ ಎ.ಆರ್ ಇವರು ಬಿಡುಗಡೆ ಮಾಡಿದರು. ಈ ಸಮಯದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರ ಉಪಸ್ಥಿತರಿದ್ದರು.



**ಮೈಸೂರು :** ದಿನಾಂಕ 11–12–2021 ರಂದು ಮೈಸೂರಿನ ಸರಸ್ವತಿಪುರಂನ ಸಾಹುಕಾರ್ ಚೆನ್ನಯ್ಯ ರಸ್ತೆಯಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ, ತುಳುಶಿವಳ್ಳಿ ಮಾಧ್ವಬ್ರಾಹ್ಮಣ ಸೌಹಾರ್ದ ಸಹಕಾರಿ ನಿ. ಇದರ ಸರ್ವಸದಸ್ಯರ ಸಭೆಯ ಸಂದರ್ಭದಲ್ಲಿ, ಮುಖ್ಯ ಅತಿಥಿಗಳಾಗಿದ್ದ, ಮೈಸೂರು ಪ್ರಾಂತದ ಜಂಟಿ ನಿಬಂಧಕರಾಗಿರುವ ಶ್ರೀ ಪ್ರಕಾಶ್ ರಾವ್ ರವರು ಸಹಕಾರಿಯ 2022ನೇ ವರ್ಷದ ಕ್ಯಾಲೆಂಡರ್‌ನ್ನು ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

# ಹರ್ಷ ದೀಪ ಸೌಹಾರ್ದ ಸಹಕಾರಿಯ ಉದ್ಘಾಟನೆ



**ಚಿತ್ರದುರ್ಗ :** ದಿನಾಂಕ 29.12.2021ರಂದು ಹರ್ಷ ದೀಪ ಸೌಹಾರ್ದ ಸಹಕಾರಿ ನಿ., ಚಳ್ಳಕೆರೆ ತಾ. ಚಿತ್ರದುರ್ಗ ಜಿಲ್ಲೆ. ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಎಸ್. ಆರ್. ಲಕ್ಷ್ಮೀ ಕಾಂತ ರೆಡ್ಡಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಡಿ. ಸುಧಾಕರ್, ಮಾಜಿ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಮಾನ್ಯ ಅಧ್ಯಕ್ಷರು, ಡಿ. ಸಿ. ಸಿ ಬ್ಯಾಂಕ್, ಚಿತ್ರದುರ್ಗ, ಶ್ರೀ ನಟರಾಜ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ಸೌಹಾರ್ದ ಜಿಲ್ಲಾ ಸಂಯೋಜಕರು ಮತ್ತು ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗಭೂಷಣರವರು, ಉಪಾಧ್ಯಕ್ಷರು, ನಿರ್ದೇಶಕರುಗಳು, ಸಿಬ್ಬಂದಿ ವರ್ಗದವರು ಹಾಗೂ ಸದಸ್ಯರು ಉಪಸ್ಥಿತರಿದ್ದರು.

# ರಾಜ್ಯದ ಸೌಹಾರ್ದ ಸಹಕಾರಿಗಳ ವಾರ್ಷಿಕ ಸಾಮಾನ್ಯ ಸಭೆಗಳು



**ಮೈಸೂರು :** ದಿನಾಂಕ 20/11/2021 ರಂದು ಗಾಯತ್ರಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 22ನೇ ಸರ್ವಸದಸ್ಯರ ಸಭೆಯು ಕೊಪ್ಪದ ಗಾಯತ್ರಿ ಮಂದಿರದಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀಯುತ ಕೆ.ವಿ ಪ್ರವೀಣ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಸಕ್ತ ಸಾಲಿನಲ್ಲಿ ಸಹಕಾರಿಯು ರೂ 38.69 ಲಕ್ಷ ಲಾಭಗಳಿಸಿದ್ದು ಸದಸ್ಯರಿಗೆ 13% ಡಿವಿಡೆಂಡ್ ನೀಡಲು ತೀರ್ಮಾನಿಸಲಾಯಿತು. ಸಹಕಾರಿಯ ನಿರ್ದೇಶಕರಾದ ಶ್ರೀಯುತ ಎ ದಿವಾಕರ ಇವರು ಸರ್ವ ಸದಸ್ಯರನ್ನು ಹಾಗೂ ಗಣ್ಯರನ್ನು ಸ್ವಾಗತಿಸಿದರು. ಸಹಕಾರಿಯ ಎಲ್ಲಾ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಜಿಲ್ಲಾ ಸಂಯೋಜಕರಾದ ಶ್ರೀ ಎಮ್ ಚಂದ್ರಶೇಖರಯ್ಯ ಇವರು ಉಪಸ್ಥಿತರಿದ್ದರು, ಉಪಾಧ್ಯಕ್ಷರಾದ ಶ್ರೀಯುತ ಎ ಎಸ್ ವೆಂಕಟರಮಣ ಇವರು ವಂದಿಸಿದರು.




**ದಾವಣಗೆರೆ :** ದಿನಾಂಕ 15.12.2021 ರಂದು ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ ಸಹಕಾರಿಯ ವಾರ್ಷಿಕ ಶುಲ್ಕ ಮತ್ತು ಶಿಕ್ಷಣ ನಿಧಿಯ ಚೆಕ್ ಅನ್ನು ಸಂಯುಕ್ತ ಸಹಕಾರಿಯ ಪರವಾಗಿ ಸ್ವೀಕರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರುಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮಂಡ್ಯ :** ದಿನಾಂಕ 12.12.2021ರಂದು ಪಾಂಡವಪುರ ಗಾಣಿಗರ ಸೌಹಾರ್ದ ಸಹಕಾರಿ ನಿ., ಪಾಂಡವಪುರ ಇದರ ನೂತನ ಕಛೇರಿ ಹಾಗೂ ಪ್ರಥಮ ಸರ್ವಸದಸ್ಯರ ವಾರ್ಷಿಕ ಸಭೆಯನ್ನು ಶ್ರೀ ಬಿ.ಜೆ. ಪುಟ್ಟಸ್ವಾಮಿ ರವರು, ಮಾಜಿ ಸಚಿವರು ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಡಾ. ಇಂದ್ರೇಶ್ ಎನ್.ಎಸ್ ರವರು, ಅಧ್ಯಕ್ಷರು, ಪರಿವರ್ತನ ಟ್ರಸ್ಟ್, ಪಾಂಡವಪುರ, ಶ್ರೀ ನಾ. ಶಿವಣ್ಣ ರವರು, ಅಧ್ಯಕ್ಷರು, ಸಿದ್ಧಿಮಂಟಪ ಟ್ರಸ್ಟ್, ಪಾಂಡವಪುರ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು, ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ಹೇಮಂತ್ ಕುಮಾರ್ ರವರು, ಉಪಾಧ್ಯಕ್ಷರು ಸಿ. ಪ್ರದೀಪ್ ರವರು, ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಹಾಸನ :** ದಿನಾಂಕ 14.12.2021 ರಂದು ಭೂ ಮಾತಾ ಕೃಷಿ ಬೆಳೆಗಾರರ ಸೌಹಾರ್ದ ಸಹಕಾರಿ ನಿ., ಗಂಡಸಿ, ಅರಸೀಕೆರೆ ತಾಲ್ಲೂಕು ಇದರ ವಿಶೇಷಾಧಿಕಾರಿಯಾಗಿ ಸಹಕಾರಿಯ 2020–21ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಭೆಯನ್ನು ಉದ್ಘಾಟನೆ ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀ ಮಾಲಿನಿ ಸುವರ್ಣರವರು, ಹಾಸನ ಜಿಲ್ಲಾ ಅಭಿವೃದ್ಧಿ ಪ್ರಬಂಧಕರು, ನಬಾರ್ಡ್, ಶ್ರೀ ಹೆಚ್.ಎಸ್. ಲಕ್ಷ್ಮೀಕಾಂತ್, ಆರ್ಡರ್ ಸಂಸ್ಥೆ ಹಾಗೂ ಸಿಇಓ ಶ್ರೀ ಸಿ.ಎಂ. ಬಸವರಾಜುರವರು ವೇದಿಕೆ ಮೇಲೆ ಉಪಸ್ಥಿತರಿದ್ದರು.



**ಹಾಸನ** : ಹೇಮಾವತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹೊಳೆನರಸೀಪುರ ಇದರ ವಿಶೇಷಾಧಿಕಾರಿಯಾಗಿ ಸಹಕಾರಿಯ 2020–21ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ಭಾಗವಹಿಸಲಾಯಿತು. ಈ ಸಂದರ್ಭದಲ್ಲಿ ಸಿಇಓ ರವರು ವೇದಿಕೆ ಮೇಲೆ ಉಪಸ್ಥಿತರಿದ್ದರು.




**ಕಡೂರು** : ದಿನಾಂಕ: 24.12.2021ರಂದು ವೇದಾ ಪತ್ತಿನ ಸೌಹಾರ್ದ ಸಹಕಾರಿ ನಿ., ಯಗಟಿ, ಕಡೂರು ತಾಲ್ಲೂಕು ಇದರ ವಿಶೇಷಾಧಿಕಾರಿಯಾದ ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಸಹಕಾರಿಯ 2020–21ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾ ಸಭೆಯಲ್ಲಿ ಭಾಗವಹಿಸಿದ್ದರು. ಸದರಿ ವೇದಿಕೆ ಮೇಲೆ ಸಹಕಾರಿಯ ಸಿಇಓ ಶ್ರೀ ಪ್ರಕಾಶ್ ರವರು, ಲೆಕ್ಕಾಧಿಕಾರಿ ಶ್ರೀ ಮಂಜುನಾಥ, ಇ–ಸ್ಟಾಂಪ್ ಕೇಂದ್ರದ ಸಿಬ್ಬಂದಿ ಹಾಜರಿದ್ದರು.



**ಮಂಡ್ಯ** : ದಿನಾಂಕ 18.12.2021ರಂದು ನಾಗಮಂಗಲ ತಾಲ್ಲೂಕು ಶಿಕ್ಷಣ ಇಲಾಖಾ ಪದವಿ ಶಿಕ್ಷಕರ ಸೌಹಾರ್ದ ಸಹಕಾರಿ ನಿ., ನಾಗಮಂಗಲ ಇದರ 2020–21ನೇ ಸಾಲಿನ ವಾರ್ಷಿಕ ಮಹಾಸಭೆಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಭಾಗವಹಿಸಿ ಆಡಳಿತ ಮಂಡಳಿ ಸದಸ್ಯರ ಹಕ್ಕು– ಕರ್ತವ್ಯ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ– 2021ರ ಅಂಶಗಳ ಕುರಿತು ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಶ್ರೀಮತಿ ಶಿಲ್ಪಾ ರವರು, ಶ್ರೀ ಸಿ.ಜೆ ಕುಮಾರ್ ರವರು, ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ಶಿವಸ್ವಾಮಿ ರವರು, ಉಪಾಧ್ಯಕ್ಷರು, ನಿರ್ದೇಶಕರು ಮತ್ತು ಸಿಇಓ ಕು. ಯಶೋಧ ರವರು ಹಾಜರಿದ್ದರು.



**ಚಾಮರಾಜನಗರ** : ದಿನಾಂಕ 24.12.2021ರಂದು ಹಿಮವದ್ ಗೋಪಾಲಸ್ವಾಮಿ ಮಹಿಳಾ ರೈತ ಉತ್ಪಾದಕರ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ಇದರ 2020–21ನೇ ಸಾಲಿನ ಸರ್ವ ಸದ್ಯಸರ ವಾರ್ಷಿಕ ಸಾಮಾನ್ಯ ಸಭೆ ಕಾರ್ಯಕ್ರಮವು ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ನಾಗಲಾಂಬಿಕೆ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಉಪಾಧ್ಯಕ್ಷರು ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಇಓ ಗಂಗಾಧರ್ ರವರು ಹಾಜರಿದ್ದರು.




**ಚಿಕ್ಕಮಗಳೂರು** : ದಿನಾಂಕ 24.12.2021ರಂದು ಮೂಡಿಗೆರೆ ಪತ್ತಿನ ಸೌಹಾರ್ದ ಸಹಕಾರಿ ನಿ., ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ ಇದರ 2020–21ನೇ ಸಾಲಿನ ಸರ್ವ ಸದ್ಯಸರ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಆರ್ ಪ್ರಸನ್ನ ಗೌಡಹಳ್ಳಿ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಉಪಾಧ್ಯಕ್ಷರು ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಇಓ ಶ್ರೀ ಜಿ.ಎಂ ಗೌತಮ್ ರವರು ಹಾಜರಿದ್ದರು.



**ಮಂಡ್ಯ :** ದಿನಾಂಕ 24.12.2021 ರಂದು ಕೆ.ಆರ್ ಪೇಟೆ ತಾಲ್ಲೂಕು ಶ್ರೀ ಶಿವಜ್ಯೋತಿ ಗಾಣಿಗರ ಸೌಹಾರ್ದ ಸಹಕಾರಿ ನಿ., ಕೆ.ಆರ್ ಪೇಟೆ, ಮಂಡ್ಯ ಜಿಲ್ಲೆ ಇದರ 2020–21ನೇ ಸಾಲಿನ ಸರ್ವ ಸದ್ಯಸರ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ನಾಗರಾಜ ಸಾರಂಗಿ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಉಪಾಧ್ಯಕ್ಷರು ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಇಓ ರವರು ಉಪಸ್ಥಿತರಿದ್ದರು.




**ಚಾಮರಾಜನಗರ :** ದಿನಾಂಕ 23.12.2021ರಂದು ಸಿರಿ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ 2020–21ನೇ ಸಾಲಿನ ಸರ್ವ ಸದ್ಯಸರ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ವಿನಯ್ ಬಿಳುಗಲಿ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಉಪಾಧ್ಯಕ್ಷರು ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಇಓ ರವರು ಉಪಸ್ಥಿತರಿದ್ದರು.

**ಕಡೂರು :** ದಿನಾಂಕ: 24.12.2021ರಂದು ಶ್ರೀ ಭೋಗನಂಜುಂಡೇಶ್ವರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕಡೂರು ಇದರ ವಿಶೇಷಾಧಿಕಾರಿಯಾದ ಶ್ರೀ ಎಂ. ಚಂದ್ರಶೇಖರಯ್ಯ, ಜಿಲ್ಲಾ ಸಂಯೋಜಕರು ಸಹಕಾರಿಯ 2020–21ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಭೆಯಲ್ಲಿ ಭಾಗವಹಿಸಿದ್ದರು. ವೇದಿಕೆ ಮೇಲೆ ಸಹಕಾರಿಯ ಸಿಇಓ ಶ್ರೀ ಗಂಗಾಧರ್ ರವರು ಹಾಜರಿದ್ದರು.



**ಕಡೂರು :** ದಿನಾಂಕ 19.12.2021ರಂದು ಕಡೂರು ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕಡೂರು ಇದರ 2020–21ನೇ ಸಾಲಿನ ಸರ್ವ ಸದ್ಯಸರ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಹೆಚ್.ಎನ್ ಶಿವಶಂಕರ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಉಪಾಧ್ಯಕ್ಷರಾದ ಶ್ರೀ ಚಂದ್ರಮೌಳಿ ರವರು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಇಓ ರವರು ಉಪಸ್ಥಿತರಿದ್ದರು.



**ಚಾಮರಾಜನಗರ :** ದಿನಾಂಕ 25.12.2021 ರಂದು ನವ್ಯ ಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಇದರ 2020–21ನೇ ಸಾಲಿನ ಸರ್ವ ಸದ್ಯಸರ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ. ನಂಜುಂಡ ಸ್ವಾಮಿ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ವೇದಿಕೆ ಮೇಲೆ ಶ್ರೀ ಮಹದೇವಸ್ವಾಮಿ (ಎನ್ ರಿಚ್), ಹಿರಿಯ ಸಹಕಾರಿಗಳು, ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಇಓ ಶ್ರೀ ಶಿವಕುಮಾರ್ ರವರು ಉಪಸ್ಥಿತರಿದ್ದರು.




ಸ್ವಾತಿ ಪತ್ತಿನ ಸೌಹಾರ್ದ ಸಹಕಾರಿಯ 14ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯಿತು



**ಕೋಣಂದೂರು :** ಮಲೆನಾಡು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಕೋನಂದೂರು ಇದರ 11ನೇ ವಾರ್ಷಿಕ ಸಾಮಾನ್ಯ ಸಭೆಯು ಕೋಣಂದೂರಿನ ಶ್ರೀ ಸೇವಾ ಮಂದಿರದಲ್ಲಿ ದಿನಾಂಕ 19.12.2021ನೇ ಭಾನುವಾರದಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಸಾದ್ ಕೆ.ಆರ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. 2020-21ನೇ ಸಾಲಿನಲ್ಲಿ ರೂ. 19,00,473.00 ನಿವ್ವಳ ಲಾಭ ಗಳಿಸಿದ್ದು, ಶೇ. 12% ಡಿವಿಡೆಂಡ್ ಘೋಷಿಸಲಾಯಿತು. ಸಾನಿಧ್ಯ ವಹಿಸಿದ್ದ ಶ್ರೀ ಶಿವಲಿಂಗೇಶ್ವರ ಮಠದ ಶ್ರೀ ಶ್ರೀಪತಿಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಸಹಕಾರಿಯ ಮಹತ್ವವನ್ನು ತಿಳಿಸಿ. ಆಶೀರ್ವಚನ ನೀಡಿದರು. ಮುಖ್ಯಕಾರ್ಯನಿರ್ವಾಹಣಾಧಿಕಾರಿ ಸತೀಶ. ಎಸ್ ಇವರು ವರದಿ ಮಂಡಿಸಿದರು. ಹಿರಿಯರಾದ ಬಿ.ಕೆ ಪಾರ್ವತಮ್ಮ ಹಾಗೂ ಆಡಳಿತ ಮಂಡಲಿಯ ಸದಸ್ಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬಿ.ಕೆ ಪಾರ್ವತಮ್ಮ ಹಾಗೂ ಆಡಳಿತ ಮಂಡಲಿಯ ಸದಸ್ಯರು ಉಪಸ್ಥಿತರಿದ್ದರು. ನಂತರ ದೇವಿಪ್ರಸಾದ್ ಹೋಟೆಲ್ ರಾಮಣ್ಣರವರ ಸೇವೆಗಾಗಿ ಸನ್ಮಾನಿಸಲಾಯಿತು. ಉಪಾಧ್ಯಕ್ಷರಾದ ಶ್ರೀ ಕೆ.ಆರ್ ಪ್ರಶಾಂತ್ ಸ್ವಾಗತಿಸಿ, ನಿರ್ದೇಶಕರಾದ ಶ್ರೀ ಡಿ.ಆರ್ ಗಿರೀಶ್ ವಂದಿಸಿದರು.



**ಕೋಣಂದೂರು :** ಶ್ರೀ ಪೂರ್ಣಾನಂದ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ವಾರ್ಷಿಕ ಮಹಾಸಭೆ ದಿನಾಂಕ 12-12-2021 ರಂದು ನಡೆಯಿತು ಈ ಕಾರ್ಯಕ್ರಮವನ್ನು ದೀಪ ಪ್ರಜ್ವಲನೆ ಮಾಡುವುದರ ಮೂಲಕ ಸಹಕಾರಿಯ ಅಧ್ಯಕ್ಷರಾದ ಶ್ರೀ ಗಣೇಶ್ ಶಣೈಯವರು ಉದ್ಘಾಟಿಸಿದರು. ಬಳಿಕ ಸಂಘದ 2022 ರ ಕ್ಯಾಲೆಂಡರನ್ನು ಅತಿಥಿಗಳು ಹಾಗೂ ಹಿರಿಯರು ಸೇರಿ ಬಿಡುಗಡೆಗೊಳಿಸಿದರು. ಈ ಸಂದರ್ಭದಲ್ಲಿ ಇತ್ತೀಚೆಗೆ ಪರಂಧಾಮಗೈದ ಶ್ರೀ ಪ್ರದ್ಯುಮ್ನಾನಂದ ಸ್ವಾಮೀಜಿ ಅವರಿಗೆ ಭಾವಪೂರ್ಣ ಪುಷ್ಪಾಂಜಲಿ ಅರ್ಪಿಸಲಾಯಿತು.

ಹುತಾತ್ಮರಾದ ಸಿಡಿಎಸ್ ಬಿಪಿನ್ ರಾವತ್ ಹಾಗೂ ಅವರ ಪತ್ನಿ ಮಧುಲಿಕಾ, ಇತರ 12 ಮಂದಿ ಯೋಧರಿಗೆ ಮತ್ತು 2021-22 ರ ಸಾಲಿನಲ್ಲಿ ನಿಧನರಾದ ಸಹಕಾರಿಯ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸಲಾಗಿದೆ.

ಸಭೆಯಲ್ಲಿ ಸದಸ್ಯರಿಗೆ ಮತ್ತು ಅವರ ಮಕ್ಕಳ ಪ್ರತಿಭೆಗಳನ್ನು ಗುರುತಿಸಿ ಪುರಸ್ಕಾರ ನೀಡಲಾಯಿತು ಹಾಗೂ ವಾರ್ಷಿಕ ಲೆಕ್ಕಪತ್ರಗಳ ಮಂಡನೆ ಮಾಡಲಾಯಿತು. ವರದಿ ವರ್ಷದಲ್ಲಿ ರೂ 46,22,400 ಪಾಲು ಬಂಡವಾಳವು ರೂ 23,71,91,516.81 ರಷ್ಟು ಠೇವಣಿಯಾಗಿದ್ದು ರೂ 18,30,21,398 ಸಾಲಗಳಲ್ಲಿ ನೀಡಿದ್ದು ರೂ 16,84,904.32 ಲಾಭ ಗಳಿಸಿರುತ್ತದೆ ಎಂದು ಸದಸ್ಯರಿಗೆ ಸಂಘದ ಅಧ್ಯಕ್ಷ ಗಣೇಶ್ ಶೆಣೈ ವಿವರಣೆ ನೀಡಿದರು ದಯಾನಂದ ನಾಯಕ್ ಬೆಳ್ತಂಗಡಿ ನುಡಿ ನಮನ ಕಾರ್ಯಕ್ರಮ ನಡೆಸಿಕೊಟ್ಟರು ಆಡಳಿತ ಮಂಡಳಿಯ ವರದಿಯನ್ನು ಸಂಘದ ಪ್ರಧಾನ ವ್ಯವಸ್ಥಾಪಕ ವಾಸುದೇವ ಯು ಮಂಡಿಸಿದರು.

ಪ್ರತಿಭಾ ಪುರಸ್ಕಾರ ಮತ್ತು ಡಾಕ್ಟರೇಟ್ ಪಡೆದ ಡಾ. ಸುಚೇತ ಶೆಣೈ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ಪಡೆದ ಪ್ರಕಾಶ್ ನಾಯಕ್ ಅವರನ್ನು ಅಧ್ಯಕ್ಷರು ನಿರ್ದೇಶಕರು ಹಿರಿಯ ಸಹಕಾರಿ ಸದಸ್ಯರು ಸೇರಿ ಸನ್ಮಾನಿಸಲಾಯಿತು. ಕಾರ್ಯಕ್ರಮವನ್ನು ಶಾಂತರಾಮ್ ಪ್ರಭು ನಿರೂಪಣೆ ಮಾಡಿದರು. ಉಪಾಧ್ಯಕ್ಷರಾದ ಮಾಧವ ಪ್ರಭು ನಿರ್ದೇಶಕರಾದ ವಿಶ್ವನಾಥ ಕೆ, ಮೋಹನ್ ನಾಯಕ್, ಪ್ರಭಾಕರ್ ನಾಯಕ್ ಕಲ್ಲಡ್ಕ ಶಾಂಭವಿ ಕೆ ಉಪಸ್ಥಿತರಿದ್ದರು ಗೀತಾ ರತ್ನಾಕರ್ ವಂದಿಸಿದರು.



**ದಾವಣಗೆರೆ :** ಸನ್ಮತಿ ಸೌಹಾರ್ದ ಸಹಕಾರಿಯ 2020-21ನೇ ಸಾಲಿನ ನಾಲ್ಕನೇ ವಾರ್ಷಿಕ ಸಾಮಾನ್ಯ ಸಭೆಯು ರೋಟರಿ ಬಾಲ ಭವನದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ಎಂ ಪಾಲಾಕ್ಷ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯ ಸದಸ್ಯರ ಮರಣೋತ್ತರ ನಿಧಿಯನ್ನು ರೂ. 2000 ದಿಂದ ರೂ. 5000 ಕ್ಕೆ ಹೆಚ್ಚಿಸಿದ್ದು, ಸದಸ್ಯರಿಗೆ ರೂ. 1,00,000/- ದವರೆಗೆ ಅಪಘಾತ ವಿಮೆ ಮಾಡಿಸಲಾಗಿದೆ ಎಂದು ತಿಳಿಸಿದರು. ಸದರಿ ಸಾಲಿನಲ್ಲಿ ಸಹಕಾರಿಯು ರೂ.7.72 ಲಕ್ಷ ನಿವ್ವಳ ಲಾಭ ಗಳಿಸಿದೆ.



**ಬಳ್ಳಾರಿ :** ದಿನಾಂಕ 16.12.2021 ರಂದು ಗಿರಿಮಲ್ಲಿಗೆ ಮಹಿಳಾ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಶೈಲಜಾ ಪವಾಡಶೆಟ್ಟರ ಇವರ ಅಧ್ಯಕ್ಷತೆಯಲ್ಲಿ ಮಿಲ್‌ನ ಆವರಣದಲ್ಲಿ ನಡೆಯಿತು.



**ಕನಕಪುರ :** ದಿನಾಂಕ 19.12.2021 ರಂದು ಶ್ರೀ ನಿರ್ವಾಹಣೇಶ್ವರ ಹಿರಿಯ ವಿದ್ಯಾರ್ಥಿಗಳ ಹಾಗೂ ನೌಕರರ ಸೌಹಾರ್ದ ಸಹಕಾರಿ ನಿ,. ಕನಕಪುರ, ಸಹಕಾರಿಯ 15ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸೌಹಾರ್ದ ಕಾಯ್ದೆ, ಸದಸ್ಯರ ಹಕ್ಕುಗಳು ಹಾಗೂ ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು.



**ಬೆಂಗಳೂರು :** ದಿನಾಂಕ 18.12.2021 ರಂದು ಶ್ರೀ ಮುನೇಶ್ವರ ಸೌಹಾರ್ದ ಸಹಕಾರಿ ನಿ,. ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್ ರವರು ವಿಶೇಷಾಧಿಕಾರಿಗಳಾಗಿ ಭಾಗವಹಿಸಿದರು.



**ಕೋಲಾರ :** ದಿನಾಂಕ 18.12.2021 ರಂದು ಸೌಖ್ಯ ಸಮೃದ್ಧಿ ಸೌಹಾರ್ದ ಸಹಕಾರಿ ನಿ,. ಕೋಲಾರ, ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ. ಎಸ್. ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸೌಹಾರ್ದ ಕಾಯ್ದೆ, ಸದಸ್ಯರ ಹಕ್ಕುಗಳು ಹಾಗೂ ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು.



**ತುಮಕೂರು :** ದಿನಾಂಕ 17.12.2021 ರಂದು ಯಲ್ಲಾಪುರ ಸೌಹಾರ್ದ ಪತ್ತಿನ ಸಹಕಾರಿ ನಿ,. ಯಲ್ಲಾಪುರ, ತುಮಕೂರು. ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ. ಎಸ್. ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸೌಹಾರ್ದ ಕಾಯ್ದೆ, ಸದಸ್ಯರ ಹಕ್ಕುಗಳು ಹಾಗೂ ಜವಬ್ದಾರಿಗಳ ಕುರಿತು ಮಾಹಿತಿ ನೀಡಿದರು.



**ಬೆಂಗಳೂರು :** ದಿನಾಂಕ 12.12.2021 ರಂದು ಸಿರಿ ಶಂಕರಿ ಸೌಹಾರ್ದ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್. ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸೌಹಾರ್ದ ಕಾಯ್ದೆ, ಸದಸ್ಯರ ಹಕ್ಕುಗಳು ಹಾಗೂ ಜವಬ್ದಾರಿಗಳ ಕುರಿತು ಮಾಹಿತಿ ನೀಡಿದರು.



**ಚಿತ್ರದುರ್ಗ** : ದಿನಾಂಕ 09.12.2021 ರಂದು ವೀರಶೈವ ಸೌಹಾರ್ದ ಪತ್ತಿನ ಸಹಕಾರಿ ನಿ,. ಚಳ್ಳಕೆರೆ, ಚಿತ್ರದುರ್ಗ ಸಹಕಾರಿಯ 24ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸೌಹಾರ್ದ ಕಾಯ್ದೆ, ಸದಸ್ಯರ ಹಕ್ಕುಗಳು ಹಾಗೂ ಜವಬ್ದಾರಿಗಳ ಕುರಿತು ಮಾಹಿತಿ ನೀಡಿದರು.



**ಮೈಸೂರು** : ದಿನಾಂಕ 22.12.2021ರಂದು ಶ್ರೀ ಭುವನೇಶ್ವರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಭಾಗವಹಿಸಿ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, ಸೌಹಾರ್ದ ಸಹಕಾರಿಯ ಚಳುವಳಿ ಮತ್ತು ಸಹಕಾರಿಯ ಸದಸ್ಯರ ಜವಾಬ್ದಾರಿಗಳ ಬಗ್ಗೆ, ಸಹಕಾರಿಯ ನಿರ್ದೇಶಕರು ಮತ್ತು ಸದಸ್ಯರಿಗೆ ಮಾಹಿತಿಯನ್ನು ನೀಡಿದರು.



**ಕೋಲಾರ** : ದಿನಾಂಕ 24–12–2021ರಂದು ಚನ್ನಸಂದ್ರ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಚನ್ನಸಂದ್ರ ಗ್ರಾಮ, ಕೋಲಾರ ಜಿಲ್ಲೆ. ಈ ಸಹಕಾರಿಯ ಮೊದಲ ವಾರ್ಷಿಕ ಸಾಮಾನ್ಯ ಸಭೆ ಜರುಗಿತು.



**ಹಾಸನ** : ಸಹನಾ ವಿವಿದೋದ್ದೇಶ ಸೌಹಾರ್ದ ಸಹಕಾರಿಯ 17ನೇ ವಾರ್ಷಿಕ ಸಾಮಾನ್ಯ ಸಭೆಯ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಕೆ ರಮೇಶ ಇವರ ಅಧ್ಯಕ್ಷತೆಯಲ್ಲಿ ನಡೆಯಿತು.



**ಮೈಸೂರು** : ದಿನಾಂಕ: 25.12.2021ರಂದು ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ನಿ., ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಭಾಗವಹಿಸಿ, ಸಹಕಾರಿಯ ಡೈರಿ ಮತ್ತು ಕ್ಯಾಲೆಂಡರ್‌ಯನ್ನು ಬಿಡುಗಡೆ ಮಾಡಲಾಯಿತು.



**ಮೈಸೂರು** : ದಿನಾಂಕ 25.12.2021 ರಂದು ಗಾಯತ್ರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಮೈಸೂರು ಇದರ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ್ ರವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ವೇದಿಕ್ ವೆಲ್ನೆಸ್ ಯುನಿವರ್ಸಿಟಿ ವತಿಯಿಂದ ಡಾಕ್ಟರೇಟ್ ಗೌರವ ಪಡೆದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್ ರವರನ್ನು ಸನ್ಮಾನಿಸಲಾಯಿತು.



**ಮೈಸೂರು** : ದಿನಾಂಕ 25.12.2021ರಂದು ಸಿಬಿ ನರಸಿಂಹಸ್ವಾಮಿ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಯಿತು.



ದಿನಾಂಕ 24.12.2021 ರಂದು ವೀರಶೈವ ಲಿಂಗಾಯತ ಪತ್ತಿನ ಸೌಹಾರ್ದ ಸಹಕಾರಿ ನಿ,. ಸಹಕಾರಿಯ ಪ್ರಥಮ ಸರ್ವ ಸದಸ್ಯರ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್. ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸೌಹಾರ್ದ ಕಾಯ್ದೆ, ಸದಸ್ಯರ ಹಕ್ಕುಗಳು ಹಾಗೂ ಜವಬ್ದಾರಿಗಳ ಕುರಿತು ಮಾಹಿತಿ ನೀಡಿದರು.



**ಕೋಲಾರ** : ದಿನಾಂಕ 24.12.2021 ರಂದು ಚನ್ನಸಂದ್ರ ಶ್ರೀ ವೆಂಕಟೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ,. ಕೋಲಾರ ಇದರ ಪ್ರಥಮ ಸರ್ವ ಸದಸ್ಯರ ಸಭೆಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ. ಎಸ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸೌಹಾರ್ದ ಕಾಯ್ದೆ, ಸದಸ್ಯರ ಹಕ್ಕುಗಳು ಹಾಗೂ ಜವಬ್ದಾರಿಗಳ ಕುರಿತು ಮಾಹಿತಿ ನೀಡಿದರು.



**ಉಡುಪಿ** : ದಿನಾಂಕ 27.11.2021 ರಂದು ಸಾಯಿ ಗಣೇಶ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಉಡುಪಿ ಇದರ 20ನೇ ವರ್ಷದ ಮಹಾಸಭೆಯು ಉಡುಪಿಯ ಟಿ.ಎ ಪೈ ಮೋಹನ್ ಹಿರಿಯ ಪ್ರಾಥಮಿಕ ಶಾಲೆ, ವಿನೋಬಾ ನಗರ, ಕಾಡಬೆಟ್ಟು, ಉಡುಪಿ ಇಲ್ಲಿ ನಡೆಯಿತು. ಸಹಕಾ–ರಿಯ ಅಧ್ಯಕ್ಷರಾದ ಶ್ರೀ ಸಿ.ಆರ್.ಪೈ ಇವರು ಸಭೆಯ ಅಧ್ಯಕ್ಷತೆಯಲ್ಲಿ ನಡೆಯಿತು. ಠೇವಣಿಯಲ್ಲಿ ರೂ. 86.18 ಲಕ್ಷ ನಿಧಿಗಳಲ್ಲಿ ರೂ. 16.99 ಲಕ್ಷ ಮತ್ತು ಹೂಡಿಕೆಯಲ್ಲಿ ರೂ. 126.90 ಲಕ್ಷ ನಿಧಿಗಳಲ್ಲಿ ರೂ. 16.99 ಲಕ್ಷ ಮತ್ತು ಹೂಡಿಕೆಯಲ್ಲಿ ರೂ. 126.90 ಲಕ್ಷ ಏರಿಕೆಯನ್ನು ತೋರಿಸಿದೆ. ಶೇ.15% ಡಿವಿಡೆಂಡ್ ಅನ್ನು ಘೋಷಿಸಿದೆ.

ಗದಗ : ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಗದಗ ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಸಹಕಾರಿಯ ಧ್ವಜಾರೋಹಣ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ದುಂಡಪ್ಪ ನಿಂ ಆಸಂಗಿ ಇವರು ಅಧ್ಯಕ್ಷತೆಯಲ್ಲಿ ದಿನಾಂಕ 01–01–2022 ರ ಶನಿವಾರ ಬೆಳಿಗ್ಗೆ 10.00 ಘಂಟೆಗೆ ಸಹಕಾರಿಯ ಮುಂಭಾಗದಲ್ಲಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಎಸ ಎಂ ಪಾಟೀಲ ಸಾ. ಮಲ್ಲಸಮುದ್ರ ಇವರು ನೇರವೇರಿಸಿದರು ನಂತರ ಸಹಕಾರಿಯ ನಿರ್ದೇಶಕರಾದ ಶ್ರೀ ಶಾಂತಪ್ಪ ಬಿ ಕಲಕೇರಿ, ಶ್ರೀ ಅಶೋಕ ಎಸ್ ಸಂಕಣ್ಣವರ ಶ್ರೀ ಸಿದ್ದನಗೌಡ ಪಾಟೀಲ, ಶ್ರೀ ಶಿವಪ್ರಭು ನೀಲಗುಂದ, ಹಾಗೂ ಸವಿತಾ ಎಂ ಪಾಟೀಲ ಮುಂತಾದವರುಗಳು ಸೌಹಾರ್ದ ಸಹಕಾರಿ ಸಂಘದ ದಿನಾಚರಣೆಯ ಬಗ್ಗೆ ಅಧ್ಯಕ್ಷರು ಮಾತನಾಡಿದ ಬಳಿಕ ಚಹಾ ಪರಾಳದ ನಂತರ ಸಭೆಯ ಮುಕ್ತಾಯವಾಯಿತು ಎಂದು ಸಹಕಾರಿಯ ಮ್ಯಾನೇಜರ ಶ್ರೀ ಸಿ ವ್ಹಿ ಪಾಟೀಲ ಮತ್ತು ಸಹಕಾರಿಯ ಸಿಬ್ಬಂದಿಯಾದ ಶ್ರೀ ಪರಪ್ಪ ವ್ಹಿ ಬಳಿಗೇರ ಹಾಗೂ ಪಿಗ್ಮಿ ಸಂಗ್ರಹಕಾರರಾದ ಶ್ರೀ ರಮೇಶ ಪಿ ಅಣ್ಣಿಗೇರಿ ಮತ್ತು ಶ್ರೀ ಆಯ್ ಜಿ ಶಿರೂರು ಹಾಜರಿದ್ದರು.

ದಿನಾಂಕ 25.12.2021 ರಂದು ಆರ್‌ಯುಆರ್ ಇಡಿಎಎನ್ ಕ್ಯೂ ಸೌಹಾರ್ದ ಸಹಕಾರಿ ನಿ,. ಬೆಂಗಳೂರು ಇದರ 5ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಹಕಾರಿಯ ವಿಶೇಷಾಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ. ಎಮ್ ಇವರು ಭಾಗವಹಿಸಿ ಸೌಹಾರ್ದ ಕಾಯ್ದೆ, ಸದಸ್ಯರ ಹಕ್ಕುಗಳು ಹಾಗೂ ಜವಾಬ್ದಾರಿಗಳ ಕುರಿತು ಮಾಹಿತಿ ನೀಡಿದರು.



ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರ ನಿಯಮಿತ ಧಾರವಾಡ ದ ವಾರ್ಷಿಕ ಸರ್ವ ಸಾಧಾರಣ ಸಭೆಯಲ್ಲಿ ಅಧ್ಯಕ್ಷರಾದ ವೆಂಕಟೇಶ ದೇಸಾಯಿ ಮಾತನಾಡುತ್ತ ವಿಪ್ರ ಸೌಹಾರ್ದ ಈ ಕರೋನಾ ಸಂಧರ್ಭದಲ್ಲಿ ಕೂಡಾ ಉತ್ತಮ ಪ್ರಗತಿ ಸಾಧಿಸಿ ವ್ಯವಹಾರ 5 ಕೋಟಿಯಷ್ಟು ಮಾಡಿ ತನ್ನ ಶೇರುದಾರರಿಗೆ 7% ಲಾಭಾಂಶ (ಡಿವಿಡೆಂಡ) ನೀಡಿದ ಖ್ಯಾತಿ ನಮ್ಮ ಗರಿಮೆಯಾಗಿದೆ ಎಂದರು

ಅವರು ವಿಪ್ರ ಸೌಹಾರ್ದದ 13 ನೇ ವಾರ್ಷಿಕ ಸಭೆಯಲ್ಲಿ ಮಾತನಾಡುತ್ತ ಸಾಲ ವಸೂಲಾತಿ ಕೂಡಾ ಉತ್ತಮವಾಗಿದೆ ಇದಕ್ಕೆ ಸಹಕರಿಸಿದ ಸರ್ವರಿಗೂ ಅಭಿನಂದನೆಗೆ ಅರ್ಹರು ಎಂದರು.

ಪ್ರಾರಂಭದಲ್ಲಿ ಅಗಲಿದ ಗಣ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಿದಾಗ ಅನೇಕರು ಇತ್ತೀಚೆಗೆ ನಿಧನರಾದ ನಮ್ಮ ಸಂಸ್ಥಾಪಕರು ಹಾಗೂ ಹಿಂದಿನ ಉಪಾಧ್ಯಕ್ಷರಾದ ಶ್ರೀ ಜಿ ಡಿ ಉಪಾಧ್ಯೆ ಅವರು ಸಂಸ್ಥೆ ಬೆಳವಣಿಗೆಗೆ ನೀಡಿದ ಕಾಣಿಕೆ ಬಗೆಗೆ ಮಾತನಾಡಿ ಗೌರವ ಸಲ್ಲಿಸಿದರು.

ಶ್ರೀ ಮತಿ ಶಾಲಿನಿ ನಾಯಿಕ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಭೆ ಹಿರಿಯ ಸದಸ್ಯರಾದ ಆರ್ ಡಿ ಕುಲಕರ್ಣಿ ಸ್ವಾಗತಿಸಿದರು ನವೀನ ಕೊರ್ಲಳ್ಳಿ ಹಿಂದಿನ ವರ್ಷದ ಸಭೆಯ ನಡವಳಿ ಓದಿದರು. ಮಾಧವ ಶೂರ್ಪಾಲಿ ಪ್ರಗತಿ ವರದಿ ಮಂಡಿಸಿದರು ಡಿ ಎಮ್ ನಾಯಕರು ಬಜೆಟ್ ವರದಿ ಪ್ರಸ್ತುತ ಪಡಿಸಿದರು. ಶ್ರೀ ವಿನಾಯಕ ಜೋಶಿಯವರು 2020-21ರ ಲಾಭಾಂಶ ಘೋಶಣೆ ಮಾಡಿದರು

ಅಧ್ಯಕ್ಷೀಯ ಭಾಷಣ ವೆಂಕಟೇಶ ದೇಸಾಯಿ ಅವರಿಂದ ಹಾಗೂ ವಂದನಾರ್ಪಣೆ ಶೋಭಾ ದೇಶಪಾಂಡೆ ಅವರಿಂದ ನಡೆಯಿತು. ಶ್ರೀ ಅನಿಲ ಕಾಖಂಡಕಿ ಕಾರ್ಯಕ್ರಮ ನಿರ್ವಹಿಸಿದರು.

ಈ ಸಂಧರ್ಭದಲ್ಲಿ ಹಿರಿಯ ಸಂಸ್ಥಾಪಕರಾದ ಡಾ ಬಿ ಆರ್ ದೇಶಪಾಂಡೆ ಅವರನ್ನು ಆತ್ಮೀಯ ವಾಗಿ ಸನ್ಮಾನಿಸಲಾಯಿತು

ಕಾರ್ಯಕ್ರಮದಲ್ಲಿ ಅನಂತ ಥೀಟೆ, ಪ್ರಹ್ಲಾದ ನರಸಾಪೂರ, ಆನಂದ ಸಬ್ನಿಸ, ಎ ಸಿ ಕುಲಕರ್ಣಿ, ಮಧು ಧಾರವಾಡಕರ, ರಾಜು ಪಾಟೀಲ, ಶ್ರೀ ಮತಿ ಕಾಂತಾ ಕುಲಕರ್ಣಿ, ಬನಶಂಕರಿ ದೇಶಪಾಂಡೆ,ವಿಜಯಾ ದೇಸಾಯಿ, ಶ್ರುತಿ ಕುಲಕರ್ಣಿ, ವಸಂತ ಪಾಟೀಲ, ಅನೂಪ ಡಂಬಳ ಅಲ್ಲದೆ ಉಪಸ್ಥಿತರಿದ್ದರು.

## ಶ್ರೀ ರಾಮೇಶ್ವರ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿಯಮಿತ ತೀರ್ಥಹಳ್ಳಿ ಇದರ 19ನೇ ವಾರ್ಷಿಕ ಸಾಮಾನ್ಯ ಸಭೆ

ದಿನಾಂಕ 18-12-2021ನೇ ಶನಿವಾರದಂದು ತೀರ್ಥಹಳ್ಳಿ ಕುವೆಂಪು ರಸ್ತೆಯಲ್ಲಿರುವ ಶ್ರೀ ಗಾಯತ್ರಿ ಮಂದಿರದಲ್ಲಿ ಶ್ರೀ ರಾಮೇಶ್ವರ ಬಹುಉದ್ದೇಶಿ ಸೌಹಾರ್ದ ಸಹಕಾರಿಯ 19ನೇ ಸರ್ವ ಸದಸ್ಯರ ಮಹಾಸಭೆಯು ಸಹಕಾ-ರಿಯ ಅಧ್ಯಕ್ಷರಾದ ಶ್ರೀ ಜೆ. ಮಂಜುನಾಥ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ಉಪಾಧ್ಯಕ್ಷರು ಹಾಗೂ ಎಲ್ಲಾ ನಿರ್ದೇಶಕರುಗಳು, ಸಿಬ್ಬಂದಿಗಳು, ಪಿಗ್ಮಿ ಸಂಗ್ರಹಾಕಾರರು ಮತ್ತು ಸಹಕಾರಿಯ ಸದಸ್ಯರುಗಳು ಭಾಗವಹಿಸಿದ್ದರು.

ಸಭೆಯಲ್ಲಿ ಲೆಕ್ಕಪರಿಶೋಧನೆ, ಬೈಲಾ ತಿದ್ದುಪಡಿಗಳ ಹಾಗೂ ಲಾಭಾಂಶದ ವಿಚಾರವಾಗಿ ಉತ್ತಮ ರೀತಿಯಲ್ಲಿ ಚರ್ಚೆ ನಡೆದು, ಸದಸ್ಯರಿಗೆ ಶೇ 15% ಡಿವಿಡೆಂಡ್ ನೀಡುವುದೆಂದು ತೀರ್ಮಾನಿಸಲಾಯಿತು.

ಎಸ್.ಎಸ್.ಎಲ್.ಸಿ, ಪಿ.ಯು.ಸಿ ಹಾಗೂ ಡಿಗ್ರಿಯಲ್ಲಿ ಅತಿಹೆಚ್ಚು ಅಂಕಗಳಿಸಿದ ಸಹಕಾರಿಯ ಸದಸ್ಯರುಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಶ್ರೀ ನಾಗರಾಜ ಶೆಟ್ಟಿ, ಶ್ರೀ ಡಾ॥ ಎಸ್. ಸೂರ್ಯನಾರಾಯಣ ಉಡುಪಿ ಇವರಿಗೆ ಸನ್ಮಾನಿಸಲಾಯಿತು.

ತೀರ್ಥಹಳ್ಳಿ ಶಾಸಕರೂ, ಕರ್ನಾಟಕ ರಾಜ್ಯ ಗೃಹಮಂತಿಗಳೂ ಆದ ಸನ್ಮಾನ್ಯ ಶ್ರೀ ಆರಗ ಜ್ಞಾನೇಂದ್ರರವರಿಗೆ ಅಭಿನಂದಿಸಲಾಯಿತು.

ಸನ್ಮಾನಿತರಾದ ಶ್ರೀ ನಾಗರಾಜ ಶೆಟ್ಟರು ಮಾತನಾಡುತ್ತಾ ಸಹಕಾರಿಯ ಬೆಳವಣಿಗೆಯಲ್ಲಿ ತಮ್ಮ ಪಾತ್ರವನ್ನು ವಿವರಿಸಿ ಸಹಕಾರಿಗೆ ಶುಭಕೋರಿದರು. ಶ್ರೀ ಡಾ॥ ಎಸ್. ಸೂರ್ಯನಾರಾಯಣ ಉಡುಪರು ಸನ್ಮಾನಿಸಿದಕ್ಕೆ ಸಂತಸ ವ್ಯಕ್ತಪಡಿಸುತ್ತಾ ತಾವು ಸಾಗಿ ಬಂದ ದಾರಿಯನ್ನು ವಿವರಿಸಿದರು.

ಸನ್ಮಾನ್ಯ ಶ್ರೀ ಆರಗ ಜ್ಞಾನೇಂದ್ರರವರು ಮಾತಾನಾಡಿ ತಮ್ಮನ್ನು ಅಭಿನಂದಿಸಿರುವುದಕ್ಕೆ ಸಂತೋಷ ವ್ಯಕ್ತಪಡಿಸುತ್ತಾ ಇದು ನನಗೆ ಸೇರಬೇಕಾದಲ್ಲಿ ನಾಲ್ಕು ಬಾರಿ ನನ್ನನ್ನು ಆಯ್ಕೆ ಮಾಡಿದ ಮತದಾರರಿಗೆ ಸಲ್ಲಬೇಕು ಎಂದು ಹೇಳುತ್ತಾ ಸಹಕಾರಿಯು ಇನ್ನೂ ಉತ್ತಮ ರೀತಿಯಲ್ಲಿ ಬೆಳೆಯಲಿ ಎಂದು ಹಾರೈಸಿದರು.

ಕೊನೆಯಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ಮಂಜುನಾಥ ಶೆಟ್ಟಿಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಸಹಕಾರಿಯ ಹಿರಿಯರನ್ನು ನೆನೆಯುತ್ತಾ ತಮಗೆ ಉತ್ತಮ ಆಡಳಿತ ನಡೆಸಲು ಮಾರ್ಗದರ್ಶನ ನೀಡಿದವರಿಗೂ, ಸಹಕಾರ ನೀಡಿದ ಆಡಳಿತ ಮಂಡಳಿಯವರಿಗೂ, ಕಾಲಕಾಲಕ್ಕೆ ಸಾಲ ಮರುಪಾವತಿ ಮಾಡುತ್ತಿರುವ ಸದಸ್ಯರುಗಳಿಗೂ, ಸಿಬ್ಬಂದಿಗಳಿಗೂ, ಪಿಗ್ಮಿ ಸಂಗ್ರಹಕಾರರಿಗೂ ವಂದಿಸಿದರು. ಈ ಸಂಧರ್ಭದಲ್ಲಿ ಸಹಕಾರಿಯ ಸದಸ್ಯರುಗಳು ಮರಣ ಹೊಂದಿದ ಸಂದರ್ಭದಲ್ಲಿ ಸಹಾಯ ಧನ ನೀಡುವುದಾಗಿ ಘೋಷಿಸಿದರು.




**ಹೊನ್ನಾವರ** : ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ನಿ., ಹೊನ್ನಾವರ 2020–21ನೇ ಸಾಲಿನಲ್ಲಿ ರೂ 1.43 ಕೋಟಿ ಲಾಭ ಗಳಿಸಿದ್ದು ಶೇ10 ಡಿವಿಡೆಂಡ್ ಘೋಷಣೆ ಮಾಡಲಾಗಿದೆ ಎಂದು ಅಧ್ಯಕ್ಷ ಶ್ರೀ ಜಿ. ಜಿ. ಶಂಕರ ತಿಳಿಸಿದರು. ಅವರು 21–12–2021ರಂದು ನಡೆದ ಸಹಕಾರಿಯ 2020–21ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆ ಉದ್ಘಾಟಿಸಿ ಮಾತನಾಡಿದರು. 10 ವರ್ಷಗಳ ಹಿಂದೆ ಆರಂಭವಾದ ಸಹಕಾರಿ ದಶಮಾನೋತ್ಸವದ ಸಂದರ್ಭದಲ್ಲಿದ್ದು 40 ವರ್ಷಗಳ ಅನುಭವ ಇರುವ ನಿರ್ದೇಶಕರ ತಂಡದೊಂದಿಗೆ ಅತ್ಯುತ್ತಮ ಸೇವೆ ನೀಡುವುದರೊಂದಿಗೆ ರಾಜ್ಯ ಮಟ್ಟದಲ್ಲಿ ಹೆಸರು ಮಾಡಿದೆ. ಉಪಾಧ್ಯಕ್ಷರ ಮತ್ತು ಅನುಭವಿ ಹಿರಿಯ ನಿರ್ದೇಶಕರ ಸಹಕಾರ ಮಾರ್ಗದರ್ಶನದೊಂದಿಗೆ ನಮ್ಮ ಪ್ರಯತ್ನ ಮತ್ತು ತಮ್ಮ ಸಹಕಾರದೊಂದಿಗೆ ಸಹಕಾರಿಯನ್ನು ಮುನ್ನಡೆಸುತ್ತಿದ್ದೇನೆ ಎಂದರು. ಸೌಹಾರ್ದ ಕಾಯ್ದೆ ಪಾಲನೆ ಮಾಡುವ ತೀಕ್ಷ್ಣ ಬುದ್ಧಿಯುಳ್ಳ ಮತ್ತು ರಾಷ್ಟ್ರೀಕೃತ ಬ್ಯಾಂಕಿನ ಅನುಭವ ವಿರುವ, ಪ್ರಧಾನ ಕಛೇರಿ ಅಧಿಕಾರಿಗಳು, ಜವಾಬ್ದಾರಿ ಅಚ್ಚುಕಟ್ಟಾಗಿ ನಿರ್ವಹಿಸುವ ದಕ್ಷ ಸಿಬ್ಬಂದಿಗಳು, ಅತ್ಯಂತ ಶ್ರಮವಹಿಸುವ ಫೀಲ್ಡ್‌ಎಕ್ಸಿಕ್ಯೂಟಿವ್ಸ್ ಇವರೆಲ್ಲರಿಂದಾಗಿ ಸಹಕಾರಿ 10 ವರ್ಷಗಳಲ್ಲಿ 12 ಶಾಖೆಗಳನ್ನು ಮಾಡಲು ಸಾಧ್ಯವಾಗಿದ್ದು ಹತ್ತು ಆರ್ಥಿಕ ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆಯೆಂದು ತಿಳಿಸಿದರು. ಕೋವಿಡ್‌ನಂತಹ ಸಂದರ್ಭದಲ್ಲೂ ಕೊರೋನಾ ವಾರಿಯರ್ಸಗಳಂತೆ ಕಾರ್ಯನಿರ್ವಹಿಸಿದ ಸಿಬ್ಬಂದಿ ಮತ್ತು ಫೀಲ್ಡ್ ಎಕ್ಸಿಕ್ಯೂಟಿವ್‌ಗಳನ್ನು ಅಭಿನಂದಿಸಿದರು.

ವರ್ಷಾಂತ್ಯಕ್ಕೆ ಒಟ್ಟೂ 34,889 ಸದಸ್ಯರು, ರೂ2.84ಕೋಟಿ ಶೇರು ಬಂಡವಾಳ, ರೂ57.85 ಕೋಟಿ ಠೇವಣಿ ಹೊಂದಿದ್ದು, ರೂ50.99 ಕೋಟಿ ಸದಸ್ಯರ ಸಾಲ ಇರುತ್ತದೆ. ದುಡಿಯುವ ಬಂಡವಾಳ ರೂ64.84ಕೋಟಿಯಷ್ಟು ಆಗಿದ್ದು, 2020–21ನೇ ಸಾಲಿನಲ್ಲಿ ರೂ108.84ಕೋಟಿಯಷ್ಟು ವ್ಯವಹಾರ ಮಾಡಿದೆಯೆಂದು ತಿಳಿಸಿದರು. ಕೋವಿಡ್–19 ನಂತಹ ಕ್ಲಿಷ್ಟಕರ ಸಂದರ್ಭದಲ್ಲೂ ಶೇ91.22ರಷ್ಟು ವಸೂಲಿ ಮಾಡಿದ್ದುಅತ್ಯುತ್ತಮ ಸಾಧನೆ–ಎಂದರು.

ಜನರಲ್ ಮೆನೇಜರ್ ಮಹೇಶ ಎಸ್. ಶೆಟ್ಟಿ ಸ್ವಾಗತಿಸಿದರು ಮತ್ತು 2020–21 ಸಾಲಿನ ವರದಿ ವಾಚಿಸಿದರು. ನಿರ್ದೇಶಕ ಜಿ. ಆರ್. ಹೆಗಡೆ ಪ್ರಾಸ್ತಾವಿಕ ನುಡಿದರು. ರಾಷ್ಟ್ರಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕ ಎಸ್. ಎಸ್. ಭಟ್ಟ, ಜಿ.ಎಸ್. ಭಟ್ಟ, ಎಸ್.ಜಿ. ಭಟ್ಟ, ಆರ್.ಎನ್. ಪಟಗಾರ, ನಂದನ ಭಟ್, ಜಿ.ವಿ. ಹೆಗಡೆ, ಮಾಂತೇಶ ಹಾದಿಮನಿ, ಎಸ್.ಜಿ. ಹೆಗಡೆ ಸೇರಿದಂತೆ ಅನೇಕ ಸದಸ್ಯರುಗಳು ಅತ್ಯಮೂಲ್ಯ ಸಲಹೆ ನೀಡಿದರು. ವರದಿ ಸಾಲಿನಲ್ಲಿ ಸಾಧನೆ ಮಾಡಿದಶಾಖೆ, ಸಿಬ್ಬಂದಿ, ಫೀಲ್ಡ್‌ಎಕ್ಸಿಕ್ಯೂಟಿವ್, ನಿರ್ದೇಶಕರು ಹಾಗೂ ಬಿಡಿಸಿ ನಿರ್ದೇಶಕರುಗಳಿಗೆ ನೆನಪಿನ ಕಾಣಿಕೆ ನೀಡಿ ಸತ್ಕರಿಸುವ ಕಾರ್ಯಕ್ರಮವನ್ನು–ಎಜಿಎಂಎಡ್ವಿನ್‌ರೆಬೆಲ್ಲೋ ನಡೆಸಿಕೊಟ್ಟರು. ಸಂಯುಕ್ತ ಸಹಕಾರಿ ನಡೆಸುವ ಡಿಸಿಬಿಎಂ ಕೋರ್ಸನಲ್ಲಿ ಉತ್ತೀರ್ಣರಾದ ಸಹಕಾರಿಯ 18 ಸಿಬ್ಬಂದಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಚೀಫ್ ಮೆನೇಜರ್ ವಸಂತ ನಾಯ್ಕ, ಡೆವಲಪಮೆಂಟ್ ಆಫಿಸರ್ ರವಿಚಂದ್ರ ತಮ್ಮ ವಿಭಾಗದಲ್ಲಿ ಸಾಧನೆ ಮಾಡಿದ ಸಿಬ್ಬಂದಿಗಳಿಗೆ ಬಹುಮಾನ ನೀಡಿದರು. ಸಾಲ ವಸೂಲಿ ಸಂಬಂಧಪಟ್ಟಂತೆ ನೂತನ ಅಂಡ್ರಾಯ್ಡ್ ಮಷಿನ್ ಬಿಡುಗಡೆಗೊಳಿಸಲಾಯಿತು.ಉಪಾಧ್ಯಕ್ಷ ನಾಗರಾಜ ಇಂದ್ರ ವಂದನಾರ್ಪಣೆ ಮಾಡಿದರು. ಆಡಳಿತ ಮಂಡಳಿ ನಿರ್ದೇಶಕರು ಎಸ್.ಎನ್. ಭಟ್ಟ, ಎನ್.ಟಿ ಪಟಗಾರ, ಲಿಪರ್ಡರೋಡ್ರಿಗ್ಸ್, ರಾಜೇಶದೇಸಾಯಿ, ಎಲ್.ಜೆ.ಪಟಗಾರ, ಗೋಪಾಲಕೃಷ್ಣ ಭಟ್ಟ, ಪಾತ್ರೋನ್ ಫರ್ನಾಂಡಿಸ್, ಗುಣಮಾಲ ಇಂದ್ರ, ಮಾರುತಿಗೌಡ, ನಾಗೇಶ ದೇವಾಡಿಗಬಿಡಿಸಿ ನಿರ್ದೇಶಕರು, ಡೆವಲಪ್‌ಮೆಂಟ್ ಆಫೀಸರ್ ಶ್ರೀಪಾದ ಭಟ್ಟ, ಐಟಿ ಮೆನೇಜರ್ ವಿಘ್ನೇಶ್ವರ ಹೆಗಡೆ, ಇಂಟರ್ನಲ್‌ಆಡಿಟರ್ ನರೇಂದ್ರ ಪ್ರಭು, ಅನೇಕ ಸದಸ್ಯರುಗಳು, ಎಲ್ಲಾ ಸಿಬ್ಬಂದಿಗಳು, ಫೀಲ್ಡ್ ಎಕ್ಸಿಕ್ಯೂಟಿವ್‌ಗಳು ಹಾಜರಿದ್ದರು. ಮಂಕಿ ಶಾಖೆ ಮೆನೇಜರ್‌ಜೀವನ ನಾಯ್ಕ ಮತ್ತು ಅಳ್ವಂಕಿ ಶಾಖೆ ಕೋ–ಆರ್ಡಿನೇಟರ್ ಮಾದೇವ ನಾಯ್ಕ ಕಾರ್ಯಕ್ರಮವನ್ನುಅಚ್ಚುಕಟ್ಟಾಗಿ ನಿರ್ವಹಿಸಿದರು.




## ವಾರ್ಷಿಕ ಸಾಮಾನ್ಯ ಸಭೆ

**ಮಂಡ್ಯ** : ದಿನಾಂಕ 24.12.2021ರಂದು ಮಂಡ್ಯ ತಾಲ್ಲೂಕು ಶಾಮಿಯಾನ ಮಾಲೀಕರ ಸೌಹಾರ್ದ ಸಹಕಾರಿ ನಿ., ಮಂಡ್ಯ ಇದರ 2020–21ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಎ.ಸಿ ರಮೇಶ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ವೇದಿಕೆ ಮೇಲೆ ಉಪಾಧ್ಯಕ್ಷರು, ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಇಓ ಆದ ಶ್ರೀಮತಿ ಸ್ಪಂದನ ರವರು ಉಪಸ್ಥಿತರಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



ಶ್ರೀ ಭಾಗ್ಯಜ್ಯೋತಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯು ಜನವರಿ 01 ರಂದು ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಅಶೋಕ ಮೂಲಿಮನಿ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ನಿರ್ದೇಶಕರುಗಳಾದ ಆಯ್. ಎಮ್. ಬಾಗವಾನ, ಎಸ್. ಎನ್. ದೇಗಾಂವಿ, ಬಿ. ಡಿ. ಪೂಜಾರಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಮ್. ಎಸ್. ದಮ್ಮಣಗಿಮಠ, ಕಿತ್ತೂರ ಶಾಖೆಯ ಕಾರ್ಯದರ್ಶಿ ಎ. ಡಿ. ಬಾಗವಾನ ಹಾಗೂ ಸಹಕಾರಿ ಸಿಬ್ಬಂದಿ ವರ್ಗದವರು ಹಾಜರಿದ್ದರು.



**ಬೆಳಗಾವಿ :** ಅರಿಹಂತ ಅರ್ಬನ್ ಸೌಹಾರ್ದ ಕ್ರೆಡಿಟ್ ಸಹಕಾರಿಯು ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಅಶೋಕ ಪಾಟೀಲ ಇವರು ನೆರವೇರಿಸಿದರು. ಪ್ರಧಾನ ಕಾರ್ಯದರ್ಶಿಯಾದ ಆನಂದ ಚೌಗಲಾ ಸೌಹಾರ್ದ ಕಾಯ್ದೆಗಳ ಬಗ್ಗೆ ತಿಳುವಳಿಕೆ ನೀಡಿದರು. ನಿರ್ದೇಶಕರಾದ ಶ್ರೀ ಭೂಪಾಲ ಚೌಗಲಾ, ಮಾಯಾಪ್ಪಾ ಹೊಳೆಪ್ಪಗೋಳ, ರಾಮಣ್ಣಾ ಗೋಟುರಿ, ಜಿನ್ನಪ್ಪಾ ಸಪ್ತಸಾಗರ ಹಾಗೂ ಸಿಬ್ಬಂದಿ ವರ್ಗದವರೂ ಉಪಸ್ಥಿತರಿದ್ದರು.





**ರಾಯಚೂರು :** ಶ್ರೀ ಜಗದ್ಗುರು ರೇಣುಕಾಚಾರ್ಯ ಪತ್ತಿನ ಸೌಹಾರ್ದ ಸಹಕಾರಿ ನಿ., ಸಹಕಾರಿಯ ಸೌಹಾರ್ದ ಸಹಕಾರಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎನ್. ವೀರಯ್ಯಸ್ವಾಮಿ ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನಸ್ವಾಮಿ ಹಾಗೂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಚಾಮರಾಜನಗರ :** ದಿನಾಂಕ 01.01.2022 ರಂದು 21ನೇ "ಸೌಹಾರ್ದ ಸಹಕಾರಿ ದಿನಾಚರಣೆ" ಯ ನಿಮಿತ್ತ ಸಂಗಮ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಕಛೇರಿಯಲ್ಲಿ ಉಪಾಧ್ಯಕ್ಷ ರಾದ ಶ್ರೀ ಸಿ.ಆರ್ ಚಂದ್ರಶೇಖರ ರವರು ಧ್ವಜಾರೋಹಣ ಮಾಡುವ ಜೊತೆಗೆ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಕಛೇರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಚಾಮರಾಜನಗರ :** ದಿನಾಂಕ 01.01.2022 ರಂದು 21ನೇ "ಸೌಹಾರ್ದ ಸಹಕಾರಿ ದಿನಾಚರಣೆ" ಯ ನಿಮಿತ್ತ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಸಿ.ಪಿ ಪದ್ಮಪ್ರಸಾದ್ ರವರು ಧ್ವಜಾರೋಹಣ ಮಾಡಿದರು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಕಛೇರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಚಾಮರಾಜನಗರ :** ದಿನಾಂಕ 01.01.2022 ರಂದು 21ನೇ "ಸೌಹಾರ್ದ ಸಹಕಾರಿ ದಿನಾಚರಣೆ" ಯ ನಿಮಿತ್ತ ಮುಪ್ಪಿನ ಷಡಕ್ಷರಿದೇವ ಸೌಹಾರ್ದ ಸಹಕಾರಿ ನಿ., ಯಳಂದೂರು ಕಛೇರಿಯಲ್ಲಿ ಧ್ವಜಾರೋಹಣ ಮಾಡಲಾಯಿತು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಕು. ನಾಗಪೂಜಾ ರವರು ಉಪಸ್ಥಿತರಿದ್ದರು.



**ಚಾಮರಾಜನಗರ :** ದಿನಾಂಕ 01.01.2022 ರಂದು 21ನೇ "ಸೌಹಾರ್ದ ಸಹಕಾರಿ ದಿನಾಚರಣೆ" ಯ ನಿಮಿತ್ತ ನವ್ಯಕರ್ನಾಟಕ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಕಛೇರಿಯಲ್ಲಿ ಧ್ವಜಾರೋಹಣ ಮಾಡಲಾಯಿತು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿ ರವರು, ಉಪಾಧ್ಯಕ್ಷರಾದ ಶ್ರೀ ಮಂಜು ರವರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಶಿವಕುಮಾರ್ ರವರು ಉಪಸ್ಥಿತರಿದ್ದರು.



**ಮಂಡ್ಯ :** ದಿನಾಂಕ 01.01.2022 ರಂದು 21ನೇ "ಸೌಹಾರ್ದ ಸಹಕಾರಿ ದಿನಾಚರಣೆ" ಯ ನಿಮಿತ್ತ ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಕಛೇರಿಯಲ್ಲಿ ಧ್ವಜಾರೋಹಣ ಮಾಡಲಾಯಿತು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಸ್. ನಾಗರಾಜು ರವರು, ಆಡಳಿತ ಮಂಡಳಿ ಸದಸ್ಯರು, ಸಿಇಓ ಶ್ರೀ ಮಹೇಶ್ ರವರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮಂಡ್ಯ :** ದಿನಾಂಕ 01.01.2022 ರಂದು 21ನೇ "ಸೌಹಾರ್ದ ಸಹಕಾರಿ ದಿನಾಚರಣೆ" ಯ ನಿಮಿತ್ತ ಎಸ್.ಡಿ ಮಾಸ್ತಮ್ಮ ಸೌಹಾರ್ದ ಸಹಕಾರಿ ನಿ., ಮದ್ದೂರು ಕಛೇರಿಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಸ್ವಾಮಿ ರವರು ಧ್ವಜಾರೋಹಣದ ನಂತರ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಸದರಿ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಶ್ರೀಮತಿ ಲಕ್ಷ್ಮೀ ರವರು ಉಪಸ್ಥಿತರಿದ್ದರು.



**ಹಾಸನ :** ದಿನಾಂಕ 01.01.2022 ರಂದು 21ನೇ "ಸೌಹಾರ್ದ ಸಹಕಾರಿ ದಿನಾಚರಣೆ" ಯ ನಿಮಿತ್ತ ಸಹನಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಕಛೇರಿಯಲ್ಲಿ ಧ್ವಜಾರೋಹಣ ಮಾಡಲಾಯಿತು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ರಮೇಶ್ ರವರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಶ್ರೀಮತಿ ಪದ್ಮಾವತಿ ರವರು ಉಪಸ್ಥಿತರಿದ್ದರು.

**ಗದಗ :** ಭಾಗ್ಯಲಕ್ಷ್ಮೀ ವಿವಿದೋದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಗದಗ ಇದರ ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಸಹಕಾರಿಯ ಧ್ವಜಾರೋಹಣ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಅಶೋಕ ಪಿ ಮುತ್ತಿನ ಅವರ ಅಧ್ಯಕ್ಷತೆಯಲ್ಲಿ 01-01-2022 ರ ಶನಿವಾರ ಬೆಳಿಗ್ಗೆ 10.00 ಘಂಟೆಗೆ ಸಹಕಾರಿಯ ಮುಂಭಾಗದಲ್ಲಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಕೆ ಎಸ ಹೊಸಮಠ ಸಾ॥ಗದಗ ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಪಿಗ್ಮಿಸಂಗ್ರಹಕಾರರು ಮತ್ತು ಸಹಕಾರಿಯ ಸದಸ್ಯರು ಹಾಗೂ ಠೇವುದಾರರು ಉಪಸ್ಥಿತರಿದ್ದು ಕಾರ್ಯಕ್ರಮ ಯಶಸ್ವಿಗೊಳಿಸಿದರು.

# ರಾಯಚೂರು ತಾಲ್ಲೂಕು ಸೌಹಾರ್ದ ಸಹಕಾರಿಗಳ ಕಾರ್ಯನಿರತ ನೌಕರರ ಅಸೋಷಿಯೇಸನ್ ವತಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ



**ರಾಯಚೂರು** : ದಿನಾಂಕ 01–01–2022ರಂದು ರಾಯಚೂರು ನಗರದ ಭೂಮೀನ್ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಕಛೇರಿ ಆವರಣದಲ್ಲಿ ರಾಯಚೂರು ತಾಲ್ಲೂಕು ಸೌಹಾರ್ದ ಸಹಕಾರಿಗಳ ಕಾರ್ಯನಿರತ ನೌಕರರ ಅಸೋಷಿಯೇಸನ್ ವತಿಯಿಂದ ಸೌಹಾರ್ದ ಸಹಕಾರಿ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಮಾನ್ಯ ಶ್ರೀ ಐ.ಎಸ್. ಗಿರಡ್ಡಿ, ಅಪರ ನಿಬಂಧಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಆರ್.ಡಿ.ಸಿ.ಸಿ ಬ್ಯಾಂಕ್ ರಾಯಚೂರು. ಮಾನ್ಯ ಶ್ರೀ ಹನುಮಂತ್ ಗೌಡ ಹರವಿ, ಅಧ್ಯಕ್ಷರು ಭೂಮಿನ್ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ರಾಯಚೂರು ಹಾಗೂ ಸಹಕಾರ ಭಾರತಿಯ ಜಿಲ್ಲಾ ನಿರ್ದೇಶಕರಾದ ಶ್ರೀ ಕೆ ವೇಣುಗೋಪಾಲ್ ಇವರುಗಳು ಹಾಜರಿದ್ದರು ಮತ್ತು ಸಭೆಯ ಅಧ್ಯಕ್ಷತೆಯನ್ನು ರಾಯಚೂರು ತಾಲ್ಲೂಕು ಸೌಹಾರ್ದ ಸಹಕಾರಿಗಳ ಕಾರ್ಯನಿರತ ನೌಕರರ ಅಸೋಷಿಯೇಸನ್‌ನ ಅಧ್ಯಕ್ಷರಾದ ಶ್ರೀ ರವಿಕುಮಾರ. ವಿ ಆಶಾಪೂರು ಇವರು ವಹಿಸಿದ್ದರು ಮತ್ತು ಸಭೆಯಲ್ಲಿ ರಾಯಚೂರು ತಾಲೂಕು ಸೌಹಾರ್ದ ಸಹಕಾರಿಗಳ ಕಾರ್ಯನಿರತ ನೌಕರರ ಅಸೋಷಿಯೇಸನ್‌ನ ಉಪಾಧ್ಯಕ್ಷರಾದ ಶ್ರೀಮತಿ ಅಮೃತ ಹನುಮಂತಗೌಡ ಸ್ವಾಗತ ಕಾರ್ಯಕ್ರಮವನ್ನು ನೆರವೇರಿಸಿದರು, ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶೀವಲೀಲಾ ರೆಡ್ಡಿ ಪ್ರಾರ್ಥನೆ ಗೀತೆಯನ್ನು ಹಾಡಿದರು, ಸಂಘದ ಕಾರ್ಯದರ್ಶಿಗಳಾದ ಶ್ರೀ ನಾಗರಾಜ ಪಾಟೀಲ್ ಪ್ರಾಸ್ತಾವಿಕ ನುಡಿಗಳನ್ನಾಡಿದರು, ಮತ್ತು ಸಂಘದ ಖಾಜಾಂಜಿಯಾದ ಶ್ರೀ.ಗಿರಿಯಪ್ಪ ಹವಲ್ದಾರ ಕಾರ್ಯಕ್ರಮವನ್ನು ನಿರೂಪಿಸಿದರು ಮತ್ತು ಎನ. ಎಂ.ಪ್ರಸನ್ನಕುಮಾರ ವಂದನಾರ್ಪಣೆಯನ್ನು ಸಲ್ಲಿಸಿದರು. ಕಾರ್ಯಕ್ರಮದ ಮುಖ್ಯ ಅಥಿತಿಗಳಾದ ಮಾನ್ಯ ಶ್ರೀ ಐ.ಎಸ್.ಗಿರಡ್ಡಿ ಇವತ್ತಿನ ದಿನದಲ್ಲಿ ಸಹಕಾರ ಚಳುವಳಿಯು ಜೀವಂತವಾಗಿರಲು ಕಾರಣ ಇಂದು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿಗಳಿಂದಲೇ ಎಂದು ಪ್ರಶಂಶೆ ವ್ಯಕ್ತಪಡಿಸಿದರು ಮತ್ತು ಸಹಕಾರಿಯ ಪಿತಾಮಹಾ ಶ್ರೀ ಸಿದ್ದನಗೌಡ ಸಣ್ಣರಾಮಾನಗೌಡರವರನ್ನು ಸ್ಮರಿಸಿದರು, ಈ ಸಂದರ್ಭದಲ್ಲಿ ರಾಯಚೂರು ತಾಲ್ಲೂಕು ಸೌಹಾರ್ದ ಸಹಕಾರಿಗಳ ಕಾರ್ಯನಿರತ ನೌಕರರ ಅಸೋಷಿಯೇಸನ್ ವತಿಯಿಂದ ಮುಖ್ಯ ಅಥಿತಿಗಳಿಗೆ ಸನ್ಮಾನ ಮತ್ತು ನೆನಪಿನ ಕಾಣಿಕೆಯನ್ನು ಸಲ್ಲಿಸಲಾಯಿತು ಅಧ್ಯಕ್ಷತೆಯನ್ನು ವಹಿಸಿದ ನೌಕರರ ಅಸೋಷಿಯೇಷನ ಅಧ್ಯಕ್ಷರಾದ ರವಿಕುಮಾರ. ವಿ. ಆಶಾಪೂರು ಇವರು ಮಾತನಾಡಿ ಸಹಕಾರಿ ಕ್ಷೇತದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗಾಗಿ ಜನವರಿ 23 ರಂದು ನಗರದ ರಾಯಲ್ ಫೋರ್ಟ ಹೋಟೆಲನಲ್ಲಿ ಒಂದು ದಿನದ ವಿಷಯಾಧಾರಿತ ತರಬೇತಿಯನ್ನು ಅಯೋಜಿಸಿರುವ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಅಸೋಷಿಯೇಷನನ ವಲ್ಲೆಮ ಗಾಲಯ್ಯ, ಶಿವ ಪಾರ್ವತಿ ಗಣೇಶ್ ಸಹಕಾ–ರಿಯ ಪ್ರಭಾಕರ್ ರೆಡ್ಡಿ, ಪ್ರಕೃತಿ ಪತ್ತಿನ ಸಹಕಾರಿಯ ರಾಜೇಶ್ ಚಂದುರಿ, ಶ್ರೀ ಲಕ್ಷ್ಮೀ ಪ್ರಗತಿ ಸಹಕಾರಿಯ ಅಶೋಕ್ ನಾಯಕ್, ಕಾಕತೀಯ ತುಂಗಭದ್ರ ಸಹಕಾರಿಯ ಸುಶ್ಮೀತಾ. ಈ ನೀರ್ಕೋ ಸಹಕಾರಿಯ ಶರಣಪ್ಪ ಜಾಡಲ್‌ದಿನ್ನಿ, ಸೌಮ್ಯಶ್ರೀ ಸಹಕಾರಿಯ ಶ್ರೀಮತಿ ಮಲ್ಲಮ್ಮ ಹಾಗೂ ರಾಯಚೂರು ತಾಲ್ಲೂಕು ಎಲ್ಲಾ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಸಿರವಾರ** : ದಿನಾಂಕ 01–01–2022 ರಂದು ವಿವೇಕ್ ಪತ್ತಿನ ಸೌಹಾರ್ದ ಸಹಕಾರಿ ನಿ. ಸಿರವಾರ ಸಹಕಾರಿಯು ಸೌಹಾರ್ದ ಸಹಕಾರಿ ದಿನಚರಣೆಯನ್ನು ಸಹಕಾರಿಯ ಸಂಸ್ಥಾಪಕರಾದ ಶ್ರೀ ಮಹೇಶ ಕೊಳ್ಳಿ ಧ್ವಜಾರೋಹಣವನ್ನು ನೆರವೇರಿಸಿದರು. ಹಾಗೂ ಸಹಕಾರಿಯ ಸದಸ್ಯರಿಗೆ ನವ ವರ್ಷದ ಕ್ಯಾಲೆಂಡರ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಗಂಗಾಧರ ಜೆ. ಬಿ.ಗಿರಿಶ್, ಅಮರೇಶ ನಾಯಕ್, ಬಿ.ಮಹಾಂತೇಶ್ ಪ್ರೇಮ್ ಕುಮಾರ ಹಾಗೂ ವ್ಯವಸ್ಥಾಪಕ ಚೇತನ್ ಕುಮಾರ ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



**ಹಾಸನ :** ದಿನಾಂಕ 11.12.2021 ರಂದು ಸ್ವರ್ಣಭಾರತಿ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿಯ 16ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರ ಹಾಗೂ ಆಡಳಿತ ಮಂಡಳಿ ಸದಸ್ಯರ ಅಧ್ಯಕ್ಷತೆಯಲ್ಲಿ ನಡೆಯಿತು.



**ಕೊಡಗು :** ಕೊಡಗು ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಸೌಹಾರ್ದ ಸಹಕಾರಿಯ ದಿನಾಚರಣೆಯ ಧ್ವಜಾರೋಹಣವನ್ನು ಸಹಕಾರಿಯ ನಿರ್ದೇಶಕರಾದ ಶ್ರೀ ಮಣವಟ್ಟೀರ ಬಿ. ಮಾಚಯ್ಯ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಹಾಸನ :** 21ನೇ "ಸೌಹಾರ್ದ ಸಹಕಾರಿ ದಿನಾಚರಣೆ" ಯ ನಿಮಿತ್ತ ಆರ್ಯ ವೈಶ್ಯ ಸೌಹಾರ್ದ ಸಹಕಾರಿ ನಿ., ಬೇಲೂರು ಕಛೇರಿಯಲ್ಲಿ ಧ್ವಜಾರೋಹಣ ಮಾಡಲಾಯಿತು. ಸದರಿ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎ ಪ್ರಕಾಶ್ ರವರು, ಆಡಳಿತ ಮಂಡಳಿ ಸದಸ್ಯರು ಮತ್ತು ಸಿಇಓ ಶ್ರೀಫಣೀಂದ್ರ ರವರು ಉಪಸ್ಥಿತರಿದ್ದರು.



ಶ್ರೀ ಸಿದ್ದಲಿಂಗಯ್ಯ ರವರು, ಅಧ್ಯಕ್ಷರು, ಸಮೃದ್ಧಿ ಭಾರತೀನಗರ ಸೌಹಾರ್ದ ಸಹಕಾರಿ ನಿ., ಮದ್ದೂರು ಮತ್ತು ಶ್ರೀ ಗುರುರಾಜ್ ರವರು, ಅಧ್ಯಕ್ಷರು, ಶ್ರೀ ವೀರ ಮಡಿವಾಳ ಮಾಚಿದೇವ ಸೌಹಾರ್ದ ಸಹಕಾರಿ ನಿ., ಮಂಡ್ಯ ಇವರುಗಳು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ರವರು "ಸಹಕಾರ ಭಾರತಿ" ಅಖಿಲ ಭಾರತದ ಉಪಾಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಕೇಂದ್ರ ಕಛೇರಿಯಲ್ಲಿ ಭೇಟಿ ಮಾಡಿ ಶುಭಾಶಯ ಕೋರಿದರು.



**ಚಾಮರಾಜನಗರ :** ಶ್ರೀ ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿ ನಿ., ಚಾಮರಾಜನಗರ ಕಛೇರಿಯಲ್ಲಿ "ಸೌಹಾರ್ದ ಸಹಕಾರಿ ದಿನಾಚರಣೆ " ನಿಮಿತ್ತ ಧ್ವಜಾರೋಹಣವನ್ನು ವಿರಕ್ತ ಮಠದ ಶ್ರೀ ಶ್ರೀ ಶ್ರೀ ಚನ್ನಬಸವಸ್ವಾಮಿಗಳು ನೆರವೇರಿಸಿದರು. ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ರಾಮಸಮುದ್ರ ಬಾಬು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಇಓ ಹಾಜರಿದ್ದರು.



**ಚಿಕ್ಕಮಗಳೂರು :** ಸಮಾನ ಪತ್ತಿನ ಸೌಹಾರ್ದ ಸಹಕಾರಿ ನಿ. ಚಿಕ್ಕಮಗಳೂರು ತನ್ನ 7ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಡಳಿತ ಮಂಡಳಿಯ ಸದಸ್ಯರು ಮತ್ತು ಸಿಇಓ ರವರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾಗಡಿ ಕೈಮರ, ಚಿಕ್ಕಮಗಳೂರು ತಾಲೂಕಿನ ಶಾಲೆಯ ಮಕ್ಕಳಿಗಾಗಿ ಆಟದ ಕುರ್ಚಿಗಳನ್ನು ಮತ್ತು ಟೇಬಲ್ ಗಳನ್ನು ಕೊಡುಗೆ ನೀಡಲಾಗಿದೆ ಎಂದು ಸಿಇಓ ರವರು ಮಾಹಿತಿಯನ್ನು ನೀಡಿರುತ್ತಾರೆ.

# ಕನಕದಾಸ ಸೌಹಾರ್ದ ಸಹಕಾರಿಯ 4ನೇ ಶಾಖೆ ಉದ್ಘಾಟನೆ



**ಹನಮಸಾಗರ :** ಕನಕದಾಸ ಪತ್ತಿನ ಸೌಹಾರ್ದ ಸಹಕಾರಿ ನಿ. ಹನಮಸಾಗರ ಇದರ 4ನೇ ಶಾಖೆಯನ್ನು ಹನಮನಾಳದಲ್ಲಿ ಮಾಜಿ ಶಾಸಕರಾದ ಸನ್ಮಾನ್ಯ ಶ್ರೀ ದೊಡ್ಡನಗೌಡ ಪಾಟೀಲ ಇವರು ಉದ್ಘಾಟಿಸಿದರು.

ನಂತರ ಮಾತನಾಡಿ ಕನಕದಾಸ ಪತ್ತಿನ ಸೌಹಾರ್ದ ಸಹಕಾರಿ ಕಳೆದ 11 ವರ್ಷದಲ್ಲಿ ಪ್ರತಿ ವರ್ಷದಿಂದ-ವರ್ಷಕ್ಕೆ ಉತ್ತಮ ಗ್ರಾಹಕ ಸ್ನೇಹಿ ಸಹಕಾರಿಯಾಗಿ ವರ್ಷದಿಂದ-ವರ್ಷಕ್ಕೆ ಉತ್ತಮ ಲಾಭವನ್ನು ಗಳಿಸುತ್ತಾ ಜಿಲ್ಲೆಯಲ್ಲಿ ಉತ್ತಮ ಸಹಕಾರಿ-2019 ಪ್ರಶಸ್ತಿಯನ್ನು ಪಡೆದು ಒಂದು ಉತ್ತಮ ಆಡಳಿತ ಮಂಡಳಿ & ಸಿಬ್ಬಂದಿ ಸಹಕಾರಿಯಾಗಿದೆ ಸಹಕಾರಿ ಇನ್ನೂ ಅಭಿವೃದ್ಧಿ ಪಥದತ್ತ ಸಾಗಲಿ ಜನರಿಗೆ ಉತ್ತಮ ರೀತಿಯಿಂದ ಸೇವೆ ಒದಗಿಸಲಿ ಎಂದು ಹಾರೈಸಿದರು.

ಅದೇ ರೀತಿ ಕೇಂದ್ರ ಕಛೇರಿ ಅಧ್ಯಕ್ಷರಾದ ಹನಮಂತಪ್ಪ ಬಿಂಗಿಯವರು ಮಾತನಾಡಿ ಈಗಾಗಲೇ ಕೇಂದ್ರ ಕಛೇರಿಯು ಸ್ವಂತ: ಕಟ್ಟಡ ಹೊಂದಿ ಎರಡು ಶಾಖೆಗಳನ್ನು ಹೊಂದಿದ್ದು ಎರಡು ಶಾಖೆಗಳು ಉತ್ತಮ ಬೆಳವಣಿಗೆಯಲ್ಲಿ ಇದ್ದು ಇದಕ್ಕೆ ಅಲ್ಲಿನ ಶಾಖಾ ಸಲಹಾ ಸಮಿತಿಯ ಸದಸ್ಯರ ಶ್ರಮದ ಫಲವೇ ಕಾರಣ, ಎರಡು ಶಾಖೆಗಳು ಉತ್ತಮವಾಗಿ ಕಾರ್ಯನಿರ್ವಸುತ್ತಾ ಇವೆ ಅದೇ ರೀತಿ ಇಂದು ಉದ್ಘಾಟನೆಗೊಂಡ 4ನೇ ಶಾಖೆ ಹನಮನಾಳ ಶಾಖೆಯು ಉತ್ತಮವಾಗಿ ಬೆಳೆಯಲಿಕ್ಕೆ ಮತ್ತು ಗ್ರಾಹಕರಿಗೆ ಉತ್ತಮ ರೀತಿ ಸೇವೆ ಒದಗಿಸಲು ಹನಮನಾಳ ಸಲಹಾ ಸಮಿತಿಯು ಗಮನ ಹರಿಸಬೇಕೆಂದು ಹೇಳಿದರು.

ಅದೇ ರೀತಿ ಕೇಂದ್ರ ಕಛೇರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿ ಮಾತನಾಡಿ ಸಹಕಾರಿಯು ಪ್ರಸ್ತುತ ಆರ್ಥಿಕ ವರ್ಷದಲ್ಲಿ 17 ಕೋಟಿ ರೂ ಬಂಡವಾಳದೊಂದಿಗೆ ವ್ಯವಹರಿಸುತ್ತಿದೆ ಮತ್ತು ಸಹಕಾರಿಯು ಉತ್ತಮ ಲಾಭದಲಿದೆ ಎಂದು ಸಹಕಾರಿಯ ಆರ್ಥಿಕ ಸ್ಥಿತಿ-ಗತಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಕೆ.ಮಹೇಶ ಶ್ರೀ ಬಸವರಾಜ ಹಳ್ಳೂರ ಅದೇ ರೀತಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ನಾಗರಾಜ ಸೋಮಣ್ಣ ಹಕ್ಕಿ ನಿರ್ದೇಶಕರುಗಳಾದ ಶ್ರೀ ಡಾ॥ ಬಸವರಾಜ ಅಕ್ಕಿ, ಶ್ರೀ ಹಿರಗಪ್ಪ ಗಡೇಕಾರ ಶ್ರೀ ಭರಮಪ್ಪ ಬಿಂಗಿ, ಶ್ರೀ ಶಂಕ್ರಪ್ಪ ಬಾಗಲಿ,ಶ್ರೀ ಅಂದಾನಪ್ಪ ಬಿಂಗಿ ಹಾಗೂ ಶ್ರೀಮತಿ ಪಾರ್ವತಿ ಚೌಡಾಪೂರ, ಶ್ರೀಮತಿ ಗಂಗಮ್ಮ ಹಕ್ಕಿ ಮತ್ತು ಹೂಲಗೇರಾ ಶಾಖೆಯ ಸಲಹಾ ಸಮೀತಿ ಮತ್ತು ದೋಟಿಹಾಳ ಶಾಖೆಯ ಸಲಹಾ ಸಮೀತಿ ಹಾಗೂ ಶಾಖಾ ವ್ಯವಸ್ಥಾಪಕರಾದ ಅಮೀನಸಾಬ ಕಲಾದಗಿ, ಮುತ್ತಪ್ಪ ಬಿಂಗಿ, ಸಮೀರಅಹ್ಮದ ಕಲಾಲಬಂಡಿ ಸಿಬ್ಬಂದಿಯವರಾದ ಶ್ರೀಮತಿ ಮಲ್ಲಮ್ಮ ವಡಗೇರಿ, ಶ್ರೀಮತಿ ಶ್ರೀದೇವಿ ಅಂಗಡಿ, ಆನಂದ ಅಮ್ಮನಗದ್ದಿ,ದೊಡ್ಡಪ್ಪ ಕೀಲ್ಲೇದ, ದ್ರಾಕ್ಷಾಯಣಿ ವಡಗೇರಿ, ವೆಂಕಟೇಶ ಕೋಳ್ಳಿ, ಮಲ್ಲಿಕಾರ್ಜುನ ಹೊರಪೇಟಿ, ಎಲ್ಲ ಪಿಗ್ಮಿ ಸಂಗ್ರಹಕಾರರು ಮತ್ತು ಸಹಕಾರಿಯ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



**ತುಮಕೂರು :** ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ ಅಧ್ಯಕ್ಷರಾದ ಶ್ರೀ ಸುರೇಶ್ ರಾವ್ ರವರು, ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಚಿಕ್ಕಬಳ್ಳಾಪುರ :** ಶ್ರೀ ಭುವನೇಶ್ವರಿ ಸೌಹಾರ್ದ ಸಹಕಾರಿ ನಿ., ಪ್ರಶಾಂತನಗರ ಚಿಕ್ಕಬಳ್ಳಾಪುರ. ಸಹಕಾರಿಯ 2020-21ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯಿತು.

# ಡಿಜಿಟಲ್ ಡೀಟಾಕ್ಸ ಈ ಕ್ಷಣದ ತುರ್ತು ಅಗತ್ಯ

– ಶ್ರೀ ಧೀರೇಂದ್ರ ನಾಗರಹಳ್ಳಿ

Digital Detox ಎನ್ನುವುದು ’Digital Detoxificationನ ಹ್ರಸ್ವ ರೂಪ. ವಿಷಕಾರಿ ಅಂಶವನ್ನು ಹೊರ ಹಾಕುವುದನ್ನೆ ಇಂಗ್ಲೀಷನಲ್ಲಿ ‘Detoxification ಎನ್ನುವುದು. ಈ ವಿಷಕಾರಿ ಅಂಶವು ದೇಹದಲ್ಲಿ ಅಥವಾ ಮನಸ್ಸಿನಲ್ಲಿ ಎಲ್ಲಿಯಾದರೂ ಇರಬಹುದು. ಒಂದು ಸಣ್ಣ ಉದಾಹರಣೆಯಿಂದ ಇದನ್ನು ವಿವರಿಸಬಹುದು. ನಾವು ದಂತ ವೈದ್ಯರಲ್ಲಿ ದಂತ ಕುಳಿಯನ್ನು ತುಂಬಿಸುವುದಕ್ಕಾಗಿ ಹೋಗಿದ್ದೇವೆ ಅಂದುಕೊಳ್ಳೋಣ. ವೈದ್ಯರು ಎಲ್ಲವನ್ನೂ ಪರೀಕ್ಷೀಸಿದ ನಂತರ ದಂತ ಕುಳಿಯನ್ನು ತುಂಬಿಸುವುದಕ್ಕಾಗಿ ಸಿದ್ಧರಾಗುತ್ತಾರೆ. ಆದರೆ ದಂತ ಕುಳಿಯನ್ನು ತುಂಬಿಸುವುದಕ್ಕೂ ಮೊದಲು ಆ ಕುಳಿಯಲ್ಲಿರುವ ತುಂಬಿರುವ ಎಲ್ಲಾ ಪದಾರ್ಥಗಳನ್ನು ತೆಗೆದು ಹೊರ ಹಾಕುತ್ತಾರೆ.ಎಲ್ಲವನ್ನೂ ಹೊರಹಾಕಿದ ನಂತರವೇ ದಂತ ಕುಳಿಯನ್ನು ತುಂಬಿಸಲು ಆ ಸ್ಥಳವು ಸಿದ್ಧವಾಗಿರುತ್ತದೆ. ಅಂದರೆ ತಳದಲ್ಲಿ /ಆಳದಲ್ಲಿ ಕಸ–ಕಡ್ಡಿ–ವಿಷ–ಅನಿಷ್ಠ–ಅನಗತ್ಯ ವಿಷಯಗಳನ್ನು ತುಂಬಿಕೊಂಡರೆ ಮುಂದಿನ ಯಾವ ಚಿಕಿತ್ಸೆಯೂ ಪರಿಣಾಮಕಾರಿಯಾಗಿರುವುದಿಲ್ಲ. ಅದೇ ರೀತಿ Digital Detox ಎನ್ನುವುದು. ಅಂದರೆ ಈಗಾಗಲೆ ಈ Digital Toxic ಎನ್ನುವುದು ಮನಸ್ಸನ್ನು ಹೊಕ್ಕಿಯಾಗಿದೆ. ದಂತಕುಳಿಯನ್ನು ತುಂಬಿಸುವ ಉದಾಹರಣೆಯನ್ನು ತೆಗೆದುಕೊಂಡು ನೋಡುವುದಾದರೆ ತಳದಲ್ಲಿ / ಆಳದಲ್ಲಿ ಕಸ–ಕಡ್ಡಿ–ವಿಷ–ಅನಿಷ್ಠ–ಅನಗತ್ಯ ವಿಷಯಗಳನ್ನು ತೆಗೆದು ಹಾಕಿದ ಮೇಲೆಯೇ ಆ ಸ್ಥಳವು ಮುಂದಿನ ಚಿಕಿತ್ಸೆ ಅಂದರೆ ದಂತಕುಳಿಯನ್ನು ತುಂಬಿಸುವುದಕ್ಕೆ ಅರ್ಹವಾಗುತ್ತದೆ. ಅಂದರೆ ನಾವು Detoxification ಆಗದ ಹೊರತು ಬೇಕಾದದ್ದು ನಮ್ಮ ಮನಸ್ಸಿನ ಆಳಕ್ಕಿಳಿಯುವುದಿಲ್ಲ. ಅಷ್ಟೇ ಅಲ್ಲ ಮನಸ್ಸಿಗೆ ಸಂಬಂಧಿಸಿದ ಸಣ್ಣ ಮತ್ತು ದೊಡ್ಡ ಪ್ರಮಾಣದ ಖಾಲಿಗಳ ಬಲೆಯಲ್ಲಿ ಬೀಳಬಹುದು.

**ಹೌದು ! ನಮಗೇಕೆ ಬೇಕು ಈ** Digital Detox ?

– ಇಲೆಕ್ಟ್ರಾನಿಕ್ ಗ್ಯಾಡ್ಜೆಟ್ಸಗಳ ಉಪಯೋಗ ನಮಗೆ ಗೀಳಾಗಿದ್ದರೆ
– ಪದೇ ಪದೇ ಇಲೆಕ್ಟ್ರಾನಿಕ್ ಗ್ಯಾಡ್ಜೆಟ್ಟಗಳ ಬಳಸಲೇ ಬೇಕು ಎನ್ನುವ ಸೆಳೆತ ಉಂಟಾಗುತಿದ್ದರೆ
– ಪದೇ ಪದೇ ಸಮಾಜಿಕ ಜಾಲತಾಣಗಳಲ್ಲಿ ಬಳಸುವಂತೆ ಮನಸ್ಸು ಎಳೆಯುತಿದ್ದರೆ.

2021 ರ ಫೆಬ್ರವರಿಯಲ್ಲಿ ಆಗಿನ ಕೇಂದ್ರದ Electronics and Information Technology ಮಂತ್ರಿಯಾಗಿದ್ದ ರವಿ ಶಂಕರ್ ಅವರು ಹೊಸ ಸಮಾಜಿಕ ಜಾಲತಾಣಗಳ ನೀತಿ–ನಿಯಮಗಳನ್ನು ಘೋಷಿಸುವಾಗ ಕೆಲವೊಂದು ಅಂಕಿ–ಅಂಶಿಗಳನ್ನು ಬಿಡುಗಡೆ ಮಾಡಿದರು.ಅದರ ಪ್ರಕಾರ

– WhatsApp ಬಳಕೆದಾರರ ಸಂಖ್ಯೆ ಸುಮಾರು 53 ಕೋಟಿಗೂ ಅಧಿಕವಾಗಿದೆ
– YouTube ಬಳಕೆದಾರರ ಸಂಖ್ಯೆ ಸುಮಾರು 44.8 ಕೋಟಿಗೂ ಅಧಿಕವಾಗಿದೆ
– Facebook ಬಳಕೆದಾರರ ಸಂಖ್ಯೆ ಸುಮಾರು 41 ಕೋಟಿಗೂ ಅಧಿಕವಾಗಿದೆ
– Instagram ಬಳಕೆದಾರರ ಸಂಖ್ಯೆ ಸುಮಾರು 21 ಕೋಟಿಗೂ ಅಧಿಕವಾಗಿದೆ
– Twitter ಬಳಕೆದಾರರ ಸಂಖ್ಯೆ ಸುಮಾರು 1.5 ಕೋಟಿಯಾಗಿದೆ.

ಈ ಎಲ್ಲಾ ಅಂಕಿ ಅಂಶಿಗಳನ್ನು ಓದುವಾಗ ಸ್ವಲ್ಪ ಶುಷ್ಕವನ್ನಿಸಬಹುದು ಮತ್ತು ಓದಿನ ಓಘಕ್ಕೆ ಅಡೆತಡೆ ತರಬಹುದು.ಆದರೆ ಈ ಅಂಕಿ ಅಂಶಗಳನ್ನು ಅರ್ಥ ಮಾಡಿಕೊಳ್ಳದೆ ಹೋದರೆ 'Digital Detox' ನ ಅಗತ್ಯತೆ ಅರ್ಥವಾಗುವುದಿಲ್ಲ.

ಈ ಎಲ್ಲಾ ಸಮಾಜಿಕ ಜಾಲತಾಣಗಳು ನಮಗೆ ಹವ್ಯಾಸವೆಂದೆ ಶುರುವಾದದ್ದು. ಅಂದರೆ ಇವುಗಳಿಂದ ನಮಗೆ ಜೀವನ ಕಟ್ಟುವಲ್ಲಿ / ಕಟ್ಟಿಕೊಳ್ಳುವುದರಲ್ಲಿ /ಜೀವನವನ್ನು ನಡೆಸಿಕೊಂಡು ಹೋಗುವಲ್ಲಿ ಸಾಧ್ಯವೆ ಎಂದರೆ ?ನಮಗೆ ದೊರೆಯ ಬಹುದಾದ ಉತ್ತರ ಬಹುಶಃ ಇಲ್ಲ ಎನ್ನುವುದೆ ಆಗಿದೆ. (ಕೆಲವೊಂದು ಉದಾಹರಣೆಗಳನ್ನು ಹೊರತು ಪಡಿಸಿ) ನೆನಪಿಡಿ ಹವ್ಯಾಸಗಳಿಗೆ ನಾವು ಸಮಯಗಳನ್ನು ಕೊಡುತ್ತೇವೆ. ಆದರೆ ಇದೆ ಹವ್ಯಾಸಗಳು ಒಮ್ಮೆ ಗೀಳು ಗಳಾಗಿ ಪರಿವರ್ತನೆವಾದವೆಂದುಕೊಂಡರೆ ಗೀಳುಗಳು ನಮಗೆ ನಮ್ಮ ಅಮೂಲ್ಯ ಸಮಯಕ್ಕೆ ಪದೇ ಪದೇ ಬೇಡಿಕೆ ಇಡುವುದು ಅಲ್ಲದೆ ಒಂದು ಹಂತದಲ್ಲಿ ನಮ್ಮ ಸಮಯವನ್ನು ಕಿತ್ತುಕೊಂಡು ಬಿಡುತ್ತವೆ.

ಅಂದರೆ ಅಪಾಯದ ಅರಿವಿಲ್ಲದೆಯೆ ನಾವು ಸ್ಮಾರ್ಟ ಫೋನಗಳ ಬಳಕೆ ಮತ್ತು ದಾಸ್ಯತ್ವಕ್ಕೆ ಒಳಗಾಗುತಿದ್ದೇವೆ. ಈ ಸಮಾಜಿಕ ಜಾಲತಾಣಗಳ ಬಳಕೆ ಯಾವುದಾದರೂ ಆಗಿರಬಹುದು ಬೇಕಿದ್ದು ಅಥವ ಬೇಡದ್ದೂ. ಈ ಎರಡನ್ನೂ ನಾವು ನಮ್ಮ ಜೋಳಿಗೆಗೆ ತುಂಬಿಕೊಳ್ಳುತಿದ್ದೇವೆ. ನಮ್ಮ ಜೋಳಿಗೆ ಏನು ದೊಡ್ಡದಾಗುತ್ತಿಲ್ಲ ಆದರೆ ನಾವು ತುಂಬಿಸುತ್ತಿರುವ ಮಾಹಿತಿಯ ಪ್ರಮಾಣ ಮಾತ್ರ ಏರುತ್ತಲೆ ಇದೆ. ಇದರಿಂದ ನೇರ ಪರಿಣಾಮವೆನ್ನುವಂತೆ ನಮಗೆ ಅವಶ್ಯಕತೆ ಮತ್ತು ಸಂಪೂರ್ಣ ಅವಶ್ಯಕತೆ ಎನ್ನುವುದನ್ನು ನಾವು ಜೋಳಿಗೆ ತುಂಬಿಸಲಾರದೆ ಹೋದೆವು.

ಈ ಬರಹದ ಆರಂಭದಲ್ಲಿಯೆ ದಂತಕುಳಿಯನ್ನು ಮುಚ್ಚಲು ವೈದ್ಯರು ಒಂದು ನಿಯಮವನ್ನು ಅನುಸರಿಸಿದಂತೆಯೆ ನಾವು 'Digital Detoxification' ಆಗದ ಹೊರತು ಯಾವ ವಿಷಯಗಳು ತಲೆಗೆ ಇಳಿಯುದಿಲ್ಲ ಮತ್ತು ಒಂದು ಆರೋಗ್ಯಕರವಾದ ಮನಸ್ಥಿತಿ ಒದಗುವುದಿಲ್ಲ.

43ನೇ ಪುಟಕ್ಕೆ.....

# ಸೌಹಾರ್ದ ಸಹಕಾರ ಸಂಘಗಳ ಕಾಯಿದೆಯಡಿ ಸೌಹಾರ್ದ ಸಹಕಾರಿಗಳ ಉಪನಿಯಮಗಳ ತಿದ್ದುಪಡಿ



– ಶ್ರೀ ಸಿ.ಎನ್ ಪರಶಿವಮೂರ್ತಿ

ಯಾವುದೇ ಒಂದು ಸೌಹಾರ್ದ ಸಹಕಾರಿ ಸಂಘದ ಅಥವಾ ಸಹಕಾರ ಸಂಘಗಳ ಉಪವಿಧಿ ಎಂದರೆ ಅದು ಸದರಿ ಸಂಘದ ಸಂವಿದಾನ ವಿದ್ದಂತೆ, ಸಂಘದ ಪ್ರಾರಂಭದಲ್ಲಿ ಸಂಘದ ಪ್ರವರ್ತಕರೆಲ್ಲ ಸೇರಿ ಒಮ್ಮತದಿಂದ ಸಿದ್ಧಪಡಿಸಿರುವ ಉಪವಿಧಿಗಳು ಸೌಹಾರ್ದ ಸಹಕಾರಿ ಕಾಯ್ದೆ ಹಾಗೂ ನಿಯಮಾನುಸಾರ ಸಿದ್ಧಪಡಿಸಿದ ಉಪವಿಧಿಗಳು, ಸಂಘದ ಪ್ರತಿಯೊಂದು ವ್ಯವಹಾರವು ಈ ಉಪವಿಧಿಗಳ ವ್ಯಾಪ್ತಿಯಲ್ಲಿ ಜರುಗಬೇಕು. ಈ ಉಪವಿಧಿಗಳು ತಿದ್ದುಪಡಿ ಅಂದರೆ ಹಾಲಿ ಇವರು ಅವಕಾಶಗಳ ಹೆಚ್ಚಿನವರನ್ನು ಸೇರಿಸುವುದು, ಇರುವ ಅವಕಾಶವನ್ನು ಕೈಬಿಡುವುದು ಮತ್ತು ಪುನರಚನೆ ಮಾಡುವುದು ಎಂದು ಅರ್ಥೈಸಬಹುದಾಗಿದೆ.

ಒಂದು ಸಹಕಾರ ಸಂಸ್ಥೆಯ ಉಪನಿಯಮಗಳನ್ನು ಆ ಸಂಸ್ಥೆಯ ನೋಂದಾವಣೆ ಸಂದರ್ಭದಲ್ಲಿ ನೋಂದಾಯಿಸಲಾಗುತ್ತದೆ. ಈ ಉಪನಿಯಮಗಳನ್ನು ಕಲಂ.11 ರಲ್ಲಿ ಸಾಮಾನ್ಯ/ವಿಶೇಷ ಮಹಾಸಭೆಯಲ್ಲಿ 2/3 ಅಂಶದ ಸದಸ್ಯರ ಬಹುಮತದಿಂದ ಒಪ್ಪಿಗೆ ಪಡೆದು 60 ದಿವಸದೊಳಗಾಗಿ ಸಂಬಂಧಪಟ್ಟ ನಿಬಂಧಕರಿಗೆ ಸಲ್ಲಿಸಬೇಕು. ಉಪನಿಯಮಗಳ ತಿದ್ದುಪಡಿಗೆ ಸಂಬಂಧಪಟ್ಟಂತೆ ಕಾಯಿದೆ ಕಲಂ.12 ಈ ಕೆಳಕಂಡಂತೆ ಅವಕಾಶ ಕಲ್ಪಿಸಿದೆ. ಒಂದು ಸಹಕಾರ ಸಂಘವು, ಕಾಲ ಕಾಲಕ್ಕೆ ಈ ಕಾಯ್ದೆ ಮತ್ತು ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ ತನ್ನ ಉಪನಿಯಮಗಳನ್ನು ತಿದ್ದುಪಡಿ ಮಾಡಬಹುದು.

ಉಪನಿಯಮಗಳ ಮತ್ತು ತಿದ್ದುಪಡಿಗಳನ್ನು ನೋಂದಾವಣೆ ಮಾಡುವಾಗ ಗಮನಿಸಬೇಕಾದ ಅಂಶಗಳೆಂದರೆ, ಕಾಯಿದೆ, ನಿಯಮ ಮತ್ತು ನಿಯಮ 10ರಲ್ಲಿ ನಿಗದಿ ಪಡಿಸಿದ ವಿಷಯಗಳಿಗೆ ಸಂಬಂಧಪಟ್ಟಂತೆ ಅಳವಡಿಸಿಕೊಳ್ಳಲಾಗಿದೆಯೇ ಎಂಬುದು ಮೊದಲನೇ ಕ್ರಮ. ಎರಡನೆಯದಾಗಿ ಈ ಮೇಲ್ಕಂಡ ಅವಕಾಶಗಳಿಗೆ ಹೊರತಾಗಿ ಕಾನೂನು/ನಿಯಮಕ್ಕೆ ವಿರುದ್ದ ಅಲ್ಲದೆ ಹೆಚ್ಚುವರಿ ವಿಷಯಗಳು/ಅವಕಾಶಗಳನ್ನು ಸೇರಿಸಿಕೊಳ್ಳಲು ಸಹಕಾರ ಸಂಸ್ಥೆಗಳಿಗೆ ಅವಕಾಶ ಇದೆ ಎಂಬುದನ್ನು ಇಲಾಖೆ ಗಮನಿಸಬೇಕು.

**ಸೌಹಾರ್ದ ಕಾಯ್ದೆ ಕಾಲಂ 10 :**

**ಉಪವಿಧಿಗಳ ತಿದ್ದುಪಡಿ :**

(1)"ಒಂದು ಸಹಕಾರಿಯು ಅದರ ಉಪವಿಧಿಗಳ ಯಾವುದೇ ಉಪಬಂಧವನ್ನು, ಸಾಮಾನ್ಯ ಸಭೆ ಅಥವಾ ಪ್ರಾತಿನಿಧಿಕ ಸಾಮಾನ್ಯ ಸಭೆಯಲ್ಲಿ ಮತನೀಡುವ ಹಕ್ಕುಳ್ಳ ಸದಸ್ಯರಲ್ಲಿ ಹಾಜರಿದ್ದು ಮತ ನೀಡಿದ ಸದಸ್ಯರ ಮೂರನೇ ಎರಡರಷ್ಟು ಸದಸ್ಯರು ಅಂಗೀಕರಿಸಿದ ನಿರ್ಣಯದ ಮೂಲಕ ತಿದ್ದುಪಡಿ ಮಾಡಬಹುದು :

ಪರಂತು ಸಾಮಾನ್ಯ ನಿಕಾಯ ಅಥವಾ ಸಂದರ್ಭಾನುಸಾರ ಪ್ರಾತಿನಿಧಿಕ ಸಾಮಾನ್ಯ ನಿಕಾಯದ ಪ್ರತಿಯೊಬ್ಬ ಸದಸ್ಯನಿಗೂ ಇಪ್ಪತ್ತು ಪೂರ್ಣ ದಿನಗಳಿಗೆ ಕಡಿಮೆಯಿಲ್ಲದಂತೆ ಸಭೆಯ ನೋಟೀಸನ್ನು ಪ್ರಸ್ತಾವಿತ ತಿದ್ದುಪಡಿಯ ಪ್ರತಿಯೊಂದಿಗೆ ನೀಡದ ಹೊರತು ಮತ್ತು ಸಭೆಯ ದಿನಾಂಕದ ನಿಕಟಪೂರ್ವದ ಇಪ್ಪತ್ತುದಿನಗಳ ಅವಧಿಗಿಂತ ಕಡಿಮೆಯಿಲ್ಲದ ಅವಧಿಯವರೆಗೆ ಅಂಥ ನೋಟೀಸನ್ನು ಮತ್ತು ಪ್ರಸ್ತಾವಿತ ತಿದ್ದುಪಡಿಯನ್ನು ಸಹಕಾರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸದ ಹೊರತು ಅಂಥ ಯಾವುದೇ ನಿರ್ಣಯವನ್ನು ಅಂಗೀಕರಿಸತಕ್ಕದ್ದಲ್ಲ.

(2) ಸಹಕಾರಿಯು ತನ್ನ ಉಪವಿಧಿಯನ್ನು ತಿದ್ದುಪಡಿ ಮಾಡಿದ ಸಂದರ್ಭದಲ್ಲಿ, ತಿದ್ದುಪಡಿಯ ನೋಂದಣಿಗಾಗಿ (3)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿವರಗಳೊಂದಿಗೆ ನಿರ್ಣಯದ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ರಿಜಿಸ್ಟ್ರಾರನಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸತಕ್ಕದ್ದು.

(3) (2)ನೇ ಉಪ–ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಕಳುಹಿಸಲಾದ ಪ್ರತಿಯೊಂದು ಅರ್ಜಿಯನ್ನು ಅಧ್ಯಕ್ಷ ಅಥವಾ ಸಭಾಪತಿಯು ಸಹಿ ಮಾಡಿರತಕ್ಕದ್ದು ಮತ್ತು ತಿದ್ದುಪಡಿಯನ್ನು ಅಳವಡಿಸಿಕೊಳ್ಳುವ ನಿರ್ಣಯದ ಮೂರು ಪ್ರತಿಗಳೊಂದಿಗೆ ಈ ಮುಂದಿನ ವಿವರಗಳು ಅರ್ಜಿಯೊಂದಿಗಿರತಕ್ಕದ್ದು, ಎಂದರೆ,–

(ಎ)ತಿದ್ದುಪಡಿಯನ್ನು ಅನುಮೋದಿಸಿದಂಥ ಸಭೆ ನಡೆದ ದಿನಾಂಕ;

(ಬಿ)ಅಂಥ ಸಭೆಯ ದಿನಾಂಕದಂದು ಸಹಕಾರಿಯ ಪಟ್ಟಿಯಲ್ಲಿರುವ ಮತ ನೀಡಲು ಅರ್ಹರಾಗಿದ್ದ ಸದಸ್ಯರ ಒಟ್ಟು ಸಂಖ್ಯೆ, ಸಭೆಯಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ ಮತ್ತು ನಿರ್ಣಯಕ್ಕೆ ಮತ ನೀಡಿದ ಅರ್ಹ ಸದಸ್ಯರ ಸಂಖ್ಯೆ.

2[(ಸಿ) ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ಪ್ರಸ್ತಾವಿತ ತಿದ್ದುಪಡಿಗಳು 10ನೇ ಪ್ರಕರಣದ (3)ನೇ ಉಪ–ಪ್ರಕರಣಕ್ಕೆ ಅನುಸಾರವಾಗಿವೆ ಎಂದು ತಿಳಿಸಿ ಅಧ್ಯಕ್ಷ ಅಥವಾ ಸಭಾಪತಿಯು ಸಹಿ ಮಾಡಿದ ಒಂದು ಪ್ರಮಾಣ ಪತ್ರ.]

3[(ಡಿ) ನಿಯಮಿಸಲಾದಂತೆ ನಿಗದಿಪಡಿಸುವ ಶುಲ್ಕವನ್ನು ರಿಜಿಸ್ಟ್ರಾರನ

ಹೆಸರಿನಲ್ಲಿ ಖಜಾನೆ ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸಿರುವ ದಾಖಲೆ.]

(4) ಪ್ರಸ್ತಾವಿತ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗನುಸಾರವಾಗಿರುವಲ್ಲಿ, ರಿಜಿಸ್ಟ್ರಾರನು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಾಯಿಸುವುದು.

(5) ರಿಜಿಸ್ಟ್ರಾರನು, ನೋಂದಣಿಯಾದ ದಿನಾಂಕದಿಂದ ಹದಿನೈದು ದಿನಗಳೊಳಗೆ ಹಾಗೆ ನೋಂದಾಯಿಸಲಾದ ತಿದ್ದುಪಡಿಯ ಪ್ರತಿಯನ್ನು ತಾನು ಸಹಿ ಮಾಡಿ ಮೊಹರು ಹಾಕಿದ ಪ್ರಮಾಣಪತ್ರದೊಂದಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಸಹಕಾರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವು ತಿದ್ದುಪಡಿಯು ವಿಧ್ಯುಕ್ತವಾಗಿ ನೋಂದಣಿಯಾಗಿದೆ ಎಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು. ಅಂಥ ಪ್ರಮಾಣಪತ್ರದ ಮತ್ತು ನೋಂದಾಯಿತ ತಿದ್ದುಪಡಿಯ ಒಂದು ಪ್ರತಿಯನ್ನು ಸಂಯುಕ್ತ ಸಹಕಾರಿಗೆ ಕಳುಹಿಸುವುದು.

(6) ಪ್ರಸ್ತಾವಿತ ತಿದ್ದುಪಡಿಯು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗನುಸಾರವಾಗಿಲ್ಲದಿರುವಲ್ಲಿ, ರಿಜಿಸ್ಟ್ರಾರನು ಅರ್ಜಿಯನ್ನು ಸ್ವೀಕರಿಸಿದ ತೊಂಬತ್ತು ದಿನಗಳೊಳಗೆ ಪ್ರಸ್ತಾವಿತ ತಿದ್ದುಪಡಿಯನ್ನು ನೋಂದಣಿ ಮಾಡಲು ನಿರಾಕರಿಸತಕ್ಕದ್ದು. ಇದಕ್ಕೆ ತಪ್ಪಿದರೆ ತಿದ್ದುಪಡಿಯನ್ನು ನೋಂದಾಯಿಸಲಾಗಿದೆ ಎಂದು ಭಾವಿಸವುದು

ಪರಂತು, ಅಂಥ ತಿದ್ದುಪಡಿಯ ನೋಂದಣಿಯನ್ನು ನಿರಾಕರಿಸುವ ಯಾವುದೇ ಆದೇಶವನ್ನು ಸಹಕಾರಿಗೆ ತನ್ನ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡದ ಹೊರತು ಹೊರಡಿಸತಕ್ಕದ್ದಲ್ಲ.

(7) ರಿಜಿಸ್ಟ್ರಾರನು (6)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಿದ ನಿರಾಕರಣೆಯ ಆದೇಶವನ್ನು, ನಿರಾಕರಣೆಯ ಕಾರಣಗಳೊಂದಿಗೆ ಅದನ್ನು ಹೊರಡಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗೆ ಸಹಕಾರಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸುವುದು.

(8) (6)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಆದೇಶದ ವಿರುದ್ಧ ಅಪೀಲನ್ನು ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗೆ,-

(ಎ) ಆದೇಶವನ್ನು ರಿಜಿಸ್ಟ್ರಾರನು ಹೊರಡಿಸಿರುವಲ್ಲಿ, ಸರ್ಕಾರಕ್ಕೆ; ಅಥವಾ

(ಬಿ) ಆದೇಶವನ್ನು ಇತರ ಯಾರೇ ಅಧಿಕಾರಿಯು ಹೊರಡಿಸಿರುವಲ್ಲಿ, ಆ ಅಧಿಕಾರಿಯ ನಿಕಟ ಮೇಲಧಿಕಾರಿಗೆ, ಸಲ್ಲಿಸಬಹುದು;

(9) ಉಪವಿಧಿಗಳ ತಿದ್ದುಪಡಿಯು ನೋಂದಣಿಯ ದಿನಾಂಕದಿಂದ ಅಥವಾ ನೋಂದಣಿಯಾಗಿದೆ ಎಂದು ಭಾವಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ."

**"ಸೌಹಾರ್ದ ನಿಯಮ" :**

"3ಎ. ಉಪವಿಧಿ ತಿದ್ದುಪಡಿಗೆ ಶುಲ್ಕ – ಪ್ರಕರಣ 11ರ ಪ್ರಕಾರ ಉಪವಿಧಿ ತಿದ್ದುಪಡಿಗೆ ಪ್ರಸ್ತಾವೆ ಸಲ್ಲಿಸುವ ಸಂದರ್ಭದಲ್ಲಿ ಕೆಳಗೆ ನಿರ್ದಿಷ್ಟಪಡಿಸಿರುವ ಶುಲ್ಕವನ್ನು ರಿಜಿಸ್ಟ್ರಾರನ ಹೆಸರಿಗೆ ಪಾವತಿ ಮಾಡಿದ ಬಗ್ಗೆ ಖಜಾನೆಯ ಚಲನ್ ಅಥವಾ ಡಿಮ್ಯಾಂಡ್ ಡ್ರಾಫ್ಟ್‌ನ್ನು ಲಗತ್ತಿಸತಕ್ಕದ್ದು, ಎಂದರೆ

| ಸಹಕಾರಿಯ ವ್ಯಾಪ್ತಿ ಸಹಕಾರಿಯ ಕಾರ್ಯಾಚರಣೆಯ ಕ್ಷೇತ್ರವು | ಪಾವತಿಸಬೇಕಾದ ಮೊತ್ತ |
|---|---|
| 1) ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿ | ರೂ.400-00 |
| 2) ತಾಲ್ಲೂಕು ಮತ್ತು ತಾಲ್ಲೂಕಿಗಿಂತ ಹೆಚ್ಚಾಗಿ ಆದರೆ ಜಿಲ್ಲೆಗಿಂತ ಕಡಿಮೆ ವ್ಯಾಪ್ತಿ | ರೂ.1000-00 |
| 3) ಜಿಲ್ಲೆ ಮತ್ತು ಜಿಲ್ಲೆಗಿಂತ ಹೆಚ್ಚಾದ ವ್ಯಾಪ್ತಿ | ರೂ.2000-00" |

.....41ನೇ ಪುಟದಿಂದ

**ಖಂಡಿತವಾಗಿಯೂ ನಾವು Digital Detox ಗೆ ಒಳಗಾಗಲೆ ಬೇಕು!!**

ನಾವು 'Digital Detox' ಗೆ ಒಳಗಾಗ ಬೇಕು ಅನ್ನಿಸಿದಾಗ. ತಜ್ಞ ಮನೋವೈದ್ಯರನ್ನು ಸಂಪರ್ಕಿಸುವುದು ಮೊಟ್ಟಮೊದಲ ಕೆಲಸವಾಗಬೇಕು ಮತ್ತು ಅದರ ಜೊತೆಯಲ್ಲಿ ಈ ಕೆಳಗಿನ ಕೆಲವು ಸಣ್ಣ-ಪುಟ್ಟ ಅಂಶಗಳನ್ನು ಅಳವಡಿಸಿಕೊಂಡರೆ ನಮಗೆ "Digital Detoxification' ನಲ್ಲಿ ಉಪಯೋಗವಾಗಬಹುದು:

- ನಾವು ಯಾವುದರಿಂದ Detoxification ಆಗ ಬೇಕಾಗಿದೆ ಎನ್ನುವುದನ್ನು ಗುರುತು ಮಾಡಿಕೊಳ್ಳಿ,ನಾವು ಸಾಕಷ್ಟು ಸಮಾಜಿಕ ಜಾಲತಾಣಗಳನ್ನು ಬಳಸುತ್ತಿರಬಹುದು,ಆದರೆ ಅದರಲ್ಲೆ ಅತೀ ಹೆಚ್ಚು ಬಳಕೆ ಮಾಡುತ್ತಿರುವ ಮೂರು ಸಾಮಾಜಿಕ ಜಾಲತಾಣಗಳನ್ನು ಗುರುತಿಸಿಕೊಳ್ಳಿ.
- ಗುರುತು ಹಾಕಿಕೊಂಡು ಸಾಮಾಜಿಕ ಜಾಲತಾಣಗಳನ್ನು ಅದಷ್ಟು ಮಟ್ಟಿಗೆ ದೂರವಿರಿಸಿ ಮತ್ತು ಆ ಸಮಯಗಳನ್ನು ಖಾಲಿ ಬಿಡದೆ ಬೇರೆ ಏನನ್ನಾದರೂ ಅಳವಡಿಸಿಕೊಂಡು ಭರ್ತಿ ಮಾಡಿ
- ನಾವು ಹಾಕಿಕೊಂಡ ಬದ್ಧತೆಗಳಿಗೆ ಬದ್ಧರಾಗಿರೋಣ ಎನ್ನುವುದನ್ನು ಪದೇ ಪದೇ ಹೇಳಿಕೊಳ್ಳೋಣ
- ಪುಸ್ತಕಗಳನ್ನು ಓದುವ ಹವ್ಯಾಸ ಬೆಳಸಿಕೊಳ್ಳೋಣ.ನೆನಪಿಡಿ ಅದು ಭೌತಿಕ ಪುಸ್ತಕಗಳು Digital ಪುಸ್ತಕಗಳಲ್ಲ.

ಮನುಷ್ಯನ ಸಂಕಲ್ಪ ಶಕ್ತಿಗೆ ದೊಡ್ಡದೊಂದು ತಾಕತ್ತಿದೆ ಹಾಗಾಗಿ Digital Detoxification ಸಂಕಲ್ಪ ಮಾಡಿಕೊಳ್ಳೋಣ.

# ಯುವ ಭಾರತದ 'ವಿವೇಕ' ಆನಂದ

– ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಜ್ಞಾನಕ್ಕಾಗಿ ಅನ್ನಕ್ಕಾಗಿ ಎಂದು ಭಿಕ್ಷೆ ಬೇಡ
ನಿನ್ನನ್ನು ನೀ ನಂಬು ಗೌರವಿಸು, ಸ್ವಾಭಿಮಾನಿಯಾಗಿ ಬದುಕು
ಆಗ ನಿನ್ನ ಬದುಕು ಸಾರ್ಥಕತೆ ತಲುಪುವುದು.
– ಸ್ವಾಮಿ ವಿವೇಕಾನಂದ

ಹಿಂದೂ ಧರ್ಮದ ನವೋನನ್ಯತೆಯನ್ನು ಜಗದುದ್ದಗಲಕ್ಕೆ ಪಸರಿಸಿದ, ಭಾರತ ಉಪಖಂಡದ ಯುವಚೈತನ್ಯವನ್ನೂ, ಆಧ್ಯಾತ್ಮಿಕ ಶಕ್ತಿಯನ್ನೂ ಮುಗಿಲೆತ್ತರಕ್ಕೆ ಎತ್ತರಿಸಿದ ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ 159ನೇ ಜನ್ಮ ದಿನ. ಇದೇ ಹಿನ್ನೆಲೆಯಲ್ಲಿ ಜನವರಿ 12ನ್ನು ರಾಷ್ಟ್ರೀಯ ಯುವ ದಿನವಾಗಿ ಆಚರಿಸಲಾಗುತ್ತದೆ. ಯುವ ಶಕ್ತಿ, ಸಾಮರ್ಥ್ಯದ ಬಗ್ಗೆ ಅರಿವು ಹೊಂದಿದ್ದ ವಿವೇಕಾನಂದರು, ತಮ್ಮೆಲ್ಲ ಬೋಧನೆಗಳಲ್ಲಿ ಯುವಜನತೆ ಮತ್ತು ದೇಶವನ್ನು ಕೇಂದ್ರೀಕರಿಸುತ್ತಿದ್ದರು.



ವಿವೇಕಾನಂದರ ಬಾಲ್ಯದ ಹೆಸರು ನರೇಂದ್ರನಾಥ ದತ್ತ, ಅವರು ಜನಿಸಿದ್ದು 12 ಜನವರಿ, 1863. ಕಲ್ಕತ್ತಾದ ಬಂಗಾಳಿ ಕುಟುಂಬಕ್ಕೆ ಸೇರಿದವರು. ತಂದೆ ವಿಶ್ವನಾಥ ದತ್ತ ಇವರು ಕಲ್ಕತ್ತದ ಉಚ್ಚನ್ಯಾಯಾಲಯದಲ್ಲಿ ಅಟಾರ್ನಿಯಾಗಿ ಸೇವೆ ಸಲ್ಲಿಸುತ್ತಿದ್ದರು. ತಾಯಿ ಭುವನೇಶ್ವರಿ ದೇವಿ. ಅಜ್ಜ ದುರ್ಗಾ ಚರಣ್ ದತ್ತ, ಇವರು ಸಂಸ್ಕೃತ ಮತ್ತು ಪರ್ಷಿಯನ್ ಭಾಷೆಯ ಸಾಹಿತಿಯಾಗಿದ್ದರು.

1871 ರಲ್ಲಿ ಎಂಟನೆಯ ವಯಸ್ಸಿನಲ್ಲಿ, ವಿವೇಕಾನಂದರು ಈಶ್ವರ ಚಂದ್ರ ವಿದ್ಯಾಸಾಗರ ಸಂಸ್ಥೆಯಲ್ಲಿ ಮತ್ತು ನಂತರ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದರು. ಅವರು ಪಾಶ್ಚಾತ್ಯ ತತ್ವಶಾಸ್ತ್ರ, ಕ್ರಿಶ್ಚಿಯನ್ ಧರ್ಮ ಮತ್ತು ವಿಜ್ಞಾನಕ್ಕೆ ಅರಿತವರು. ಅವರು ಸಂಗೀತ ಮತ್ತು ವಾದ್ಯ ಎರಡರಲ್ಲೂ ಸಂಗೀತದಲ್ಲಿ ಆಸಕ್ತಿ ಹೊಂದಿದ್ದರು. ಅವರು ಕ್ರೀಡೆ, ಜಿಮ್ನಾಸ್ಟಿಕ್ಸ್, ಕುಸ್ತಿ ಸಕ್ರಿಯರಾಗಿದ್ದರು. ಅವರು ಓದುವುದನ್ನು ಇಷ್ಟಪಡುತ್ತಿದ್ದ ಮತ್ತು ಕಾಲೇಜಿನಿಂದ ಪದವಿ ಮುಗಿಸುವವರೆಗೂ ಅವರು ವಿವಿಧ ವಿಷಯಗಳ ಬಗ್ಗೆ ಅಪಾರ ಜ್ಞಾನವನ್ನು ಪಡೆದಿದ್ದರು. ಒಂದು ಕಡೆ ಅವರು ಭಗವದ್ಗೀತೆ ಮತ್ತು ಉಪನಿಷತ್‌ಗಳನ್ನು ಸಣ್ಣ ವಯಸ್ಸಿನಲ್ಲಿ ಅರಿತವರು. 4 ಜುಲೈ, 1902 ರಂದು, ಅವರು ಧ್ಯಾನ ಮಾಡುವಾಗ ಮೃತರಾದರು.

ಆಧುನಿಕ ಭಾರತ ಕಂಡ ಅಪ್ರತಿಮ ದೇಶಭಕ್ತ ಇವರು. ಯುವಜನತೆಗೆ ಸ್ಫೂರ್ತಿಯ ಚಿಲುಮೆಯಂತಿದ್ದ ವಿವೇಕಾನಂದರ ಚಿಂತನೆಗಳು, ಸಂದೇಶಗಳು, ಜಾಗೃತಿ ಭಾಷಣಗಳು ಎಂದೆಂದೂ ಪ್ರಸ್ತುತ. ಏಕೆಂದರೆ ಇವರ ಜೀವನ ಸಂದೇಶಗಳಲ್ಲಿ ವಿಶೇಷವಾಗಿ ಯುವಜನತೆಯಲ್ಲಿ ಪ್ರಭಾವಬೀರಿ, ಬಾಳು ಬೆಳಗಿಸುವ ಅಂಶಗಳಿರುತ್ತಿದ್ದವು. ಈ ಕಾರಣಕ್ಕಾಗಿಯೇ ಸ್ವಾಮಿ ವಿವೇಕಾನಂದರು ಯುವಜನರ ಆದರ್ಶ ಎಂದು ಇತಿಹಾಸದಲ್ಲಿ ಗುರುತಿಸುವುದು ' ನೀವು ನಿಮ್ಮಲ್ಲಿ ನಂಬಿಕೆ ಬೆಳೆಸಿಕೊಳ್ಳದ ಹೊರತು ದೇವರಲ್ಲಿ ನಂಬಿಕೆ ಬೆಳೆಸಿಕೊಳ್ಳಲು ಸಾಧ್ಯವಿಲ್ಲ'. ಈ ಬಗೆಯ ದಿವ್ಯ ವಾಣಿಯನ್ನು ಸಮಾಜಕ್ಕೆ ನೀಡಿದ ಹಿರಿಮೆ ಇವರದು. ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರ ಜ್ಞಾನದ ಬೆಳಕಿನಲ್ಲಿ ಬೆಳೆದ ವಿವೇಕಾನಂದರು ನಂತರ ಯುವ ಜನರ ಪಾಲಿನ ಕಣ್ಮಣಿಯಾಗಿ ರೂಪುಗೊಂಡರು. ಇವರು ಬೆಳಗಿದ ಜ್ಞಾನದ ದೀವಿಗೆ ಜಗತ್ತಿನ ಅದೆಷ್ಟು ಯುವಕ–ಯುವತಿಯರ ಬದುಕಿನಲ್ಲಿ ಹೊಸ ಚೈತನ್ಯದ ಚಿಲುಮೆಯನ್ನು ತುಂಬಿದವರು.

ಇವರದು ಪ್ರಭಾವಶಾಲಿ ವ್ಯಕ್ತಿತ್ವ ಹಿಂದೂ ಧರ್ಮದ ಬಗ್ಗೆ ಪಾಶ್ಚಿಮಾತ್ಯ ಜಗತ್ತನ್ನು ಬೆಳಗಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಅವರು 1893 ರಲ್ಲಿ ಚಿಕಾಗೋದಲ್ಲಿ ಧರ್ಮಗಳ ಸಂಸತ್ತಿನಲ್ಲಿ ಹಿಂದೂ ಧರ್ಮವನ್ನು ಪ್ರತಿನಿಧಿಸಿದರು ಮತ್ತು ಈ ಕಾರಣದಿಂದಾಗಿ ಭಾರತದ ಅಜ್ಞಾತ ಸನ್ಯಾಸಿ ಪ್ರಸಿದ್ಧಿಗೆ ಬಂದರು.

ಸ್ವಾಮಿ ವಿವೇಕಾನಂದರು 1 ಮೇ 1897 ರಂದು ರಾಮಕೃಷ್ಣ ಮಿಷನ್ ಅನ್ನು ಒಬ್ಬರ ಸ್ವಂತ ಉದ್ಧಾರಕ್ಕಾಗಿ ಮತ್ತು ಲೋಕ ಕಲ್ಯಾಣಕ್ಕಾಗಿ ಸ್ಥಾಪಿಸಿದರು. ಎಲ್ಲ ಧರ್ಮಗಳ ತಳಹದಿಯಾದ ಹೆಮ್ಮೆಯ ಹಿಂದೂ ಧರ್ಮದ ಪರವಾಗಿ ಬಂದಿರುವೆ ಎಂದು ಹೇಳಿ ಭಾರತದ ಹಿಂದೂ ಧರ್ಮದ ಸದಾ ಜರಿಯುತ್ತಿದ್ದ ವಿದೇಶಿ ಕ್ರಿಶ್ಚಿಯನ್ನ ಮಿಷಿನರಿಗಳಿಗೆ ಮುಸ್ಲಿಂ ಮತಾಂಧರಿಗೆ ಹೊಡೆದಂತೆ ಹೇಳಿದ ಸ್ವಾಮೀಜಿ ಭಾರತದ ಮೇಲೆ ಬ್ರಿಟಿಷರ ದಬ್ಬಾಳಿಕೆ ಬಗ್ಗೆ ಎಷ್ಟೊಂದು ಚಿಂತಿಸಿದವರು.

ವಿವೇಕಾನಂದರು ಭಾರತದ ಸಾಂಸ್ಕೃತಿಕ ರಾಯಭಾರಿ, ಅವರೇ ಮೊದಲು ಸಾಗರ ದಾಟಿ ವಿದೇಶಿ ನೆಲದಲ್ಲಿ ಭಾರತದ ಭವ್ಯತೆಯ ಹಿಂದೂ ಧರ್ಮದ ಶ್ರೇಷ್ಠತೆಯ ವೇದ, ಉಪನಿಷತ್ತು, ಭಗವದ್ಗೀತೆಯ ಮಹತ್ವ ಚಿಂತನೆಗಳ ಜಗತ್ತಿಗೆ ತಮ್ಮ ಶ್ರೇಷ್ಠ ಭಾಷಣದ ಮೂಲಕ ಸಾರಿದವರು. **"ಏಳಿ ಎದ್ದೇಳಿ, ಗುರಿ ಮುಟ್ಟುವ ತನಕ ನಿಲ್ಲದಿರಿ"** ಎಂಬ ವಿವೇಕವಾಣಿ ಮೂಲಕ ವೀರ ಯೋಧರಿಗೆ ಸ್ಫೂರ್ತಿ ತುಂಬಿದವರು.

ಈಗ ವಿವೇಕಾನಂದರ ನೇರ ದಿಟ್ಟ ನುಡಿ, ದಿಟ್ಟತನ ನೋಡಿ ಎಂತವರಾದರು ದಂಗಾಗಲೇಬೇಕು. ಜೀವನದ ಹೊಸ ದಾರಿಗೆ ಅಣಿಯಾಗಲೇಬೇಕು ಅಂತಹ ಜೀವ ವಿವೇಕಾನಂದರು. ಈಗಲೂ ಅವರ ಸಂದೇಶಗಳು ಎಲ್ಲರಿಗೂ ಸ್ಫೂರ್ತಿ ನೀಡುತ್ತದೆ. ಅದನ್ನೇ ನಮ್ಮ ಬದುಕಿಗೆ ಅಳವಡಿಸಿಕೊಂಡರೆ ನಮ್ಮ ಜೀವನ ಸಾರ್ಥಕವಾಗುತ್ತದೆ.

# ಸ್ವಾಮಿ ವಿವೇಕಾನಂದರ ಕನಸಿನ ರಾಷ್ಟ್ರ ಯುವಜನತೆಯಿಂದ ನಿರ್ಮಾಣ ಸಾಧ್ಯ.

– ಶ್ರೀಮತಿ ಸವಿತಾ ಎನ್.ಇ, ಕಿರಿಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

**Theme : Transforming Food Systems: Youth Innovation For Human And Planetary Health**

ಆರೋಗ್ಯ ಮತ್ತು ವಿದ್ಯಾವಂತ ಯುವಜನತೆ ಒಂದು ದೇಶದ ಪ್ರಗತಿಯ ಪಥದಲ್ಲಿ ದೇಶಕ್ಕೆ ಮಹಾನ್ ಕೊಡುಗೆ. ಆದರೆ ದೇಶದ ಅಭಿವೃದ್ಧಿಗೆ ಸರಿಯಾದ ರೀತಿಯಲ್ಲಿ ಮುಂದುವರೆದರೆ ಅದು ಎಲ್ಲರ ಭಾಗ್ಯ. ಯುವಕರನ್ನು ಉದ್ದೇಶಿಸಿ ಅವರು ಹೇಳಿದ 'ಏಳಿರಿ, ಎಚ್ಚರಗೊಳ್ಳಿರಿ, ಗುರಿ ಮುಟ್ಟುವವರೆಗೂ ನಿಲ್ಲದಿರಿ' ಎಂಬ ಸಂದೇಶವನ್ನು ಕೇಳದ ಭಾರತೀಯರೇ ಇಲ್ಲ. ನಾವೆಲ್ಲ ಈ ಘೋಷವಾಕ್ಯವನ್ನು ಶಾಲೆ ಕಾಲೇಜುಗಳಲ್ಲಿ ಓದಿ– ಕಲಿತಿದ್ದೆವು, ಇಂದಿಗೂ ಈ ವಾಕ್ಯ ನಮ್ಮ ಕಿವಿ ಮೇಲೆ ಬಿದ್ದರೆ, ತಟ್ಟನೆ ನೆನಪಾಗುವುದು ಸ್ವಾಮಿ ವಿವೇಕಾನಂದರು. ಸ್ವಾಮಿ ವಿವೇಕಾನಂದರು 1863ರ ಜನವರಿ 12ರಂದು ಕೊಲ್ಕತ್ತಾದಲ್ಲಿ ಜನಿಸಿದರು. ಇವರ ಮೂಲ ಹೆಸರು ನರೇಂದ್ರನಾಥ ದತ್ತ. ಶ್ರೀಮಂತ ಬಂಗಾಳಿ ಕುಟುಂಬದಲ್ಲಿ ಜನಿಸಿದ್ದ ನರೇಂದ್ರನಾಥರು ಬಳಿಕ ರಾಮಕೃಷ್ಣ ಪರಮಹಂಸರ ಶಿಷ್ಯರಾದರು. ಸದಾ ಯುವಜನತೆಯನ್ನು ಹುರಿದುಂಬಿಸುತ್ತಿದ್ದ ಸ್ವಾಮಿ ವಿವೇಕಾನಂದರು ಆಧ್ಯಾತ್ಮದತ್ತ ಹೆಚ್ಚಿನ ಒಲವನ್ನು ಹೊಂದಿದ್ದರು. ಹೀಗಾಗಿ ಎಲ್ಲಾ ಲೌಕಿಕ ಸುಖಗಳನ್ನು ತ್ಯಜಿಸಿ ಸನ್ಯಾಸಿಯಾದರು.

1984ರಲ್ಲಿ ಭಾರತ ಸರ್ಕಾರವು ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ರಾಷ್ಟ್ರೀಯ ಯುವ ದಿನ ಅಥವಾ ಯುವ ದಿನವನ್ನಾಗಿ ಆಚರಿಸಲು ನಿರ್ಧರಿಸಿತು. ಅಂತೆಯೇ 1985ರಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಯುವ ದಿನವನ್ನಾಗಿ ಆಚರಿಸಲಾಯಿತು. ಅಂದಿನಿಂದ ಪ್ರತಿವರ್ಷ ಈ ಯುವ ದಿವಸ್ ಆಚರಣೆ ಮಾಡಿಕೊಂಡು ಬರಲಾಗುತ್ತಿದೆ. ಮಹಾಚೇತನ ಮತ್ತು ವೀರ ಸನ್ಯಾಸಿ ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ರಾಷ್ಟ್ರೀಯ ಯುವ ದಿನವನ್ನಾಗಿ ಆಚರಿಸಲಾಗುತ್ತದೆ. ಯುವಕರ ಪಾಲಿನ ಸ್ಫೂರ್ತಿಯ ಚಿಲುಮೆ, ಭವ್ಯ ಭಾರತದ ಹೆಮ್ಮೆಯ ಪುತ್ರ ಸ್ವಾಮಿ ವಿವೇಕಾನಂದರ ತತ್ವಾದರ್ಶಗಳು ಎಂದೆಂದಿಗೂ ಜೀವಂತ. ಪೂರ್ವದ ವಿಶಾಲ ಆಧ್ಯಾತ್ಮಿಕ ಚಿಂತನೆ ಮತ್ತು ಪಶ್ಚಿಮದ ಸಂಕಲ್ಪ ಶಕ್ತಿಯ ಸಂಕೇತವಾಗಿ ನಿಂತ ಮೇರು ವ್ಯಕ್ತಿತ್ವ ಸ್ವಾಮಿ ವಿವೇಕನಂದರು ಯುವಜನತೆಗೆ ಆದರ್ಶಪ್ರಾಯವಾಗಿ ಉಳಿದಿದ್ದಾರೆ.

1893ರಲ್ಲಿ ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ್ದ ಭಾಷಣ ಇಂದಿಗೂ ಪ್ರಸ್ತುತ. ಆ ಭಾಷಣದಿಂದ ಇಡೀ ವಿಶ್ವವೇ ಭಾರತವನ್ನು ನೋಡುವ ದೃಷ್ಟಿಯೇ ಬದಲಾಯಿತು. ಯುವಜನತೆಯಲ್ಲಿ ಹೊಸ ರೀತಿಯಲ್ಲಿ ಆಗುವಂತಹ ಬದಲಾವಣೆ! ದೇಶದಲ್ಲಿ ಹೊಸದು ಏನು ಮಾಡುವುದು ಎಂಬ ಚಿಂತೆ! ತ್ಯಾಗ ಮತ್ತು ಸೇವೆ ಸ್ವಾಮಿ ವಿವೇಕಾನಂದರು ನಮಗೆ ನೀಡಿದ ಎರಡು ವರಗಳು. ಸಾರ್ವಜನಿಕರ ಬೆವರಿನಿಂದ ಶಿಕ್ಷಣ ಪಡೆದ ನಾವು ಅವನ್ನು ಸಾರ್ವಜನಿಕ ಹಿತಾಸಕ್ತಿಗೆ ಬಳಸಿದಾಗ ಮಾತ್ರ ಅವುಗಳ ಮೌಲ್ಯವರ್ಧನೆಯಾಗುತ್ತದೆ. 'ನಾವು ಇರುವುದೇ ನಮ್ಮ ಹಳ್ಳಿಯ ಏಳ್ಗೆಗಾಗಿ, ನಮ್ಮವರ ಬದುಕಿನ ಉನ್ನತಿಗಾಗಿ' ಎಂಬ ಉದಾತ್ತ ಭಾವನೆಯ ಮೂಲಕ ಸಮಾಜದ ಒಳಿತಿನಲ್ಲೇ ತನ್ನ ಶ್ರೇಯಸ್ಸೂ ಅಡಗಿದೆ ಎಂಬುದನ್ನು ಮನಗಾಣಬೇಕು.

ಇವತ್ತಿನ ಯುವಜನತೆ ದುಶ್ಚಟವನ್ನು ಬೆಳೆಸಿಕೊಂಡು ತಮ್ಮ ಜೀವನವನ್ನು ನರಕದ ಹಾದಿಯಲ್ಲಿ ಕೊಂಡೊಯ್ಯುತ್ತಿದ್ದಾರೆ ಎಂಬ ಬೇಸರ ಇವತ್ತು ಎಲ್ಲರನ್ನು ಕಾಡುತ್ತಿದೆ. ಇದು ಇಂದಿನ ಯುವಜನತೆಯ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ಒಳ್ಳೆಯ ಕಡೆ ಗಮನ ಹರಿಸಿ ನಮ್ಮ ಶಕ್ತಿ ಉತ್ತಮ ಕೆಲಸಕ್ಕೆ ಉಪಯೋಗಿಸುವಂತಾಗಬೇಕು. ಪ್ರತಿಯೊಬ್ಬರು ಆತ್ಮವಿಶ್ವಾಸದಿಂದ ಧೈರ್ಯದಿಂದ ಬದುಕಿದರೆ ಖಂಡಿತವಾಗಿಯೂ ನಮ್ಮ ದೇಶವನ್ನು ಪ್ರಗತಿಯ ಮೆಟ್ಟಲನ್ನು ಏರುತ್ತೇವೆಂಬುದಕ್ಕೆ ಯಾವ ಸಂಶಯವೂ ಇಲ್ಲ. ನಾವು ಮಾಡುವಂತಹ ಕೆಲಸಗಳು ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ಮಾಡಿದರೆ ಖಂಡಿತವಾಗಿಯೂ ನಾವು ಯಶಸ್ವಿನ ಮೆಟ್ಟಲು ನೋಡಬಹುದು. ಯುವಜನತೆಗೆ ಸಿಕ್ಕಿರುವ ಅವಕಾಶ ಅವರ ಜೀವನದಲ್ಲಿ ಪ್ರತಿ ಒಂದು ಕ್ಷಣನೂ ಅಮೂಲ್ಯವಾದದ್ದು. ಅವಕಾಶ ವ್ಯರ್ಥ ಮಾಡಿಕೊಳ್ಳದೆ ಒಳ್ಳೆಯ ರೀತಿಯಲ್ಲಿ ನಾವು ಅದನ್ನ ಉಪಯೋಗ ಮಾಡೋಣ. ಸಮಾಜದ ಸೇವೆ ಮಾಡುವುದರಲ್ಲಿ ನಾವು ಒಂದು ಹೆಜ್ಜೆ ಮುಂದೆ ಬರೋಣ, ಯುವಕರೇ! ಯುವತಿಯರೇ! ಒಳ್ಳೆಯ ಕೆಲಸ ಮಾಡುವುದರ ಮೂಲಕ ದೇಶದ ಅಭಿವೃದ್ಧಿಗಾಗಿ ದುಡಿಯೋಣ, ನಮ್ಮಲ್ಲಿ ಶಕ್ತಿ ಸಾಮರ್ಥ್ಯಗಳು ತುಂಬಿರುವಾಗಲೇ ಅದರ ಸಂಪೂರ್ಣ ವಿನಿಯೋಗವಾಗಬೇಕು. ಮಾನಸಿಕ, ದೈಹಿಕ ಹಾಗೂ ಬೌದ್ಧಿಕ ಶಕ್ತಿಗಳೆಲ್ಲವೂ ನಿಃಸ್ವಾರ್ಥ ಸೇವೆಗೆ ಮುಡಿಪಾಗಿ ಹಲವರ ಒಳಿತಿಗೆ ಕಾರಣವಾಗುವುದಾದರೆ ನಾವಿರುವ ತಾಣವನ್ನೇ ಸ್ವರ್ಗವಾಗಿಸಬಹುದು. ಯುವಜನತೆ ಈ ನಿಟ್ಟಿನಲ್ಲಿ ದೃಢನಿಶ್ಚಯ ಹಾಗೂ ಸಂಕಲ್ಪದಿಂದ ಮುಂದುವರಿದರೆ ಬಹಳ ಬೇಗನೇ ದೇಶವನ್ನು ವಿಶ್ವಮಾನ್ಯತೆಯೆಡೆಗೆ ಕೊಂಡೊಯ್ಯಬಹುದು.ಈ ದೇಶದ ಹಾಗೂ ಸ್ವಾಮಿ ವಿವೇಕನಂದರ ಕನಸು ನನಸು ಮಾಡೋಣ, ಈ ದೇಶ ಇನ್ನು ಕೂಡ ಅಭಿವೃದ್ಧಿಯ ಹಾದಿಯಲ್ಲಿ ಕೊಂಡ್ಯೊತ್ತೇವೆ ಎಂಬ ಶಪಥವನ್ನು ನಾವು ಇಂದು ಮಾಡೋಣ, ಹಾಗೆಯೇ ದೇಶದಲ್ಲಿ ಶಾಂತಿ, ಏಕಾಗ್ರತೆ, ನೆಮ್ಮದಿ ಹಾಗೂ ಸಮಾಧಾನವನ್ನು ಆಶಿಸೋಣ.

